# ಕರ್ನಾಟಕ ವಿಕಾಸ

ಜನವರಿ 2011



ಹೊಸ ವರ್ಷದ
ಶುಭಾಶಯಗಳು

ಸಮ ಶ್ರಮ - ಸಮ ಕೂಲಿ
ಉದ್ಯೋಗ ಖಾತರಿ ಯೋಜನೆ ನಿಯಮ





ಮಾನ್ಯ ಗ್ರಾ ಮತ್ತು ಪಂ.ರಾಜ್ ಸಚಿವರಾದ
ಶ್ರೀ ಜಗದೀಶ್ ಶೆಟ್ಟರ್‌ರವರಿಗೆ
ಅಭಿವೃದ್ಧಿ ವಿವರಣೆಗಳನ್ನು ನೀಡುತ್ತಿರುವ ಬಾಗಲಕೋಟೆ
ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಡಾ. ಜೆ.ಸಿ. ಪ್ರಕಾಶ್

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# 2011

| | ಜನವರಿ | | | | | ಫೆಬ್ರವರಿ | | | | | ಮಾರ್ಚ್ | | | | |
|---|---|---|---|---|---|---|---|---|---|---|---|---|---|---|---|
| ಭಾನು | 30 | 2 | 9 | 16 | 23 | | 6 | 13 | 20 | 27 | | 6 | 13 | 20 | 27 |
| ಸೋಮ | 31 | 3 | 10 | 17 | 24 | | 7 | 14 | 21 | 28 | | 7 | 14 | 21 | 28 |
| ಮಂಗಳ | | 4 | 11 | 18 | 25 | 1 | 8 | 15 | 22 | | 1 | 8 | 15 | 22 | 29 |
| ಬುಧ | | 5 | 12 | 19 | 26 ಗಣರಾಜ್ಯೋತ್ಸವ | 2 | 9 | 16 ಈದ್-ಮಿಲಾದ್ | 23 | | 2 ಮಹಾಶಿವರಾತ್ರಿ | 9 | 16 | 23 | 30 |
| ಗುರು | | 6 | 13 | 20 | 27 | 3 | 10 | 17 | 24 | | 3 | 10 | 17 | 24 | 31 |
| ಶುಕ್ರ | | 7 | 14 | 21 | 28 | 4 | 11 | 18 | 25 | | 4 | 11 | 18 | 25 | |
| ಶನಿ | 1 | 8 | 15 ಸಂಕ್ರಾಂತಿ | 22 | 29 | 5 | 12 | 19 | 26 | | 5 | 12 | 19 | 26 | |

| | ಏಪ್ರಿಲ್ | | | | | ಮೇ | | | | | ಜೂನ್ | | | | |
|---|---|---|---|---|---|---|---|---|---|---|---|---|---|---|---|
| ಭಾನು | | 3 | 10 | 17 | 24 | 1 ಕಾರ್ಮಿಕರ ದಿನ | 8 | 15 | 22 | 29 | | 5 | 12 | 19 | 26 |
| ಸೋಮ | | 4 ಯುಗಾದಿ | 11 | 18 | 25 | 2 | 9 | 16 | 23 | 30 | | 6 | 13 | 20 | 27 |
| ಮಂಗಳ | | 5 | 12 | 19 | 26 | 3 | 10 | 17 | 24 | 31 | | 7 | 14 | 21 | 28 |
| ಬುಧ | | 6 | 13 | 20 | 27 | 4 | 11 | 18 | 25 | | 1 | 8 | 15 | 22 | 29 |
| ಗುರು | | 7 | 14 ಅಂಬೇಡ್ಕರ್ ಜ. | 21 | 28 | 5 | 12 | 19 | 26 | | 2 | 9 | 16 | 23 | 30 |
| ಶುಕ್ರ | 1 | 8 | 15 | 22 ಗುಡ್‌ಫ್ರೈಡೆ | 29 | 6 ಬಸವ ಜಯಂತಿ | 13 | 20 | 27 | | 3 | 10 | 17 | 24 | |
| ಶನಿ | 2 | 9 | 16 ಮಹಾವೀರ ಜ. | 23 | 30 | 7 | 14 | 21 | 28 | | 4 | 11 | 18 | 25 | |


ಸಾರ್ವತ್ರಿಕ ರಜಾ ದಿನಗಳನ್ನು ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ



# ಕರ್ನಾಟಕ ವಿಕಾಸ


**ಜನವರಿ 2011**

ಸಂಪುಟ : 52 ಸಂಚಿಕೆ : 2


ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು

**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ|| ಎಂ.ಎಸ್. ಮಂಜುನಾಥ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**

## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಪಿ. ರವಿಕುಮಾರ್ |
| 7 | ಬದುಕುವ ಮಾತು | – ಡಾ. ಪಾಟೀಲ ಪುಟ್ಟಪ್ಪ |
| 8 | ಕಾವ್ಯ ವಿಕಾಸ | – ಎನ್. ಕೃಷ್ಣಪ್ಪ ಕೋಡಿಪಾಳ್ಯ |
| 9 | ನುಡಿ ಮುತ್ತು | – ಆರ್.ಎನ್. ತುಳಸೀರಾಮ್ |
| 10 | ಆರೋಗ್ಯ | – ಡಾ. ಬಿ. ರಮಣರಾವ್ |
| 11 | ಮುಖಪುಟ ಲೇಖನ | – ಡಾ. ಎಂ.ಎಸ್. ಮಂಜುನಾಥ |
| 22 | ಕವಿಯ(ಕ್ಷ) ಪ್ರಶ್ನೆಗಳು | – ಮೂವೇರ ರೇಖಾ ಪ್ರಕಾಶ್ |
| 23 | ನುಡಿ ನಿರ್ಮಲ | |
| 27 | ಚಿಂತನೆ | – ಎನ್.ಆರ್. ಪಾಟೀಲ |
| 31 | ಲೆಕ್ಕಪತ್ರ | – ಎ.ಎಸ್. ಶಿವಾನಂದಾಚಾರ್ಯ |
| 33 | ಗ್ರಾಮ ಸ್ವರಾಜ್ | |
| 36 | ಲೇಖನ | – ಎಸ್.ಸಿ. ದೇವರಮನಿ |
| 40 | ಸುತ್ತೋಲೆಗಳು | |



**ವಾರ್ಷಿಕ ಚಂದಾ :**

ವ್ಯಕ್ತಿಗಳಿಗೆ ರೂ. 50/–

ಸಂಸ್ಥೆಗಳಿಗೆ ರೂ. 60/–


ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
**email:karnatakavikasa@ymail.com**

ಮಾನ್ಯರೇ,

ಡಿಸೆಂಬರ್ ಸಂಚಿಕೆ 'ಸಚಿವಾಲಯದ ಸಂದೇಶ'ದಲ್ಲಿ ಶ್ರೀ ಪಿ. ರವಿಕುಮಾರ್ ಸಾರ್ ರವರ ಗ್ರಾಮದ ಸ್ವಚ್ಛತೆಯ ಬಗ್ಗೆ ಲೇಖನ ಔಚಿತ್ಯಪೂರ್ಣವಾಗಿತ್ತು. ಅದೇ ರೀತಿ ಡಾ॥ ಪಾ.ಪು.ರವರ 'ಬದುಕುವ ಮಾತು' ಪತ್ರಿಕೆಗೆ ಮೊದಲಿನಿಂದಲೂ ಒಂದು ಮೌಲ್ಯಧಾರಿತ ವಿಭಾಗವಾಗಿದೆ.

**– ಪ್ರಹ್ಲಾದ ವೀರಪ್ಪ ಬಡಿಗೇರ**

ಮನೆ ನಂ. 1601, ಬಡಿಗೇರ ಓಣಿ, ಎಂ.ಕೆ. ಹುಬ್ಬಳ್ಳಿ ಗ್ರಾಮ – 591 118,
ಬೈಲಹೊಂಗಲ ತಾ॥, ಬೆಳಗಾವಿ ಜಿಲ್ಲೆ.

ಡಿಸೆಂಬರ್ ತಿಂಗಳ 'ಕರ್ನಾಟಕ ವಿಕಾಸ' ಪತ್ರಿಕೆಯ ಕುಡಿಯುವ ನೀರಿನ ಮೂಲಗಳ ಸ್ವಚ್ಛತೆಯನ್ನು ಪರಿಣಾಮಕಾರಿಯಾಗಿ ಬಿಂಬಿಸಿ ಜಾಗೃತಗೊಳಿಸುವ ಮುಖಪುಟ ಅಂದವಾಗಿ ಹೃನ್ಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಡಾ. ಪಾ.ಪು. ಅವರ 'ಬದುಕುವ ಮಾತು' ಅತೀ ಮಾರ್ಮಿಕವಾಗಿ ಮೂಡಿಬರುತ್ತಿದ್ದು ಕೇವಲ ಒಂದೇ ಪುಟದಲ್ಲಿ ತರ್ಕಬದ್ಧವಾಗಿ, ಪರಿಣಾಮಕಾರಿಯಾಗಿ ಮೂಡಿಬರುತ್ತಿದೆ.

**– ಪ್ರೊ. ಜಯವೀರ ಎ.ಕೆ.**

ಅಂಚೆ : ಖೇಮಲಾಪುರ – 591311,
ತಾ. ರಾಯಭಾಗ, ಜಿ. ಬೆಳಗಾವಿ.

ಡಿಸೆಂಬರ್ ತಿಂಗಳ 'ಕರ್ನಾಟಕ ವಿಕಾಸ' ಪತ್ರಿಕೆಯ 'ಗ್ರಾಮೀಣ ಪರಿಸರ ಸ್ವಚ್ಛತೆಯಿಂದಿರಲಿ ನಮ್ಮ ನಿಮ್ಮೆಲ್ಲರ ಜೀವನ ಹಸನಾಗಿರಲಿ' ಮುಖಪುಟ ತುಂಬಾ ಸೊಗಸಾಗಿದೆ. 2011ರ ಹೊಸ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ಸಂದರ್ಭದಲ್ಲಿ 'ಕರ್ನಾಟಕ ವಿಕಾಸ' ಪತ್ರಿಕೆಯು ಹೊಸ ವಿನ್ಯಾಸ, ಹೊಸ ಲೇಖನಗಳು ಒಟ್ಟಾರೆ ಹೊಸತನದಿಂದ ಕೂಡಿ ಬರಲಿ ಎಂದು ನಾನು ಹಾರೈಸುತ್ತೇನೆ. ಪತ್ರಿಕಾ ಬಳಗಕ್ಕೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

**– ಗಿರೀಶ ಕ. ಕುಲಕರ್ಣಿ**

'ಶೇಷಾಚಲ ನಿಲಯ',
ಸೆಕ್ಟರ್ ನಂ. 57, ಮನೆ ನಂ. M–43, ಪ್ರಸನ್ನ ವೆಂಕಟ ಕಾಲೋನಿ,
ಗಾರ್ಡನ್ ಹತ್ತಿರ, ನವನಗರ, ಬಾಗಲಕೋಟೆ – 587 103.

ಕರ್ನಾಟಕ ವಿಕಾಸ ಪತ್ರಿಕೆಯ ಡಿಸೆಂಬರ್ ತಿಂಗಳ ಮುಖಪುಟ ಅರ್ಥಗರ್ಭಿತವಾಗಿದೆ. ಜನರ ಆಶೋತ್ತರಗಳನ್ನು ಬಿತ್ತರಿಸುವ ಪತ್ರಿಕೆಯಾಗಲಿ ಎಂಬುದೇ ನನ್ನ ಆಶಯ.

**– ಉಮೇಶ ಎಸ್.ಎಸ್.**

S/o. ಸಿದ್ರಾಮಪ್ಪ ಎಸ್.ಬಿ.
ಸೊಲ್ಲಾಪುರ, ತರೀಕೆರೆ ತಾ॥, ಚಿಕ್ಕಮಗಳೂರು ಜಿಲ್ಲೆ.

ಪತ್ರಿಕೆಯ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಡಾ॥ ಎಚ್.ಆರ್. ಉಮಾರವರ 'ಮಹಿಳೆಗೆ ಇನ್ನೂ ಮರೀಚಿಕೆಯಾದ ಆಹಾರ ಭದ್ರತೆ' ಲೇಖನ ಬಹಳಷ್ಟು ಮಾಹಿತಿ ಪೂರ್ಣವಾಗಿ ಮೂಡಿಬಂದಿದೆ. ಮೌಲಿಕ ಲೇಖನಗಳು ಹೀಗೇ ಪ್ರಕಟವಾಗುತ್ತಿರಲಿ.

**– ಆಕಾಶ ಲೋಖಂಡೆ**

ಇಂದಿರಾನಗರ, ಅಫಜಲಪೂರ, ತಾ॥ ಅಫಜಲಪೂರ, ಜಿ॥ ಗುಲಬರ್ಗಾ.

'ಗ್ರಾಮೀಣ ಪರಿಸರ ಸ್ವಚ್ಛತೆಯಿಂದಿರಲಿ, ನಮ್ಮ ನಿಮ್ಮೆಲ್ಲರ ಜೀವನ ಹಸನಾಗಿರಲಿ' ಶೀರ್ಷಿಕೆಯೊಂದಿಗೆ ಡಿಸೆಂಬರ್ 2010 'ಕರ್ನಾಟಕ ವಿಕಾಸ' ಸಂಚಿಕೆ ವರ್ಣರಂಜಿತವಾಗಿತ್ತು. 'ಬದುಕುವ ಮಾತು' ಶೀರ್ಷಿಕೆಯಡಿ ಡಾ॥ ಪಾಟೀಲ ಪುಟ್ಟಪ್ಪನವರ ಲೇಖನ ಅರ್ಥಗರ್ಭಿತವಾಗಿತ್ತು. ಪತ್ರಿಕಾ ಬಳಗಕ್ಕೆ ವಂದನೆಗಳು.

**– ಎಂ.ಜೆ. ಜಮಾದಾರ**

ಕರ ವಸೂಲಿಗಾರರು,
ಗ್ರಾಮ ಪಂಚಾಯತ್ ಯರಗೋಳ, ತಾಲ್ಲೂಕು ಜಿಲ್ಲೆ ಯಾದಗಿರಿ – 585218.

ಸಚಿವಾಲಯದಿಂದ ಸಂದೇಶ

ಪಿ. ರವಿ ಕುಮಾರ್
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

ಬಂಧುಗಳೇ,

# ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ....

ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕರ್ನಾಟಕ ರಾಜ್ಯದಲ್ಲಿ 2006–07ನೇ ಸಾಲಿನಲ್ಲಿ ಮೊದಲನೇ ಹಂತದಲ್ಲಿ ಬೀದರ್, ಚಿತ್ರದುರ್ಗ, ದಾವಣಗೆರೆ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪ್ರಾರಂಭವಾಗಿ ತದನಂತರ ಎರಡನೇ ಹಂತದಲ್ಲಿ ಬೆಳಗಾಂ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಾರಂಭಿಸಿ ನಂತರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರಾರಂಭವಾಗಿರುತ್ತದೆ.

2006–07ನೇ ಸಾಲಿನಲ್ಲಿ ರೂ. 248 ಕೋಟಿ ಅನುದಾನವನ್ನು ಬಳಸಿಕೊಂಡು 5.45 ಲಕ್ಷ ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಲಾಗಿತ್ತು. 2007–08ನೇ ಸಾಲಿನಲ್ಲಿ ರೂ. 236 ಕೋಟಿ ಅನುದಾನವನ್ನು ಬಳಸಿಕೊಂಡು 5.49 ಲಕ್ಷ ಕುಟುಂಬಗಳಿಗೆ ಉದ್ಯೋಗವನ್ನು ನೀಡಲಾಗಿತ್ತು. 2008–09ನೇ ಸಾಲುನಲ್ಲಿ ರೂ.358 ಕೋಟಿ ಅನುದಾನವನ್ನು ಬಳಸಿಕೊಂಡು 8.96 ಲಕ್ಷ ಕುಟುಂಬಗಳಿಗೆ ಉದ್ಯೋಗ ನೀಡಲಾಗಿತ್ತು. 2009–10ನೇ ಸಾಲಿನಲ್ಲಿ ರೂ.2262 ಕೋಟಿ ಅನುದಾನವನ್ನು ಬಳಸಿಕೊಂಡು 33 ಲಕ್ಷ ಕುಟುಂಬಗಳಿಗೆ ಉದ್ಯೋಗ ನೀಡಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಡಿಸೆಂಬರ್ ಮಾಹೆಯ ಮಧ್ಯ ಕಾಲದಲ್ಲಿ ರೂ. 678 ಕೋಟಿ ಅನುದಾನವನ್ನು ಬಳಸಿಕೊಂಡು 6.54 ಲಕ್ಷ ಕುಟುಂಬಗಳಿಗೆ ಉದ್ಯೋಗ ಒದಗಿಸಲಾಗಿದೆ.

ಯೋಜನೆಯ ಅನುಷ್ಠಾನದಲ್ಲಿ ಎಲ್ಲಾ ಹಂತದ ಅಧಿಕಾರಿಗಳು ಈಗಾಗಲೇ ಹೆಚ್ಚಿನ ಅನುಭವವನ್ನು ಹೊಂದಿರುತ್ತಾರೆ. ಆದರೂ ಸಹ ಕೆಲವು ಜಿಲ್ಲೆಗಳಲ್ಲಿ ಉದ್ಯೋಗ ಅರಸಿ ಬಂದ ಕುಟುಂಬಗಳಿಗೆ ತಕ್ಷಣವೇ ಉದ್ಯೋಗ ಒದಗಿಸದೇ ಯೋಜನೆಯ ಮೂಲ ಗುರಿಯನ್ನು ಮುಟ್ಟಲು ತೊಂದರೆಯಾಗಿರುತ್ತದೆ. ಆದುದರಿಂದ ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು, ಕಾರ್ಯದರ್ಶಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯಕ್ರಮ ಅಧಿಕಾರಿ ಮತ್ತು ಜಿಲ್ಲಾ ಸಮನ್ವಯ ಅಧಿಕಾರಿಗಳು, ಈ ಎಲ್ಲಾ ಅಧಿಕಾರಿಗಳ ಮಹತ್ವದ ಕಾರ್ಯವೇನೆಂದರೆ ಉದ್ಯೋಗ ಅರಸಿ ಬರುವವರಿಗೆ ಯಾವುದೇ ವಿಳಂಬವಿಲ್ಲದೇ ಉದ್ಯೋಗವನ್ನು ಒದಗಿಸುವುದು ಹಾಗೂ ಒಂದು ವಾರದೊಳಗೆ ಅವರಿಗೆ ನೀಡಬೇಕಾದ ಕೂಲಿ ಹಣವನ್ನು ಅವರಿಗೆ ವಿಳಂಬವಿಲ್ಲದೆ ತಲುಪುವಂತೆ ಮಾಡುವುದು. ಈ ಎರಡೂ ಕೆಲಸಗಳಿಗೆ ಹೆಚ್ಚಿನ ನಿಗಾ ವಹಿಸಿದರೆ ಈ ಯೋಜನೆಯು ಹೆಚ್ಚಿನ ವೇಗದಲ್ಲಿ ಅನುಷ್ಠಾನವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ನಾನು ಈ ಮೂಲಕ ಎಲ್ಲಾ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳನ್ನು ಹಾಗೂ ಅಧಿಕಾರಿಗಳಿಗೆ ತಿಳಿಸುವುದೇನೆಂದರೆ ಯಾವುದೇ ಕೂಲಿಕಾರರು ಗ್ರಾಮ ಪಂಚಾಯತಿಗೆ ಉದ್ಯೋಗವನ್ನು ಕೇಳಿಕೊಂಡು ಬಂದರೆ ಅತ್ಯಂತ ಹೆಚ್ಚಿನ ಕಾಳಜಿ ವಹಿಸಿ ಅವರಿಗೆ ತಕ್ಷಣವೇ ಉದ್ಯೋಗ ನೀಡಲು ಕ್ರಮ ಜರುಗಿಸುವುದು. ಮತ್ತು ಈಗಾಗಲೇ ಎಲ್ಲಾ ಪಂಚಾಯತಿಗಳಿಗೆ ನೀಡಿರುವ ಹಣದಲ್ಲಿ ವಿಳಂಬವಿಲ್ಲದೇ ಕೂಲಿಯ ಮೊತ್ತವನ್ನು ಬ್ಯಾಂಕ್ ಖಾತೆಗಳ ಮೂಲಕ ಕೂಲಿಕಾರರಿಗೆ ಪಾವತಿಸುವುದು.

ಯೋಜನೆಯ ಆಯಾಮವನ್ನು ವಿಸ್ತರಿಸಿ ಇತ್ತೀಚೆಗೆ ಗ್ರಾಮೀಣ ಪ್ರದೇಶದ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಂದು ಕಣವನ್ನು ಕೃಷಿ ಚಟುವಟಿಕೆಗಾಗಿ ನಿರ್ಮಿಸಲು ಅನುಮತಿ ನೀಡಲಾಗಿರುತ್ತದೆ. ಅಲ್ಲದೇ ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಸಹ ರಕ್ಷಣಾ ಗೋಡೆ ನಿರ್ಮಿಸಲು, ಶಾಲಾ ಆವರಣದಲ್ಲಿ ಸಾಮಾಜಿಕ ಅರಣ್ಯ ಅಭಿವೃದ್ಧಿ ಯೋಜನೆಯಡಿ ಸಸಿಗಳ ನೆಡುವಿಕೆ, ಬಿಸಿ ಊಟದ ಪೌಷ್ಟಿಕ ಆಹಾರಕ್ಕಾಗಿ ತೋಟಗಾರಿಕಾ ಸಸಿಗಳನ್ನು ನೆಡುವುದು ಮುಂತಾದ ಕಾಮಗಾರಿಗಳನ್ನು ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ತೆಗೆದುಕೊಳ್ಳಲು ಅವಕಾಶ ಮಾಡಿಕೊಳ್ಳಲಾಗಿದೆ. **ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶವನ್ನು ಇದೇ ಸಂಚಿಕೆಯ ಸುತ್ತೋಲೆ ವಿಭಾಗದ ಪುಟ ಸಂಖ್ಯೆ 42 ರಲ್ಲಿ ನೀಡಲಾಗಿದ್ದು ಅದರಂತೆ ಕ್ರಮವಹಿಸಲು ಸೂಚಿಸಬಯಸುತ್ತೇನೆ.**

ಪ್ರತಿ ಗ್ರಾಮದಲ್ಲಿ ಲಭ್ಯವಿರುವ ಕಾಮಗಾರಿಗಳ ವಿವರವನ್ನು ಆಯಾ ಗ್ರಾಮಗಳ ಸಾರ್ವಜನಿಕ ಸ್ಥಳಗಳಲ್ಲಿ ಬೋರ್ಡ್ ಮೂಲಕ ನಮೂದಿಸಿದರೆ ಆಯಾ ಗ್ರಾಮಗಳಲ್ಲಿ ಅದೇ ಗ್ರಾಮದ ಕೂಲಿಕಾರರಿಗೆ ಸಿಗಬಹುದಾದ ಕೂಲಿಯ ವಿವರ, ಕೆಲಸದ ವಿವರ ಸಾರ್ವಜನಿಕರಿಗೆ ಸಿಗುತ್ತದೆ.

ಅನುಷ್ಠಾನಾಧಿಕಾರಿಗಳು ಶ್ರಮ ವಹಿಸಿ Job Card ಹೊಂದಿರುವ ಕೂಲಿಕಾರರನ್ನು ಸಂಪರ್ಕಿಸಿ ಅವರು ಕೂಲಿಗೆ ಬರಬಹುದಾದ ದಿನಾಂಕಗಳನ್ನು ಮೊದಲೇ ಸರ್ವೆ ಮಾಡಿಕೊಂಡರೆ ಕೂಲಿ ಕೊಡಲು ಹಾಗೂ ಆ ಗ್ರಾಮದ ಜನರ ಅನುಕೂಲಕ್ಕೆ ತಕ್ಕಂತಹ ಕಾಲದಲ್ಲಿ ಯೋಜನೆಯನ್ನು ಅನುಷ್ಠಾನ ಮಾಡಲು ಮತ್ತು ಸಕಾಲದಲ್ಲಿ ಕೂಲಿಕಾರರಿಗೆ ಕೂಲಿಯನ್ನು ನೀಡಲು ಅನುಕೂಲವಾಗುತ್ತದೆ. ಸಾರ್ವಜನಿಕರಿಗೆ ಪಾರದರ್ಶಕವಾಗಿ ಸಾಮಾಜಿಕ ಲೆಕ್ಕಪರಿಶೋಧನೆಯಲ್ಲಿ ಭಾಗವಹಿಸಲು ಪ್ರೇರೇಪಿಸುವುದು ಮತ್ತು ಕಾಮಗಾರಿಗಳ ಸ್ಥಳದಲ್ಲಿ ಪಾರದರ್ಶಕತೆಯ ಬೋರ್ಡ್ ಹಾಕುವ ಕೆಲಸವನ್ನು ಮಾಡಿ ಸಾರ್ವಜನಿಕರಿಗೆ ಮತ್ತು ಕೂಲಿಕಾರರಿಗೆ ಯೋಜನೆಯ ಬಗ್ಗೆ ಹೆಚ್ಚಿನ ವಿಶ್ವಾಸ ಮೂಡುವಂತೆ ಕೆಲಸ ನಿರ್ವಹಿಸುವುದು ಎಲ್ಲಾ ಅಧಿಕಾರಿ ಸಿಬ್ಬಂದಿ ಹಾಗೂ ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿಯಾಗಿರುತ್ತದೆ.

## ಹೊಸ ಚುನಾಯಿತ ಪ್ರತಿನಿಧಿಗಳಿಗೆ ಸ್ವಾಗತ ....

ಇತ್ತೀಚೆಗಷ್ಟೇ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳು ಮುಗಿದಿದೆ. ಸ್ಥಳೀಯ ಸರ್ಕಾರಗಳ ಆಡಳಿತ ಚುಕ್ಕಾಣಿಯನ್ನು ಹಿಡಿಯಲು ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳಿಂದ ಚುನಾಯಿತ ಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ರಾಜ್ಯ ಸರ್ಕಾರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ತಿದ್ದುಪಡಿ ತಂದಿದ್ದು ಮಹಿಳಾ ಮೀಸಲಾತಿಯ ಪ್ರಮಾಣವನ್ನು ಶೇಕಡ 50ಕ್ಕೆ ಏರಿಸಿರುವ ಹಿನ್ನೆಲೆಯಲ್ಲಿ ಈಗ ಚುನಾಯಿತ ಪ್ರತಿನಿಧಿಗಳಲ್ಲಿ ಸರಿಸುಮಾರು ಅರ್ಧದಷ್ಟು ಹಾಗೂ ಅದಕ್ಕಿಂತ ಹೆಚ್ಚಿಗೆ ಮಹಿಳೆಯರೇ ಆಗಿರುವುದು ಮಹಿಳಾ ಸಮಾನತೆಯ ಅಭಿಯಾನಕ್ಕೆ ಸಂದ ಗೌರವವೇ ಸರಿ.

ರಾಜ್ಯದ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಯತ್ತ ಈ ಎಲ್ಲಾ ಚುನಾಯಿತ ಪ್ರತಿನಿಧಿಗಳು ಕಾಯಾ, ವಾಚಾ, ಮನಸ ಕೆಲಸ ನಿರ್ವಹಿಸುವಂತಾಗಬೇಕು. ಪಾರದರ್ಶಕವಾದ, ಭ್ರಷ್ಟಾಚಾರ ಮುಕ್ತ ಸರ್ಕಾರವನ್ನು ನಡೆಸುವಲ್ಲಿ ಈ ಎಲ್ಲ ಸದಸ್ಯರು ಕೈಜೋಡಿಸಬೇಕು. ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗದೆ ಸರ್ಕಾರದ ಆಶಯಗಳನ್ನು ಹಾಗೂ ಯೋಜನೆಗಳನ್ನು ಬುಡಮಟ್ಟದ ಜನರಿಗೆ ತಲುಪಿಸಿ ತನ್ಮೂಲಕ ಗ್ರಾಮೀಣ ಪರಿಸರವನ್ನು ಅಭಿವೃದ್ಧಿಯ ಕಕ್ಷೆಯತ್ತ ಕೊಂಡೊಯ್ಯುವಿರೆಂಬ ಆಶಾಭಾವನೆ ನನ್ನದು.

**ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು.**

(ಪಿ. ರವಿ ಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಬದುಕುವ ಮಾತು



ಡಾ. ಪಾಟೀಲ ಪುಟ್ಟಪ್ಪ

# ಜಗತ್ತನ್ನು ಪ್ರಭಾವಿಸುವುದು ಪ್ರತಿಯೊಬ್ಬನಿಗೂ ಸಾಧ್ಯವಿದೆ

ಕೆಲ ಜನ ಇರುತ್ತಾರೆ. ಅವರು ಇರುವುದನ್ನು, ಆಡುವುದನ್ನು, ಮಾಡುವುದನ್ನು ಕಂಡರೆ ನಮಗೆ ಅವರ ಬಗೆಗೆ ಆಕರ್ಷಣೆ ಉಂಟಾಗುತ್ತದೆ. ಅಂಥ ಪ್ರಭಾವ ಬೀರುವ ವ್ಯಕ್ತಿ ತಾನಾಗುವುದು ಪ್ರತಿಯೊಬ್ಬನಿಗೂ ಸಾಧ್ಯವಿದೆ.

ಇನ್ನೊಬ್ಬರು ಮಾಡಬೇಕೆಂದು ನಾವು ಅಪೇಕ್ಷಿಸುವುದನ್ನು ಮಾಡಲು ನಾವೇ ಮೊದಲು ಮುಂದಾಗಬೇಕು. ಉಪದೇಶ ಹೇಳುವುದಕ್ಕಿಂತಲೂ, ಉದಾಹರಣೆ ಎನಿಸುವಂತೆ ನಾವು ಬದುಕಬೇಕು.

ಪ್ರಯೋಜನಕಾರೀ ಪ್ರಭಾವ ಬೀರಬೇಕೆನ್ನುವ ಮನುಷ್ಯನು ತನ್ನ ಶಕ್ತಿ ಸಾಮರ್ಥ್ಯಗಳನ್ನು, ಒಳ್ಳೆಯದನ್ನು ನಿರ್ಮಿಸುವುದಕ್ಕೋಸುಗ ಧಾರೆ ಎರೆಯಬೇಕು. ಅವನು ತನ್ನ ಗಮನವನ್ನು ನಿರ್ಮಾಣದ ಕಡೆಗೆ ಇರಿಸಿರಬೇಕಲ್ಲದೆ, ನಿರ್ನಾಮದ ಕಡೆಗೆ ಇರಿಸಿರಬಾರದು. ಅನೇಕರಿಗೆ ಆನಂದವೆನಿಸುವ ಕೆಲಸವನ್ನು ಅವನು ಮಾಡಬೇಕು.

ಜಗತ್ತನ್ನು ಚಲಿಸಬೇಕೆನ್ನುವ ಮನುಷ್ಯನು ತನ್ನಲ್ಲಿ ಮೊದಲು ಚಲನೆಯನ್ನು ತಂದುಕೊಳ್ಳಬೇಕೆಂದು ಸೊಕ್ರೆಟೀಸ್ ಹೇಳುತ್ತಿದ್ದನು. ಸೂರ್ಯನ ಕೆಳಗೆ ನಡೆದು ಹೋಗಬೇಕೆನ್ನುವವನ ನೆರಳು ನೆಲದ ಮೇಲೆ ಬಿದ್ದೇ ಬೀಳುತ್ತದೆ. ಸುಮ್ಮನೆ ಕುಳಿತವನ ನೆರಳು ಕೂಡ ಅವನನ್ನು ಹಿಂಬಾಲಿಸಿ ಹೋಗಲು ಹಿಂಜರಿಯುತ್ತದೆ.

ಪ್ರತಿಯೊಬ್ಬ ಮನುಷ್ಯನೂ ತನಗೆ, ತನ್ನ ಸಮಕಾಲೀನರಿಗೆ, ಭವಿಷ್ಯತ್ತಿನ ಪೀಳಿಗೆಗಳಿಗೆ ನಿಷ್ಠನೆನಿಸಿ. ಎಲ್ಲರಿಗೂ ಹಿತವೆನಿಸುವ ಒಂದು ಹೊಣೆಯನ್ನು ನಿರ್ವಹಿಸುವುದು ಇದೆ. ತಾನು, ತನಗೆ ಒಳ್ಳೆಯದನ್ನು ಮಾಡಿಕೊಳ್ಳುವುದಲ್ಲದೆ, ತನ್ನ ಸಂಪರ್ಕದಲ್ಲಿ ಬರುವ ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕು. ಪರಿಮಳ ಹಾಕಿಕೊಂಡ ಮನುಷ್ಯ ಹಾಯ್ದು ಹೋದರೆ, ಅವನು ಹೋದ ಮೇಲೆ ಎಷ್ಟೋ ಸಮಯದವರೆಗೆ, ಆ ಪರಿಮಳ ಅಲ್ಲಿದ್ದವರ ಮೂಗಿಗೆ ಹೊಡೆಯುತ್ತದೆ.

ಒಮ್ಮೆ ಮನೆಗೆ ಬಂದ ಒಬ್ಬ ಮನುಷ್ಯ ಇನ್ನೊಮ್ಮೆ ಬರಬೇಕೆನ್ನುವ ಆತುರ ಮನೆಯ ಮಂದಿಗೆಲ್ಲ ಇರಬೇಕು. ಅವನೇಕೆ ಬರುತ್ತಾನೆ ಎನ್ನುವಂತೆ ಯಾವನೊಬ್ಬನ ವರ್ತನೆಯೂ ಇರಬಾರದು.

ಪ್ರತಿದಿನವೂ ಒಳ್ಳೆಯದನ್ನು ಮಾಡುತ್ತ ಆ ಸತ್ಕಾರ್ಯಗಳ ಅಡಕಲನ್ನು ಏರಿಸುತ್ತ, ನಾವು ಹೋಗಬಲ್ಲೆವಾದರೆ, ಅದರ ಸತ್ಪ್ರಭಾವ ಸಮಾಜದ ಮೇಲೆ ಆಗಿಯೇ ಆಗುತ್ತದೆ.

ಮಾಡುವ ಒಂದೊಂದು ಕೆಲಸದ ಮೇಲೆಯೂ ನಮ್ಮ ಮುದ್ರೆ ಬೀಳಬೇಕು. ಕೆಲಸ ಸಣ್ಣದೆಂದು ಅದನ್ನು ಉದಾಸೀನ ಮಾಡಿ ಬಿಡಬಾರದು. ಗ್ರಹಗಳು ಮನುಷ್ಯನ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರುವವೋ ಏನೋ. ಹುಲ್ಲಿಗಿಂತಲೂ ಹಗುರಾದ, ಕ್ಷುಲ್ಲಕವೆನಿಸುವ ಸಂಗತಿಗಳೂ ಕೂಡ ಮನುಷ್ಯನ ಚಾರಿತ್ರ್ಯವನ್ನು ನಿರ್ಮಿಸುವುದಕ್ಕೆ ಕಾರಣವೆನಿಸುತ್ತದೆ.

ಒಳ್ಳೆಯದನ್ನು ಮಾಡಬೇಕೆನ್ನುವ ಮನುಷ್ಯನು ತಾನು ಮೊದಲು ಒಳ್ಳೆಯವನಾಗಿ ಬದುಕಲು ಆರಂಭಿಸಬೇಕು. ಒಳ್ಳೆಯ ರೀತಿಯಿಂದ ಬದುಕುವ ಮನುಷ್ಯನೇ ಒಳ್ಳೆಯದನ್ನು ಮಾಡಬಲ್ಲ.

ಉಪದೇಶ ಹೇಳುವುದಕ್ಕಿಂತಲೂ, ಉದಾಹರಣೆ ಎನಿಸುವಂತೆ ನಾವು ಬದುಕಬೇಕು. ಒಳ್ಳೆಯ ರೀತಿಯಿಂದ ಬದುಕುವ ಮನುಷ್ಯನೇ ಒಳ್ಳೆಯದನ್ನು ಮಾಡಬಲ್ಲ.

# ಭೂಮೀಲಿ ಜಲವು ಬತ್ತಿ ಹೋಯ್ತು



ಎನ್. ಕೃಷ್ಣಪ್ಪ ಕೋಡಿಪಾಳ್ಯ *

ಭೂಮೀಲಿ ಜಲವು ಬತ್ತಿ ಹೋಯ್ತು, ನೆಲದಲ್ಲಿ ಫಲವತ್ತು ಇಲ್ಲವಾಯ್ತು,
ರೈತರ ಕಣ್ಣೀರು ಬತ್ತಿಹೋಗಿ ಬದುಕು ಕತ್ತಲಾಗಿ  ಜೀವನ ದುರಂತವಾಯ್ತು
ಬರಗಾಲ ಬಂದು, ಬಡತನವು ಬಂತು. ಬದುಕೆಲ್ಲಾ ಮೂರಾ ಬಟ್ಟೆಯಾಯ್ತು
ರೈತರು ಬದುಕು ಬಂಗಾರವಾಗಲು ನರೇಗಾ ಬಂದು ಅಚ್ಚರಿಯ ತಂದು
ನೊಂದ ಗ್ರಾಮಸ್ಥರಿಗೆ ಹಲವಿಧದಲಿ ಸಹಕಾರಿಯಾಯ್ತು ಇದು ಬಂದು
ಗ್ರಾಮ ಪಂಚಾಯ್ತೀಲಿ ಹೆಸರು ನೊಂದಣಿ, ಉದ್ಯೋಗ ಚೀಟಿ ಪಡೆದು
ಭೂ ಅಭಿವೃದ್ಧಿ ಕಾಂಗಾರಿ ಕೈಗೊಂಡು, ಬಾಳೆ, ತೆಂಗು, ಮಾವು ನೆಟ್ಟು
ಅಂತರ್ಜಲ ಅಭಿವೃದ್ಧಿ ಮಳೆನೀರು ಹರಿಸಿ ಒಣಬಾವಿಗಳಿಗೆ ಜಲ ಮರುಪೂರಣ
ನೀರ್ಗಾಲುವೆ ನಿರ್ಮಾಣ, ಇಂಗುಗುಂಡಿ ನಿರ್ಮಾಣ,
ಕೈತುಂಬಾ ಕೂಲಿ, ದಿನಕ್ಕೆಲ್ಲಾ 200 ರೂಪಾಯಿ, ಗಂಡ–ಹೆಂಡತಿ ದುಡಿದರೆ
100 ದಿನಕ್ಕೆ ಹತ್ತು ಸಾವಿರ ದುಡಿಮೆ ಕುಟುಂಬಕ್ಕೆ ಆದಾಯ ಜಮೆ
ಊರಿನ ಜನರೆಲ್ಲಾ ಒಗ್ಗೂಡಿ ಬನ್ನೀ ..... ನರೇಗಾ ಕಾಂಗಾರಿ ಪ್ರಾರಂಭಮಾಡಿ
ಕೆರೆ, ಕಟ್ಟೆ, ಗೋಕಟ್ಟೆ ನಾಲೆ ಬಯಲೆಲ್ಲಾ ತುಂಬಲಿ ಜಲವು
ಬತ್ತಿಹೋದ ಬಾವಿಗಳಲಿ ಜಲವು ಉಕ್ಕಿ ಹರಿಯಲಿ.
ನರೇಗಾ ಯೋಜನೆಯು ಗ್ರಾಮೀಣ ಜನರಿಗೆ ವರದಾನವಾಗಿದೆ
ಬನ್ನಿ ಎಲ್ಲರೂ ಸರ್ಕಾರದ ಈ ಸವಲತ್ತು ಪಡೆಯಿರಿ.

❑

(* ನರೇಗಾ = ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ)

* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ – 571201.




# ಹತ್ತು +VE ಥಿಂಕಿಂಗ್



ಆರ್.ಎನ್. ತುಳಸೀರಾಮ್ *
ಮೊಬೈಲ್ : 9972101564

ನಮ್ಮ ದೈನಂದಿನ ಚಟುವಟಿಕೆಗಳ ಒತ್ತಡದ ನಡುವೆ ಸರಿಯಾದ ಹೆಜ್ಜೆ ಇಡಲು ದಾರಿದೀಪ ವಾಗಬಲ್ಲ ನುಡಿಮುತ್ತುಗಳು.

- ☆ ನೀವಿಡುವ ಒಂದೇ ಒಂದು ತಪ್ಪು ಹೆಜ್ಜೆ ಹಾದಿಯನ್ನೇ ತಪ್ಪಿಸಿಬಿಡುತ್ತದೆ. ಆದರೆ ನೀವು ಹಾಕುವ ಒಂದು ಸರಿಯಾದ ಹೆಜ್ಜೆಯೂ ಹೊಸ ಮಾರ್ಗವನ್ನು ತೆರೆಯುತ್ತದೆ. ಇಂದಿನಿಂದಲೇ ಸರಿಯಾದ ಹೆಜ್ಜೆ ಇಡೋಣವೇ?
- ☆ ಯಾವುದೇ ಕೆಲಸವೇ ಇರಲಿ, 'ಯಾರಾದರೂ ಮಾಡಲಿ' ಎಂಬ ಉಡಾಫೆ ಬೇಡ. 'ನಾನೇ ಏನಾದರೂ ಮಾಡುತ್ತೇನೆ' ಎಂಬ ಉತ್ಸಾಹವಿದ್ದರೆ ಬಹಳಷ್ಟು ತೊಂದರೆಗಳನ್ನು ತಡೆಯಬಹುದು.
- ☆ ಪ್ರತಿಯೊಂದು ಕನಸಿಗೂ ಅಡೆತಡೆಗಳು ಬಂದೇ ಬರುತ್ತವೆ. ಅದನ್ನು ಎದುರಿಸಲು ಆತ್ಮವಿಶ್ವಾಸದಂತಹ ಆಯುಧ ಇನ್ನು ಯಾವುದೂ ಇಲ್ಲ. ಅದನ್ನು ಹೆಚ್ಚಿಸಿಕೊಳ್ಳೋಣವೇ?
- ☆ ಜಗತ್ತು ಎಂದರೆ ನಿಲ್ದಾಣವಲ್ಲ. ಅದು ರೇಸ್ ಟ್ರ್ಯಾಕ್‌ನಂಥದ್ದು. ಅಲ್ಲಿ ಚಲಿಸುತ್ತಿದ್ದರೆ ಮಾತ್ರ ನಾವು ಉಳಿಯಬಹುದು. ಸದಾ ಚಲನಶೀಲರಾಗಿರೋಣ.
- ☆ ನಮ್ಮ ಜೀವನದಲ್ಲಿ ತುಂಬ ಹತ್ತಿರವಾಗಿದ್ದವರನ್ನು ಬಹಳ ಗೌರವದಿಂದ ಕಾಣಬೇಕು. ಏಕೆ ಗೊತ್ತೇ? ಅವರು ಯಾವಾಗ ನಮ್ಮಿಂದ ದೂರವಾಗಿಬಿಡುತ್ತಾರೋ ಅಂತ ತಿಳಿಯುವುದಿಲ್ಲ.
- ☆ ಹೂವು ಯಾರಲ್ಲೂ ಭೇದ ತೋರದೇ ಎಲ್ಲರಿಗೂ ಸುವಾಸನೆ ನೀಡುತ್ತದೆ. ಹಾಗೆಯೇ ನಾವೂ ಎಲ್ಲರ ಪಾಲಿಗೆ ಒಳ್ಳೆಯವರಾಗಿ ಇರಲು ಸಾಧ್ಯ. ಆ ನಿಟ್ಟಿನಲ್ಲಿ ಪ್ರಯತ್ನಿಸೋಣವೇ?
- ☆ ನಮ್ಮ ಮನಸ್ಸೂ ಪ್ಯಾರಾಚೂಟ್ ಇದ್ದ ಹಾಗೆ. ಅದು ತೆರೆದುಕೊಂಡಿದ್ದಾಗ ಮಾತ್ರ ಕೆಲಸ ಮಾಡಲು ಸಾಧ್ಯ. ನಮ್ಮದೂ ತೆರೆದ ಮನವಾಗಿರಲಿ.
- ☆ ನಮ್ಮ ಬದುಕನ್ನು ಯಾರೋ ಬಂದು ಬದಲಾಯಿಸುತ್ತಾರೆ ಎಂಬ ನಿರೀಕ್ಷೆಯನ್ನು ಎಂದಿಗೂ ಇಟ್ಟುಕೊಳ್ಳಬಾರದು. ನಾವೇ ನಮ್ಮ ಬದುಕಿನಲ್ಲಿ ಆ ಬದಲಾವಣೆಗಳನ್ನು ತಂದುಕೊಳ್ಳಬೇಕು. ಆಗ ನಾವು ಖಂಡಿತವಾಗಿಯೂ ಬದಲಾಗಲೂ ಸಾಧ್ಯ.
- ☆ ಸಮಾಜ ನಮ್ಮ ಬಗ್ಗೆ ಆತ್ಮೀಯತೆ, ಅಭಿಮಾನ ತೋರಬೇಕೆಂದು ನಾವೆಲ್ಲರೂ ಬಯಸುವುದು ತಪ್ಪೇನಲ್ಲ. ಆದರೆ ನಾವೂ ಸಮಾಜವನ್ನು ಅದೇ ಆತ್ಮೀಯತೆ, ಅಭಿಮಾನದಿಂದ ನೋಡಬೇಕಲ್ಲವೇ? ಇಂದಿನಿಂದಲೇ ಎಲ್ಲರನ್ನೂ ಅಕ್ಕರೆಯಿಂದ ಕಾಣೋಣವೇ?
- ☆ ನಿಮ್ಮಿಂದ ಒಪ್ಪಿಕೊಳ್ಳಲಾಗದ ಸಂಗತಿಗಳಿದ್ದರೆ ಅದನ್ನು ಬದಲಾಯಿಸಿ. ಬದಲಾಯಿಸಲಾಗದಿದ್ದರೆ ಅವುಗಳನ್ನು ಒಪ್ಪಿಕೊಳ್ಳಿ. ಇದರಿಂದ ನೆಮ್ಮದಿಯಾಗಿರಬಹುದು.

* ಲೆಕ್ಕ ಅಧೀಕ್ಷಕರು, ಜಿಲ್ಲಾ ಪಂಚಾಯತ್, ತುಮಕೂರು.




# ಕ್ಷಯ ರೋಗ



ಡಾ. ಬಿ. ರಮಣರಾವ್ *

ಬಡವರು ಮತ್ತು ಕೂಲಿ ಮಾಡುವವರಿಗೇ ಕ್ಷಯ ರೋಗ ಬರುತ್ತದೆಂದು ನಂಬಿದ್ದೀರಾ? ಹಾಗಿದ್ದರೆ ಅದೊಂದು ತಪ್ಪು ಕಲ್ಪನೆ. ಭಾರತದ ಜನಸಂಖ್ಯೆಯ 10% ಕ್ಕೂ ಹೆಚ್ಚು ಜನ ಇದರಿಂದ ಬಳಲುತ್ತಿದ್ದಾರೆ. ಪ್ರತಿ ವರ್ಷ 90 ಲಕ್ಷ ಹೊಸ ಕೇಸ್‌ಗಳು ಪತ್ತೆಯಾಗುತ್ತಿವೆ.

ಕ್ಷಯ ಎಲ್ಲ ವರ್ಗಗಳ ಜನರಿಗೆ ಬರುತ್ತದೆಂಬುದು ಸ್ಪಷ್ಟ. ದೀರ್ಘಕಾಲ ಜ್ವರವಿರುವ ಎಲ್ಲ ಸಂದರ್ಭದಲ್ಲಿ ಕ್ಷಯವಿದೆಯೇ ಎಂದು ಖಾತ್ರಿಪಡಿಸಿಕೊಳ್ಳುವುದು ಅಗತ್ಯ.

ನಾಗಾಲೋಟದಲ್ಲಿ ಹರಡುತ್ತಿರುವ ಟಿಬಿ, ನಮ್ಮ ರಾಷ್ಟ್ರೀಯ ಕ್ಷಯ ರೋಗ ನಿರೋಧ ಕಾರ್ಯಕ್ರಮದ ವಿಫಲತೆಯನ್ನು ಸಾರುತ್ತಿದೆ (ನಮ್ಮ ರಾಷ್ಟ್ರೀಯ ಮಲೇರಿಯಾ ನಿರ್ಮೂಲನ ಕಾರ್ಯಕ್ರಮದಂತೆಯೇ) ಬಿ.ಸಿ.ಜಿ. ಲಸಿಕೆ ಕೂಡ ಅಪೇಕ್ಷಿತ ರಕ್ಷಣೆ ನೀಡುವಲ್ಲಿ ವಿಫಲವಾಗಿದೆ.

ಮಾನವನಿಗೆ ಅನಾದಿಕಾಲದಿಂದ ಪರಿಚಯವಿರುವ ಸರ್ವೇಸಾಮಾನ್ಯ ಕಾಯಿಲೆ ಟಿ.ಬಿ. ಅಧಿಕವಾಗಿ ಶ್ವಾಸಕೋಶಗಳಲ್ಲಿ ಕಂಡುಬರುವ ಈ ಕಾಯಿಲೆ ದೇಹದ ಯಾವುದೇ ಭಾಗದಲ್ಲಿ ತಗುಲಬಹುದು.

ಟಿ.ಬಿ.ಯನ್ನು ಗುಣಪಡಿಸಬಹುದು. ಆರಂಭದಲ್ಲೇ ಪತ್ತೆಯಾದರೆ ಹೆಚ್ಚು ಸುಲಭವಾಗಿ ಗುಣವಾಗುತ್ತದೆ. ಕಾಯಿಲೆ ಇರುವವರ ಕೆಮ್ಮು, ಸೀನು, ನಗು ಇವುಗಳಿಂದ ಹೊರಬರುವ ತುಂತುರಿನಿಂದ ಇದರ ಸೋಂಕು ಹರಡುತ್ತದೆ. ಚಿಕಿತ್ಸೆ ಪಡೆದರೂ ಹೋಗದ ಕೆಮ್ಮು ಇದರ ಮುಖ್ಯ ಲಕ್ಷಣ. ತೂಕ ಕಡಿಮೆಯಾಗುವುದು, ಬಳಲಿಕೆ, ಹಸಿವಾಗದಿರುವುದು ಮತ್ತು ಸಂಜೆ ಹೊತ್ತು ಬರುವ ಜ್ವರ ಇವು ಇತರ ಲಕ್ಷಣಗಳು.

> ಕ್ಷಯ ರೋಗವನ್ನು ಗುಣಪಡಿಸಬಹುದು. ಆರಂಭದಲ್ಲೇ ಪತ್ತೆಯಾದರೆ ಹೆಚ್ಚು ಸುಲಭವಾಗಿ ಗುಣವಾಗುತ್ತದೆ.

ಚಿಕಿತ್ಸೆ ಆರಂಭಿಸಿದ ಕೆಲವೇ ದಿನಗಳಲ್ಲಿ ರೋಗಿ ಚೇತರಿಸಿಕೊಳ್ಳುತ್ತಾನೆ. ಅದರ ಅರ್ಥ ಕಾಯಿಲೆ ಗುಣವಾಗಿದೆ ಎಂದಲ್ಲ. ಟಿ.ಬಿ. ಬ್ಯಾಕ್ಟೀರಿಯಾ (ರೋಗಾಣು)ವನ್ನು 6 ರಿಂದ 9 ತಿಂಗಳ ಅವಧಿವರೆಗೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳುವ ವಿವಿಧ ಔಷಧಿಗಳ ಪೂರ್ಣಾವಧಿ ಬಳಕೆಯಿಂದ ಮಾತ್ರ ಸಂಪೂರ್ಣವಾಗಿ ತೊಡೆದು ಹಾಕಬಹುದು.

ಮಧ್ಯದಲ್ಲೇ ಔಷಧಿಗಳ ಸೇವನೆ ನಿಲ್ಲಿಸಿದರೆ ಮತ್ತೆ ಟಿ.ಬಿ. ಮರುಕಳಿಸುತ್ತದೆ. ಅಲ್ಲದೆ, ಮೊದಲು ನೀಡಿದ ಔಷಧಿಗಳಿಗೆ ಪ್ರತಿರೋಧ ಬೆಳೆದು ಕಾಯಿಲೆಯ ನಿರ್ಮೂಲನೆ ಹೆಚ್ಚು ಕಠಿಣವಾಗುತ್ತದೆ. ಇದಕ್ಕಾಗಿಯೇ ಪೂರ್ಣ ಕ್ರಮಬದ್ಧ ಚಿಕಿತ್ಸೆಯನ್ನು ಪಡೆಯುವುದು ಅತ್ಯಗತ್ಯ. ಒಮ್ಮೆ ಪೂರ್ತಿ ಗುಣವಾದ ಮೇಲೆ ಟಿ.ಬಿ. ಮತ್ತೆ ಬರುವ ಅವಕಾಶ ಬಹಳ ಕಡಿಮೆ.

ಶ್ವಾಸಕೋಶದ ಎಕ್ಸ್–ರೇ, ರಕ್ತಾಣುಗಳ ಎಣಿಕೆ, ಇ.ಎಸ್.ಆರ್. ಮಾಂಟೂ ಪರೀಕ್ಷೆಗಳ ಮೂಲಕ ಟಿ.ಬಿ. ಇರುವುದೇ ಎಂದು ದೃಢಪಡಿಸಿಕೊಳ್ಳಬಹುದು. ದೇಶದ ಮೂಲೆ ಮೂಲೆಗಳಲ್ಲಿ ಈ ಪರೀಕ್ಷೆ ಮಾಡುವ ವ್ಯವಸ್ಥೆ ಇದೆ. ಟಿ.ಬಿ. ಗುಣಪಡಿಸುವ ಔಷಧಿಗಳೂ ಎಲ್ಲ ಕಡೆ ದೊರಕುತ್ತವೆ. ಚಿಕಿತ್ಸೆಯನ್ನು ಎರಡು ಅಥವಾ ಮೂರು ಔಷಧಿಗಳನ್ನು ಸಂಯೋಜಿಸಿ ನಿಗದಿಪಡಿಸಲಾಗುತ್ತದೆ. ❑

* ಕನ್ಸಲ್ಟಿಂಗ್ ಫಿಸಿಷಿಯನ್ ಅಂಡ್ ಕಾರ್ಡಿಯಾಲಾಜಿಸ್ಟ್, ನಂ. 94 / ಹೆಚ್. 9ನೇ ಕ್ರಾಸ್, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು – 80.

ಮುಖಪುಟ ಲೇಖನ

# ಜಿಲ್ಲಾ ಪಂಚಾಯತ್ – ಬಾಗಲಕೋಟೆ

## ಅಭಿವೃದ್ಧಿ ಚಿತ್ರಣದ ಒಂದು ಅವಲೋಕನ

– ಡಾ. ಎಂ.ಎಸ್. ಮಂಜುನಾಥ*

ಬಾಗಲಕೋಟೆ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಚಿತ್ರಣದ ಸ್ಥೂಲ ಪರಿಚಯ ಇಲ್ಲಿದೆ. ಸಾಧಿಸುವ ಮನಸ್ಸಿದ್ದಲ್ಲಿ ಸರ್ಕಾರದ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕ ಅಭಿವೃದ್ಧಿಯನ್ನು ಹೊಂದಬಹುದು ಎನ್ನುವುದಕ್ಕೆ ಮಹಿಳಾ ಸ್ವಸಹಾಯ ಸಂಘಗಳ ಯಶೋಗಾಥೆಗಳೂ ಲೇಖನದಲ್ಲಿದೆ.

ಉತ್ತರ ಕರ್ನಾಟಕದ ಬಾಗಲಕೋಟೆ ನಗರ, ಜಿಲ್ಲೆಯ ಕೇಂದ್ರ ಸ್ಥಾನ. ಕೃಷ್ಣಾನದಿಗೆ ಅಡ್ಡಲಾಗಿ ಕಟ್ಟಲಾದ ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನ ಪರಿಣಾಮವಾಗಿ ಹಳೆಯ ಬಾಗಲಕೋಟೆ ಬಹುತೇಕ ಮುಳುಗಿದ ಕಾರಣ ಬಾಗಲಕೋಟೆ ನಗರವನ್ನು ವಿಸ್ತರಿಸಿ 'ನವನಗರ'ವನ್ನು ನಿರ್ಮಿಸಲಾಗಿದ್ದು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮುಂತಾದ ಆಡಳಿತ ವ್ಯವಸ್ಥೆಗೆ ನವನಗರ ಈಗ ಬಾಗಲಕೋಟೆ ಜಿಲ್ಲೆಯ ಕೇಂದ್ರಸ್ಥಾನವಾಗಿದೆ. ಬಾಗಲಕೋಟೆ ಜಿಲ್ಲಾ ಪಂಚಾಯತ್ ವತಿಯಿಂದ ಕೈಗೊಂಡಿರುವ ಗ್ರಾಮೀಣಾಭಿವೃದ್ಧಿಯ ಯೋಜನೆಗಳಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸುವರ್ಣ ಗ್ರಾಮೋದಯ, ಗ್ರಾಮಸ್ವರಾಜ್, ಸಂಪೂರ್ಣ ಸ್ವಚ್ಛತಾ ಆಂದೋಲನ, ಸ್ವರ್ಣಜಯಂತಿ ಗ್ರಾಮೀಣ ಸ್ವರೋಜ್‌ಗಾರ್ ಯೋಜನೆ ಮುಂತಾದ ಅಭಿವೃದ್ಧಿ ಚಿತ್ರಣದ ಸ್ಥೂಲ ಪರಿಚಯವನ್ನು ಇಲ್ಲಿ ನೀಡಲಾಗಿದೆ.

### ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಗ್ರಾಮೀಣ ಪ್ರದೇಶಗಳಲ್ಲಿ ಬಡತನ ನಿರ್ಮೂಲನೆಗಾಗಿ ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ವಯಸ್ಕರಿಗೆ ಒಂದು ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗಾವಕಾಶಗಳನ್ನು ಸ್ಥಳೀಯವಾಗಿ ನೀಡಿ ಬಡಜನರ ಬದುಕನ್ನು ಹಸನಾಗಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಯೋಜನೆಯಡಿ ಭೂ ಅಭಿವೃದ್ಧಿ, ಕೆರೆಗಳ ಹೂಳೆತ್ತುವ ಕಾರ್ಯಕ್ರಮ, ಸಾಮಾಜಿಕ



* ಸಹಾಯಕ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾ. ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.



ಅರಣ್ಯೀಕರಣದಲ್ಲಿ ಗಿಡಗಳನ್ನು ನೆಡುವುದು, ಜಲಾನಯನ ಅಭಿವೃದ್ಧಿ ಪ್ರದೇಶದಲ್ಲಿ ತಡೆಗೋಡೆ ನಿರ್ಮಾಣ, ಬಂದಾರುಗಳ ನಿರ್ಮಾಣ, ರಸ್ತೆ ನಿರ್ಮಾಣ ಇವೇ ಮುಂತಾದ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡಜನರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು ಸಹ ಈ ಯೋಜನೆಯು ಗುರಿಯಾಗಿರುತ್ತದೆ.

ಸದರಿ ಯೋಜನೆಯಡಿ ಕನಿಷ್ಠ 15 ದಿನಗಳಿಗೊಮ್ಮೆ ಕೂಲಿಯನ್ನು ಪಾವತಿಸಲಾಗುವುದು. ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಕೂಲಿಯನ್ನು ಪಾವತಿಸಲಾಗುವುದು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಜಿಲ್ಲೆಯಲ್ಲಿ 2008–09ನೇ ಸಾಲಿನಿಂದ



ಅನುಷ್ಠಾನಗೊಂಡಿದ್ದು, 1,84,262 ಕುಟುಂಬಗಳ ನೋಂದಾಯಿತ ಕುಟುಂಬಕ್ಕೆ ಉದ್ಯೋಗ ಚೀಟಿಯನ್ನು ಪೂರೈಸಲಾಗಿರುತ್ತದೆ. ಜಿಲ್ಲೆಯಲ್ಲಿ 2008–09 ನೇ ಸಾಲಿನಲ್ಲಿ 2659.958 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ 25 ಕೋಟಿ ಅನುದಾನ ಖರ್ಚು ಮಾಡಲಾಗಿದ್ದು **ಯೋಜನೆ ಅನುಷ್ಠಾನದಲ್ಲಿ ಬಾಗಲಕೋಟೆ ಜಿಲ್ಲೆಯು ಪ್ರಥಮ ಸ್ಥಾನ ಪಡೆದಿರುತ್ತದೆ**. 2009–10 ನೇ ಸಾಲಿನಲ್ಲಿ 12686.468 ಲಕ್ಷ ಅನುದಾನದಲ್ಲಿ 12619.389 ಲಕ್ಷ ಅನುದಾನ ಖರ್ಚು ಮಾಡಿ ಪ್ರತಿಶತ 99.47% ರಷ್ಟು ಸಾಧನೆ ಮಾಡಲಾಗಿದೆ. ಒಟ್ಟಾರೆ 94,82,354 ಮಾನವ ದಿನಗಳನ್ನು ಸೃಷ್ಠಿ ಮಾಡಿ 18,196 ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು ಪ್ರಮುಖವಾಗಿ ಕೆರೆ ಹೊಳು ಎತ್ತುವ ಕೆಲಸ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತೀ ಸಣ್ಣ ರೈತರ ಭೂಮಿ ಅಭಿವೃದ್ಧಿಪಡಿಸುವ ಮುಂತಾದ



ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಗ್ರಾಮೀಣ ಪ್ರದೇಶಗಳ ರಸ್ತೆ ಮತ್ತು ಚರಂಡಿಗಳ ಕಾಮಗಾರಿಗಳನ್ನು ಹಮ್ಮಿಕೊಂಡಿದ್ದು ಮತ್ತು ಅರಣ್ಯ ಇಲಾಖೆಯ ನೆಡುತೋಪುಗಳಲ್ಲಿ ಬೆಳೆಸಿದ ಸಸಿಗಳನ್ನು ಹೆಚ್ಚು ಬಳಕೆ ಮಾಡಲಾಗಿದೆ. ತೋಟಗಾರಿಕೆ ಇಲಾಖೆಯ ಹಣ್ಣಿನ ಸಸಿಗಳನ್ನು ರೈತರಿಗೆ ವಿತರಿಸಲಾಗಿರುತ್ತದೆ.

2010–11 ನೇ ಸಾಲಿನಲ್ಲಿ 4419.275 ಲಕ್ಷ ಅನುದಾನದಲ್ಲಿ ಇಲ್ಲಿಯವರೆಗೆ 2060.811 ಲಕ್ಷ ಖರ್ಚು ಮಾಡಲಾಗಿರುತ್ತದೆ. ಈ ಸಾಲಿನಲ್ಲಿ 12,05,736 ಮಾನವ ದಿನಗಳನ್ನು ಸೃಷ್ಠಿ ಮಾಡಲಾಗಿದ್ದು ಕೆಲಸ ಮಾಡುವ ನೊಂದಾಯಿತ ಪ್ರತಿಯೊಂದು ಕುಟುಂಬಕ್ಕೆ 100 ದಿನಗಳ ಕೆಲಸವನ್ನು ಪೂರೈಸಲಾಗುತ್ತಿದೆ. ಮಹಿಳೆ ಮತ್ತು ಪುರುಷ ಬೇದಭಾವ ಇಲ್ಲದೇ ದಿನ ಒಂದಕ್ಕೆ ರೂ. 100 ರೂ.ಗಳ ಸಮಾನ ಕೂಲಿಯ

ಹಣವನ್ನು ಕೆಲಸಗಾರರ ಬ್ಯಾಂಕ್ ಅಥವಾ ಅಂಚೆ ಕಛೇರಿ ಖಾತೆಗೆ ಜಮಾ ಮಾಡಲಾಗುತ್ತಿದೆ.

ಈ ಯೋಜನೆ ಪ್ರಾರಂಭವಾದಾಗಿನಿಂದ ಜಿಲ್ಲೆಯಿಂದ ದುಡಿಮೆ ಹುಡುಕುತ್ತಾ ಹೊರ ರಾಜ್ಯಕ್ಕೆ ಗ್ರಾಮೀಣ ಪ್ರದೇಶದ ಬಡ ಜನರು ವಲಸೆ ಹೋಗುವುದನ್ನು ತಡೆಗಟ್ಟಲಾಗಿದೆ. ಯೋಜನೆಯ ಬಗ್ಗೆ ಹೆಚ್ಚಿನ ಅರಿವನ್ನು ಗ್ರಾಮೀಣ ಪ್ರದೇಶದ ಜನರಿಗೆ ಮೂಡಿಸಲು ಪ್ರಚಾರಾಂದೋಲನದ ಭಾಗವಾಗಿ ಕಲಾಜಾಥಾ, ಬೀದಿ ನಾಟಕ ಹಾಗೂ ಹಾಡುಗಳ ಮೂಲಕ ವ್ಯಾಪಕ ಪ್ರಚಾರ ಕಾರ್ಯವನ್ನು ಪ್ರತಿ ಹಳ್ಳಿಗಳಲ್ಲಿ ನಡೆಸಲು ಕಾರ್ಯಕ್ರಮ ರೂಪಿಸಲಾಗಿದೆ.

## ಸುವರ್ಣ ಗ್ರಾಮೋದಯ

ಘನತೆವೆತ್ತ ಭಾರತದ ರಾಷ್ಟ್ರಪತಿಗಳು ಸುವರ್ಣ ಗ್ರಾಮೋದಯ ಯೋಜನೆಗೆ ದಿನಾಂಕ 25.02.2007 ರಂದು ಚಾಲನೆ ನೀಡಿರುತ್ತಾರೆ. ಆಯ್ಕೆಯಾದ ಗ್ರಾಮಗಳ ಜನಜೀವನ ಗುಣಮಟ್ಟವನ್ನು ಉತ್ತಮಗೊಳಿಸಲು ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು, ಭೂ ಆಧಾರಿತ ಚಟುವಟಿಕೆಗಳಲ್ಲಿ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವುದು. ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಸೌಲಭ್ಯ ಇತ್ಯಾದಿಗಳನ್ನು ಒಳಗೊಂಡಂತೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಯೋಜನೆಯ ಪ್ರಮುಖ ಉದ್ದೇಶ. ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದು. ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಗಳು ಮುಂತಾದವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿ ನೆರವಾಗುವುದನ್ನು ಸಹ ಯೋಜನೆಯು ಒಳಗೊಂಡಿರುತ್ತದೆ.

ಜಿಲ್ಲೆಯಲ್ಲಿ ಸುವರ್ಣ ಗ್ರಾಮೋದಯ ಯೋಜನೆ ಒಂದನೇ ಹಂತದಲ್ಲಿ 45 ಗ್ರಾಮಗಳನ್ನು ಆಯ್ಕೆಯಾಗಿದ್ದು ಸದರಿ ಗ್ರಾಮಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿಪಡಿಸುವುದಕ್ಕೆ 175.26 ಕಿ.ಮೀ. ಗುರಿ ಹೊಂದಲಾಗಿದೆ. ಈಗಾಗಲೇ 126.52 ಕಿ.ಮೀ. ರಸ್ತೆ ಮತ್ತು ಚರಂಡಿ ಅಭಿವೃದ್ಧಿಪಡಿಸಲಾಗಿದೆ. ಇನ್ನುಳಿದ 48.74 ಕಾಮಗಾರಿಯನ್ನು ಮಾರ್ಚ್ 2011 ಅಂತ್ಯ ಒಳಗಾಗಿ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.



ವಿಶೇಷವಾಗಿ ಜಮಖಂಡಿ ತಾಲೂಕಿನ ಕಡಪಟ್ಟಿ ಗ್ರಾಮದಲ್ಲಿ ಯೋಜನೆಯಡಿ ಸಂಪೂರ್ಣ ಒಳಚರಂಡಿ ವ್ಯವಸ್ಥೆ ಮಾಡಲಾಗಿದ್ದು, ಗ್ರಾಮದಲ್ಲಿ ವಾಸವಾಡುತ್ತಿರುವ ಕುಟುಂಬಗಳು ವೈಯುಕ್ತಿಕ ಶೌಚಾಲಯ ನಿರ್ಮಾಣ ಮಾಡಿಕೊಂಡು ಅದರಂತೆ ಬಳಕೆ ಮಾಡಲು ಕಡಪಟ್ಟಿ ಗ್ರಾಮಸ್ಥರ ಮನವೊಲಿಸಲಾಗಿದ್ದು ಪ್ರಸಕ್ತ ಕಡಪಟ್ಟಿ ಗ್ರಾಮವು ಸಂಪೂರ್ಣ ನೈರ್ಮಲ್ಯದಿಂದ ಕೂಡಿದೆ. 2008–09 ನೇ ಸಾಲಿನ ಸಂಪೂರ್ಣ ಸ್ವಚ್ಛತಾ ಆಂದೋಲನಾ ಕಾರ್ಯಕ್ರಮದಡಿ ಸದರಿ ಗ್ರಾಮ ಪಂಚಾಯತಿಗೆ "ನಿರ್ಮಲ ಗ್ರಾಮ ಪುರಸ್ಕಾರ" ಪ್ರಶಸ್ತಿ ಲಭ್ಯವಾಗಿರುವುದು ಅತ್ಯಂತ ಆಶಾದಾಯಕವಾಗಿದೆ.

ಯೋಜನೆಯಡಿ 123 ಕಟ್ಟಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, ಈಗಾಗಲೇ 81 ಕಟ್ಟಡ ಕಾಮಗಾರಿಗಳು ಪೂರ್ಣಗೊಂಡಿದ್ದು. ಇನ್ನುಳಿದ 42 ಕಟ್ಟಡ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ ಹಾಗೂ ಮಾರ್ಚ್ 2011ರ ಅಂತ್ಯದ ಒಳಗಾಗಿ ಸಂಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಅನುಮೋದಿತ ಯೋಜನಾ ಮೊತ್ತ



ರೂ. 3370.73 ಲಕ್ಷ ಇದ್ದು, ಸರ್ಕಾರದಿಂದ ರೂ. 2895.48 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ. 2788.03 ಲಕ್ಷ ವೆಚ್ಚ ಭರಿಸಿ ಶೇ. 96 ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

ಸುವರ್ಣ ಗ್ರಾಮೋದಯ ಯೋಜನೆಯ ಮೂರನೆ ಹಂತದಲ್ಲಿ 42 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಅನುಮೋದಿತ ಯೋಜನಾ ಮೊತ್ತ ರೂ. 3370.00 ಲಕ್ಷ ಹೊಂದಲಾಗಿದ್ದು, ರಸ್ತೆ ಮತ್ತು ಚರಂಡಿ ಕಾಮಗಾರಿಗಳ 123.22 ಕಿ.ಮೀ. ಅನುಷ್ಠಾನ ಮಾಡುವ ಗುರಿ ಹೊಂದಲಾಗಿದೆ. ಈಗಾಗಲೇ 14.38 ಕಿ.ಮೀ ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪೂರ್ಣಗೊಂಡಿದ್ದು ಇನ್ನುಳಿದ 108.83 ಕಿ.ಮೀ. ಕಾಮಗಾರಿಯು ವಿವಿಧ ಹಂತದ ಪ್ರಗತಿಯಲ್ಲಿದ್ದು, ಮಾರ್ಚ್ 2011 ರ ಒಳಗಾಗಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ವಿಶೇಷವಾಗಿ ಬದಾಮಿ ತಾಲ್ಲೂಕಿನ ನಂದಿಕೇಶ್ವರ ಗ್ರಾಮ ಪಂಚಾಯತ್, ನಂದಿಕೇಶ್ವರ ಗ್ರಾಮದಲ್ಲಿ ಸಂಪೂರ್ಣವಾಗಿ ಒಳಚರಂಡಿ ವ್ಯವಸ್ಥೆಯ ನೀಲ ನಕ್ಷೆಗೆ ಅನುಮೋದನೆ ಗೊಂಡಿದ್ದು ಅತೀ ಶಿಘ್ರದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದಲ್ಲದೆ ವಿವಿಧ ಕಟ್ಟಡ ಕಾಮಗಾರಿಗಳ 99 ಗುರಿ ಹೊಂದಲಾಗಿದ್ದು, ಈಗಾಗಲೇ 39 ಕಟ್ಟಡ ಕಾಮಗಾರಿಗಳು ಪೂರ್ಣಗೊಂಡಿದೆ. ಇನ್ನುಳಿದ 60 ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು ಮಾರ್ಚ್ 2011 ರ ಅಂತ್ಯದ ಒಳಗಾಗಿ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ. 1314.10 ಲಕ್ಷ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ರೂ. 1252.27 ಲಕ್ಷ ಅನುದಾನ ವೆಚ್ಚ ಭರಿಸಲಾಗಿದ್ದು, ಶೇ. 95 ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

ಗ್ರಾಮಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ವಿಲೇವಾರಿ ಮತ್ತು ನಿರ್ವಹಣೆ ಕುರಿತು ಗ್ರಾಮ ಮಟ್ಟದಲ್ಲಿ ಜನ ಜಾಗೃತಿ ಕಾರ್ಯಕ್ರಮಗಳನ್ನು ಮತ್ತು ಗ್ರಾಮ ನೈರ್ಮಲ್ಯ, ಕುಡಿಯುವ ನೀರು ಬಳಕೆ ಹಾಗೂ ತಿಪ್ಪೆಗುಂಡಿ ನಿರ್ವಹಣೆ ಕುರಿತು, ಬೀದಿ ನಾಟಕ, ಕರಪತ್ರಗಳು, ಗೋಡೆ ಬರಹ, ಯೋಜನೆಯ ಮಹತ್ವದ ಬಗ್ಗೆ ಜಾಹಿರಾತು ಮುಖಾಂತರ ಜನರಲ್ಲಿ ಅರಿವು ಮೂಡಿಸಲಾಗಿದೆ. ಜಿಲ್ಲೆ ಉಸ್ತುವಾರಿ ಸಚಿವರು, ಲೋಕಸಭಾ ಸದಸ್ಯರುಗಳು, ಶಾಸಕರುಗಳು ಮತ್ತು ಜಿಲ್ಲಾ ಪಂಚಾಯತ್, ತಾಲೂಕಾ ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಸದಸ್ಯರು ಯೋಜನೆಯ ಅನುಷ್ಠಾನದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿರುವುದರಿಂದ ಗ್ರಾಮೀಣ ಪ್ರದೇಶಗಳು ಸ್ವಚ್ಛ ಸುಂದರ ಪರಿಸರವನ್ನು ಪಡೆಯುವತ್ತ ಯಶಸ್ಸಿನ ಹಾದಿಯಲ್ಲಿದೆ.



## ಗ್ರಾಮ ಸ್ವರಾಜ್ ಯೋಜನೆ

ವಿಶ್ವಬ್ಯಾಂಕ್ ನೆರವಿನ ಗ್ರಾಮ ಸ್ವರಾಜ್– ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆಯು 22ನೇ ಅಕ್ಟೋಬರ್ 2006 ರಂದು ರಾಜ್ಯದಲ್ಲಿ ಜಾರಿಗೆ ಬಂದಿದೆ. ಒಟ್ಟು ರೂ. 600 ಕೋಟಿಯಲ್ಲಿ ಪ್ರತಿಶತ 85ರಷ್ಟು ಅನುದಾನ ರೂ. 510 ಕೋಟಿ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ 1,343 ಗ್ರಾಮ ಪಂಚಾಯತಿಗಳಿಗೆ 5 ವರ್ಷಗಳ ಅವಧಿಗೆ ಒದಗಿಸಲಾಗುವುದು. ರಾಜ್ಯದ 175 ತಾಲ್ಲೂಕು ಕೇಂದ್ರಗಳಲ್ಲಿ ಸುಸಜ್ಜಿತ ತರಬೇತಿ ಕೇಂದ್ರ "ಸಾಮರ್ಥ್ಯಸೌಧ" ನಿರ್ಮಿಸಲು ಉದ್ದೇಶಿಸಿದೆ.





ಜಿಲ್ಲೆಯ ಅತೀ ಹಿಂದುಳಿದ ತಾಲ್ಲೂಕು ಬೀಳಗಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2010–2011 ನೇ ಸಾಲಿಗೆ ರೂ.101.81 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಆರಂಭದ ಶಿಲ್ಕು ರೂ. 9.70 ಲಕ್ಷವಿದ್ದು, ಒಟ್ಟು ರೂ. 145.46 ಲಕ್ಷ ಅನುದಾನ ಲಭ್ಯವಿದ್ದು, ಬೀಳಗಿ ತಾಲೂಕಿನ 20 ಗ್ರಾಮ ಪಂಚಾಯತ್‌ಗಳಲ್ಲಿ 161 ವಿವಿಧ ಅಭಿವೃದ್ಧಿ ಕಾಮಗಾರಿಗಳ ಗುರಿ ಹೊಂದಲಾಗಿದ್ದು ಈಗಾಗಲೇ 54 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಇನ್ನುಳಿದ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದೆ.

ಸದರಿ ಯೋಜನೆಯಡಿ ಗ್ರಾಮ ಪಂಚಾಯತ್ ಕಟ್ಟಡ ಮತ್ತು ರಸ್ತೆ ಚರಂಡಿ ವಿವಿಧ ಕಾಮಗಾರಿಗಳು ಅನುಷ್ಠಾನಗೊಂಡು ಹಲವಾರು ಗ್ರಾಮಗಳು ಸುಂದರವಾದ ಗ್ರಾಮಗಳಾಗಿ ಪರಿವರ್ತನೆಗೊಂಡಿರುತ್ತವೆ. ಗ್ರಾಮಸ್ಥರಲ್ಲಿ ಗ್ರಾಮ ಸ್ವರಾಜ್ ಯೋಜನೆ ಮಹತ್ವದ ಕುರಿತು ಜನರಲ್ಲಿ ತಿಳುವಳಿಕೆ ಮೂಡಿಸಲಾಗಿದ್ದು, ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳ ನಿರ್ವಹಣೆ ಮತ್ತು ಗ್ರಾಮದಲ್ಲಿ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಮಾಡುವ ಅರಿವು ಮೂಡಿಸಲಾಗಿರುತ್ತದೆ. ಈಗಾಗಲೇ ಗ್ರಾಮಸ್ಥರ ಸಹಭಾಗಿತ್ವದಲ್ಲಿ ಕಾಮಗಾರಿ ಉತ್ತಮ ರೀತಿಯಲ್ಲಿ ನಿರ್ವಹಣೆಯಾಗುತ್ತಿವೆ.

## ಸಂಪೂರ್ಣ ಸ್ವಚ್ಛತಾ ಆಂದೋಲನ

ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳನ್ನು ಬಯಲು ಮಲವಿಸರ್ಜನೆ ಮುಕ್ತವನ್ನಾಗಿ ಮಾಡುವ ಮಹಾತ್ವಾಕಾಂಕ್ಷಿ ಉದ್ದೇಶಕ್ಕಾಗಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದ್ದು, ದಿನಾಂಕ 2–10–2005 ರಿಂದ ಯೋಜನೆ ಜಾರಿಗೆ ಬಂದಿದೆ. ಸಂಪೂರ್ಣ ಸ್ವಚ್ಛತಾ





ಆಂದೋಲನ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು **ರಾಜ್ಯ ಸರ್ಕಾರವು 2009–10ನೇ ಸಾಲಿನಿಂದ "ನೈರ್ಮಲ್ಯ" ರಾಜ್ಯ ಪುರಸ್ಕಾರ ಯೋಜನೆಯನ್ನು ಜಾರಿಗೆ ತಂದಿರುತ್ತದೆ.**

ಜಿಲ್ಲೆಯ 62160 ಬಿ.ಪಿ.ಎಲ್ ಮತ್ತು 175385 ಎ.ಪಿ.ಎಲ್. ಸೇರಿದಂತೆ ಒಟ್ಟಾರೆ 237545 ಕುಟುಂಬಗಳು ವೈಯಕ್ತಿಕ ಶೌಚಾಲಯ ಹೊಂದಿರುವುದಿಲ್ಲವೆಂದು ತಳಮಟ್ಟದ ಸಮೀಕ್ಷೆಯಿಂದ ತಿಳಿದು ಬಂದ ಹಿನ್ನೆಲೆಯಲ್ಲಿ 2005–06 ರಿಂದ 2010–11 ನವೆಂಬರ್‌ವರೆಗೆ 46957 ಬಿ.ಪಿ.ಎಲ್. ಮತ್ತು 84448 ಎ.ಪಿ.ಎಲ್ ಕುಟುಂಬಗಳು ಸ್ವಚ್ಛತಾ ಆಂದೋಲನದ ಯೋಜನೆಯಡಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡು ಬಳಕೆ ಮಾಡುತ್ತಿದ್ದಾರೆ. ಇದರಿಂದಾಗಿ ಶೇ. 55 ರಷ್ಟು ಪ್ರಗತಿಯನ್ನು ಸಾಧಿಸಲಾಗಿದ್ದು ಹೆಚ್ಚಿನ ಪ್ರಗತಿಗಾಗಿ ಯೋಜನೆ ಬಗ್ಗೆ ಗ್ರಾಮಸ್ಥರಲ್ಲಿ ಹೆಚ್ಚಿನ ಅರಿವನ್ನು ಮೂಡಿಸಲು ಕ್ರಮ ಕೈಗೊಳ್ಳಲಾಗಿದೆ.

ಗ್ರಾಮದ ಜನರಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನಾ ಮುಖಾಂತರ ಬಯಲು ಮಲ ವಿಸರ್ಜನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ಗ್ರಾಮೀಣ ಮಟ್ಟದಲ್ಲಿ ಹರಡುವ ವಿವಿಧ ರೀತಿಯ ರೋಗಗಳ ಕುರಿತು ಜನರಿಗೆ ಜನಜಾಗೃತಿ ಕಾರ್ಯಕ್ರಮಗಳ ಮುಖಾಂತರ ಹಾಗೂ ಗೋಡೆ ಬರಹ, ಬೀದಿ ನಾಟಕ, ಗ್ರಾಮೀಣ ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೈರ್ಮಲ್ಯದ ಬಗ್ಗೆ ಆಟ ಪಾಠಗಳ ಮುಖಾಂತರ ತಿಳುವಳಿಕೆ ನೀಡಲಾಗುತ್ತಿದೆ. ಎಲ್ಲಾ ಮಕ್ಕಳು ಶಾಲೆ, ಅಂಗನವಾಡಿಗಳಲ್ಲಿ ನಿರ್ಮಾಣ ಮಾಡಲಾದ ಶೌಚಾಲಯಗಳು ಮತ್ತು ಮೂತ್ರಾಲಯಗಳನ್ನು ಕಡ್ಡಾಯವಾಗಿ ಬಳಕೆ ಮಾಡುವಂತೆ ಪ್ರೇರೇಪಿಸಲಾಗುತ್ತಿದೆ.

ಪಾಲಕರಿಗೆ ಮನೆಯಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವಂತೆ ಮಕ್ಕಳಿಂದ ಪಾಲಕರಿಗೆ ಅರಿವು ಮೂಡಿಸುವ ಕೆಲಸವೂ ನಡೆಯುತ್ತಿದೆ.

ಮುಂದುವರಿದು ಗ್ರಾಮೀಣ ಮಟ್ಟದಲ್ಲಿ ವಿವಿಧ ಹಂತದ ಜನ ಪ್ರತಿನಿಧಿಗಳು, ಸಂಘ ಸಂಸ್ಥೆಗಳು, ಸರ್ಕಾರಿ ನೌಕರರು ವಿಶೇಷವಾಗಿ ಅಂಗನವಾಡಿ ಕಾರ್ಯಕರ್ತರು, ಆರೋಗ್ಯ ಸಹಾಯಕರು, ಶಾಲಾ ಶಿಕ್ಷಕರು, ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಮತ್ತು ಬಿಲ್ ಕಲೆಕ್ಟರ್ ಯಾವತ್ತು ಗ್ರಾಮ ಪಂಚಾಯತ್ ಸಿಬ್ಬಂದಿಗಳ ಮುಖಾಂತರ ಗ್ರಾಮೀಣ ಪ್ರದೇಶಗಳ ಮನೆಗಳಿಗೆ ಭೇಟಿ ನೀಡಿ ಸಂಪೂರ್ಣ ಸ್ವಚ್ಛತಾ ಆಂದೋಲನದ ಬಗ್ಗೆ ಪ್ರಚಾರ ನೀಡಲಾಗುತ್ತಿದೆ.

### ನಿರ್ಮಲ ಗ್ರಾಮ ಪುರಸ್ಕಾರ

**2007–08 ರಿಂದ 2010 ನೇ ಸಾಲಿನವರೆಗೆ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಜಿಲ್ಲೆಯ 5 ಗ್ರಾಮ ಪಂಚಾಯತ್‌ಗಳಿಗೆ "ನಿರ್ಮಲ ಗ್ರಾಮ ಪುರಸ್ಕಾರ" ಪ್ರಶಸ್ತಿ ಲಭಿಸಿರುತ್ತದೆ.**

| | |
|---|---|
| ಬಾಗಲಕೋಟೆ ತಾ॥ | : ಮುರನಾಳ ಗ್ರಾ.ಪಂ. |
| ಬಾಗಲಕೋಟೆ ತಾ॥ | : ಹಿರೇಗುಳಬಾಳ ಗ್ರಾ.ಪಂ. |
| ಜಮಖಂಡಿ ತಾ॥ | : ಕಡಪಟ್ಟಿ ಗ್ರಾ.ಪಂ. |
| ಬದಾಮಿ ತಾ॥ | : ಬೇಲೂರ ಗ್ರಾ.ಪಂ. |
| ಬೀಳಗಿ ತಾ॥ | : ಕಂದಗಲ್ಲ ಗ್ರಾ.ಪಂ. |

ಜಿಲ್ಲೆಯಿಂದ 60 ಗ್ರಾಮ ಪಂಚಾಯತಿಗಳನ್ನು 2009–10ನೇ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗಿದ್ದು ಕೇಂದ್ರ ಮಟ್ಟದ ತಂಡ ಸದರಿ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನಗೊಂಡ ವಿವಿಧ ಕಾರ್ಯಚಟುವಟಿಕೆಗಳನ್ನು ಮೌಲ್ಯ ಮಾಪನ ಮಾಡಿರುತ್ತಾರೆ. 60 ಗ್ರಾಮ





ಪಂಚಾಯತ್‌ಗಳಿಗೆ ನಿರ್ಮಲ ಗ್ರಾಮ ಪುರಸ್ಕಾರ ಲಭಿಸುವ ಆಶಾಭಾವನೆಯನ್ನು ಹೊಂದಲಾಗಿದೆ.

ಇನ್ನುಳಿದ ಗ್ರಾಮ ಪಂಚಾಯತ್‌ಗಳನ್ನು 2010–11 ನೇ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಸಜ್ಜುಗೊಳಿಸುವ ಸಲುವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಮುಂಬರುವ ದಿನಗಳಲ್ಲಿ ಸಂಪೂರ್ಣ ಜಿಲ್ಲೆಯನ್ನು ಬಯಲು ಮಲ ವಿಸರ್ಜನೆಯಿಂದ ಮುಕ್ತ ಜಿಲ್ಲೆಯನ್ನಾಗಿ ಪರಿವರ್ತಿಸಲಾಗುವ ಗುರಿಯನ್ನು ಹೊಂದಿದೆ.

## ವಸತಿ ಯೋಜನೆಗಳು

**ಇಂದಿರಾ ಆವಾಸ್ :** ಇಂದಿರಾ ಆವಾಸ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪೂರ್ಣ ಪ್ರಮಾಣದಲ್ಲಿ ಫಲಾನುಭವಿಗಳಿಗೆ ಸಹಾಯಧನ ನೀಡಲಾಗುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಡತನ ರೇಖೆಗಿಂತ ಕೆಳಗಿರುವವರಿಗೆ ಶೇ. 60, ಇತರೇ ಜನರಿಗೆ ಶೇ. 25, ಅಲ್ಪ ಸಂಖ್ಯಾತರಿಗೆ ಶೇ. 15 ಮತ್ತು ಅಂಗವಿಕಲರಿಗೆ ಶೇ. 3 ರಷ್ಟು ನಿಗಧಿಪಡಿಸಿದ ಗುರಿಯಲ್ಲಿ ಮೀಸಲಾತಿ ಇದ್ದು, ಅದರ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಸರ್ವ ಕುಟುಂಬ ಸಮೀಕ್ಷೆಯಲ್ಲಿಯ ಅಂಕಿಗಳಲ್ಲಿ 30 ಅಂಕಗಳ ಒಳಗಿನ ಫಲಾನುಭವಿಗಳನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ ಮತ್ತು ವಿಶೇಷವಾಗಿ ಮಹಿಳಾ ಫಲಾನುಭವಿಗಳನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ. ಅಂಗವಿಕಲರು, ಹಿರಿಯ ನಾಗರಿಕರು, ವಿಧವೆಯರಿಗೆ ಹಾಗೂ ಮಾಜಿ ಸೈನಿಕರಿಗೆ ಅವಕಾಶ ಕಲ್ಪಿಸಲಾಗುತ್ತದೆ.

ಫಲಾನುಭವಿಗಳನ್ನು ಗ್ರಾಮ ಸಭೆ ಮುಖಾಂತರ ಆಯ್ಕೆ ಮಾಡಲಾಗುತ್ತಿದ್ದು 2005–06 ನೇ ಸಾಲಿನಿಂದ 2010–11 ನೇ ಸಾಲಿನವರೆಗೆ ಯೋಜನೆಯಲ್ಲಿ 24160 ಮನೆಗಳ ಗುರಿ ನಿಗಧಿಪಡಿಸಲಾಗಿದೆ. ಅದರಲ್ಲಿ ನವೆಂಬರ್ 2010 ರ ವರೆಗೆ 13745 ಮನೆಗಳು ಮುಕ್ತಾಯಗೊಂಡಿದ್ದು, ಇನ್ನುಳಿದ 10415 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

2009–10 ನೇ ಸಾಲಿನಲ್ಲಿ ನಿಗಧಿಪಡಿಸಲಾದ ರೂ. 1870.88 ಕೋಟಿಗಳನ್ನು ಫಲಾನುಭವಿಗಳಿಗೆ ನೀಡಲಾಗಿದ್ದು, ಶೇ. 90.35 ಪ್ರಗತಿ ಸಾಧಿಸಿ **ಜಿಲ್ಲೆಯು ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದೆ.**

**ಆಶ್ರಯ ಯೋಜನೆ :** 2005–06 ನೇ ಸಾಲಿನಿಂದ ಇಲ್ಲಿಯವರೆಗೆ ಆಶ್ರಯ ಯೋಜನೆಯಡಿ ಒಟ್ಟು 21307 ಮನೆಗಳ ಗುರಿ ನಿಗಧಿಪಡಿಸಿದ್ದು ನವೆಂಬರ್ 2010 ರ ಅಂತ್ಯಕ್ಕೆ 17990 ಮನೆಗಳನ್ನು ಪೂರ್ಣಗೊಳಿಸಿ ಶೇ. 85 ರಷ್ಟು ಪ್ರಗತಿ ಸಾಧಿಸಿ **ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿರುತ್ತದೆ**. ಇನ್ನುಳಿದ 3317 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.



**ಅಂಬೇಡ್ಕರ್ ಯೋಜನೆ :** 2005–06 ನೇ ಸಾಲಿನಿಂದ ಇಲ್ಲಿಯವರೆಗೆ ಯೋಜನೆಯಡಿ ಒಟ್ಟು 1529 ಮನೆಗಳ ಗುರಿ ನಿಗಧಿಪಡಿಸಿದ್ದು ನವೆಂಬರ್ 2010 ರ ಅಂತ್ಯಕ್ಕೆ 1028 ಮನೆಗಳನ್ನು ಪೂರ್ಣಗೊಳಿಸಿ ಶೇ. 67 ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ ಮತ್ತು ರಾಜ್ಯದಲ್ಲಿ 5 ನೇ ಸ್ಥಾನದಲ್ಲಿರುತ್ತದೆ. ಇನ್ನುಳಿದ 501 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.



## ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ

ಈ ಯೋಜನೆಯು ಗ್ರಾಮೀಣ ಬಡಜನರು ಆದಾಯ ಸೃಜಿಸುವ ಸ್ವಯಂ ಉದ್ಯೋಗಗಳಾದ ಉಡುಪುಗಳ ತಯಾರಿಕೆ, ಕರಕುಶಲ ವಸ್ತು ತಯಾರಿಕೆ, ಹಾಲು ಹಾಗೂ ಹಾಲು ಉತ್ಪನ್ನಗಳ ತಯಾರಿಕೆ, ಬುಟ್ಟಿ ಹೆಣೆಯುವುದು, ವಿವಿಧ ತರಹದ ಸಣ್ಣ ಉದ್ದಿಮೆಗಳನ್ನು ಸ್ಥಾಪಿಸುವುದು ಇವೇ ಮುಂತಾದ ಕಾರ್ಯ ಚಟುವಟಿಕೆಗಳಿಗೆ ಸಹಾಯವನ್ನು ಸಾಲ, ಸಹಾಯಧನ, ತರಬೇತಿ ರೂಪದಲ್ಲಿ ಈ ಯೋಜನೆಯಡಿ ನೀಡಲಾಗುತ್ತಿದೆ.

ಅಯ್ಕೆಯಾದ ಸ್ವರೋಜ್‌ಗಾರ್‌ಗಳಿಗೆ ಸಾಲ ನೀಡುವ ಮೊದಲು ಸದರಿ ಯೋಜನೆ ಬಗ್ಗೆ ಅರಿವು ನೀಡುವ ಹಾಗೂ ಮಾರುಕಟ್ಟೆ ಬಗ್ಗೆ ಸಹ ತರಬೇತಿ ನೀಡಲಾಗುವುದು. ಸಹಾಯಧನವು ಏಕರೂಪವಾಗಿದ್ದು, ವೈಯಕ್ತಿಕ ಫಲಾನುಭವಿಗಳಿಗೆ ಯೋಜನಾ ವೆಚ್ಚದ ಶೇ. 30ರಷ್ಟು ಗರಿಷ್ಟ ರೂ. 7,500, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೇ. 50, ಗರಿಷ್ಟ ಮಿತಿ ರೂ. 10,000, ಗುಂಪುಗಳಿಗೆ ಯೋಜನಾ ವೆಚ್ಚದ ಶೇ. 50ರಷ್ಟು ಅಥವಾ ತಲಾವಾರು ಸಹಾಯಧನ ರೂ. 10,000 ಅಥವಾ ರೂ. 1.25 ಲಕ್ಷಗಳಲ್ಲಿ ಯಾವುದು ಕಡಿಮೆಯೋ ಅದನ್ನು ನೀಡಲಾಗುವುದು. ನೀರಾವರಿ ಯೋಜನೆಗಳಿಗೆ ಸಹಾಯಧನದ ಮೇಲೆ ಹಣಕಾಸಿನ ಪರಿಮಿತಿ ಇರುವುದಿಲ್ಲ. ಕನಿಷ್ಟ ಶೇ. 50ರಷ್ಟು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶೇ. 40ರಷ್ಟು ಮಹಿಳೆಯರಿಗೆ, ಶೇ. 15 ರಷ್ಟು ಅಲ್ಪಸಂಖ್ಯಾತರಿಗೆ ಹಾಗೂ ಶೇ. 3ರಷ್ಟು ಅಂಗವಿಕಲರಿಗೆ ಆದ್ಯತೆ ನೀಡಲಾಗುವುದು.

## ಯಶೋಗಾಥೆಗಳು

**ಅಂಗವಿಕಲರಲ್ಲ, ಇವರು ವಿಕಲಚೇತನರು :** ಅದೊಂದು ಪುಟ್ಟಗ್ರಾಮ. ಗ್ರಾಮದ ಹೆಸರು ಕಮತಗಿ, ನೇಕಾರಿಕೆಯೇ ಪ್ರಮುಖ ಕಸುಬಾಗಿ ಗುರುತಿಸಿಕೊಂಡಿರುವ ಈ ಗ್ರಾಮ ಜಿಲ್ಲೆಯ ಹುನಗುಂದ ತಾಲ್ಲೂಕಿಗೆ ಒಳಪಡುತ್ತದೆ. ಹತ್ತಿರ್ಲದಲೇ ಇರುವ ಇಳಕಲ್ ಪಟ್ಟಣ ಸೀರೆಗಳಿಗೆ 'ಇಳಕಲ್ ಸೀರೆ' ಎಂದು ಪ್ರಸಿದ್ಧಿ ಪಡೆದಿದೆ. ಇದಕ್ಕೆ ಪೂರಕವಾಗಿಯೋ ಎಂಬಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ನೇಕಾರಿಕೆಯೇ ಪ್ರಧಾನ ಕಸುಬು. ಅದಿರಲಿ ಈ ಕಮತಗಿ ಗ್ರಾಮದ ವಿಶೇಷವೇನು ಬಲ್ಲಿರಾ? ಈ ಗ್ರಾಮದಲ್ಲಿ ಆಶ್ಚರ್ಯವೆನಿಸುವ ಮಟ್ಟಿಗೆ ವಿಕಲ ಚೇತನರಿದ್ದಾರೆ. ಯುವ ಸಮುದಾಯಕ್ಕೆ ಸೇರಿದ ಬಹುತೇಕ ಮಂದಿ ಅಂಗವೈಕಲ್ಯಕ್ಕೆ ತುತ್ತಾಗಿದ್ದಾರೆ. ಕಾರಣವೇನೆಂದು ತಿಳಿಯಲು ಹೊರಟರೆ ಮತ್ತೂ ಆಶ್ಚರ್ಯ ಹುಟ್ಟಿಸುತ್ತದೆ. ಬಹುತೇಕ ಮಂದಿ ಸ್ವಂತ ಸಂಬಂಧದಲ್ಲಿಯೇ ಮದುವೆ ಯಾಗುವ ಸಂಪ್ರದಾಯ ಹೊಂದಿದ್ದಾರೆ. ವೈದ್ಯಕೀಯ ವಿಜ್ಞಾನ ಹೇಳುವ ರೀತಿಯಲ್ಲಿ ಈ ರೀತಿಯ ಸ್ವಂತ ಹತ್ತಿರ ಸಂಬಂಧ ದಲ್ಲಿಯ ಮದುವೆಯಿಂದ ಜನಿಸುವ ಮಕ್ಕಳಲ್ಲಿ ಅಂಗವೈಕಲ್ಯಕ್ಕೆ ತುತ್ತಾಗುವ ಸಂಭವವೇ ಹೆಚ್ಚು. ಪರಿಣಾಮ ವೆಂಬಂತೆ ಗ್ರಾಮದ ಅನೇಕ ಮಂದಿ ಅಂಗವೈಕಲ್ಯದಿಂದ ಬಾಧಿಸಲ್ಪಟ್ಟಿದ್ದಾರೆ. ಇತ್ತೀಚೆಗೆ ಈ ವಿಚಾರದಲ್ಲಿ ಗ್ರಾಮಸ್ಥರಲ್ಲಿ ಪರಸ್ಪರ ಅರಿವು ಮೂಡುತ್ತಿರುವುದು ನಿಜಕ್ಕೂ ಆಶಾದಾಯಕ ಸಂಗತಿ.



ಕಥೆ ಇಷ್ಟಕ್ಕೆ ಮುಗಿಯಲಿಲ್ಲ. ಅಂಗವೈಕಲ್ಯ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಂಡು ಅಭಿವೃದ್ಧಿಯತ್ತ ದೃಢ ಹೆಜ್ಜೆ ಹಾಕುತ್ತಿರುವ ಯುವ ಸಮುದಾಯದ ಯಶೋಗಾಥೆ ಇಲ್ಲಿಂದ ಬಿಚ್ಚಿಕೊಳ್ಳುತ್ತದೆ.

ಮೊದಲೆಲ್ಲಾ ತಮ್ಮ ಅಂಗವೈಕಲ್ಯತೆಯನ್ನು ಶಪಿಸುತ್ತಾ ಜೀವನ ನಿರ್ವಹಣೆಗಾಗಿ ಪರಿತಪಿಸುತ್ತಾ ಕಾಲ ಕಳೆಯುವ ಪರಿಸ್ಥಿತಿಯಿತ್ತು. ಈಗ್ಗೆ ನಾಲ್ಕು ವರ್ಷಗಳ ಹಿಂದೆ ಸ್ವಯಂಸೇವಾ ಸಂಸ್ಥೆಯೊಂದರ ನೆರವಿನಿಂದ ಹನ್ನೊಂದು ಮಂದಿಯಂತೆ ನಾಲ್ಕು ಸಂಘವನ್ನು ಮಾಡಿಕೊಂಡು ಸ್ವಂತ ಉದ್ಯೋಗವನ್ನು ಮಾಡುವ ಕನಸು ಕಾಣುತ್ತಾ ಆರ್ಥಿಕ ಸಹಾಯಕ್ಕಾಗಿ ಹತ್ತಿರದ ಬ್ಯಾಂಕುಗಳನ್ನು ಕೋರಲಾಗಿತ್ತು. ಈ ಸಂದರ್ಭದಲ್ಲಿ ಆಶಾಕಿರಣವೆಂಬಂತೆ ಜಿಲ್ಲಾ ಪಂಚಾಯತ್‌ನ ಮೂಲಕ ಸ್ವರ್ಣ ಜಯಂತಿ ಗ್ರಾಮೀಣ ಸ್ವರೋಜ್‌ಗಾರ (ಎಸ್.ಜಿ.ಎಸ್.ವೈ) ಯೋಜನೆಯಡಿ ಸಾಲ ಸೌಲಭ್ಯ ದೊರೆಯುವ ವಿಷಯ ಅಧಿಕಾರಿಗಳಿಂದ ತಿಳಿದುಬಂತು. ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡು ಈ ನಾಲ್ಕು ಸಂಘಗಳು ತಲಾ ರೂ. 2.50 ಲಕ್ಷಗಳ ಸಾಲ ಸೌಲಭ್ಯವನ್ನು ಯೋಜನೆಯಡಿ ಪಡೆಯಲು ನೆರವಾದ ಜಿಲ್ಲಾ ಪಂಚಾಯತ್ ಅಧಿಕಾರಿಗಳ ಸಹಕಾರವನ್ನು ವಿನಮ್ರವಾಗಿ ನೆನೆಯುತ್ತಾರೆ.

ಮೂರೂ ಸಂಘಗಳ ಸದಸ್ಯರುಗಳು ಪಡೆದ ಸಾಲವನ್ನು ಸಮರ್ಪಕವಾಗಿ ಬಳಸಿಕೊಂಡು ಈಗ ಅಗರಬತ್ತಿ ಉದ್ಯಮವನ್ನು ತೊಡಗಿಸಿಕೊಂಡಿದ್ದಾರೆ. ಉದ್ಯಮಕ್ಕೆ ಬೇಕಾದ ಕಚ್ಚಾ ಪದಾರ್ಥವನ್ನು ಸಮೀಪದ ಬಾಗಲಕೋಟೆಯಿಂದ ಪಡೆದು ಅಗರ ಬತ್ತಿಗಳನ್ನು ಸಿದ್ಧಪಡಿಸಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಅಲ್ಲದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯಿಂದ ರಾಜ್ಯಾದ್ಯಂತ ಏರ್ಪಡಿಸುವ 'ಸರಸ್' ಮೇಳದಲ್ಲಿ ಭಾಗವಹಿಸಿ ಆದಾಯವನ್ನು ಗಳಿಸುತ್ತಿದ್ದಾರೆ. ಪ್ರತಿಯೊಬ್ಬ ಸದಸ್ಯರು ತಿಂಗಳಿಗೆ ರೂ. 800 ರಿಂದ ರೂ. 1000 ವರೆವಿಗೂ ಆದಾಯಗಳಿಸುತ್ತಿರುವ ವಿಷಯವನ್ನು



ಅತ್ಯಂತ ಹೆಮ್ಮೆಯಿಂದ ಸಂದರ್ಶನ ವೇಳೆಯಲ್ಲಿ ವ್ಯಕ್ತಪಡಿಸಿರುತ್ತಾರೆ. ಸಂಬಂಧಿಸಿದಂತೆ ತರಬೇತಿಯನ್ನು ಜಿಲ್ಲಾ ಪಂಚಾಯತ್ ನೆರವಿನಿಂದ ಪಡೆದಿದ್ದು ಉದ್ಯಮವನ್ನು ವಿಸ್ತರಿಸುವ ಬಗ್ಗೆ ಮತ್ತಷ್ಟು ತರಬೇತಿಯನ್ನು ಪಡೆಯಲು ಉತ್ಸುಕರಾಗಿದ್ದಾರೆ.

ನಾವೂ ಸಹ ಈಗ ಹೆಮ್ಮೆಯಿಂದ ಹೇಳಬಹುದು. ಇವರು ಅಂಗವಿಕಲರಲ್ಲ. ವಿಕಲಚೇತನರು ಎಂದು.



## ಗ್ರಾಮೀಣ ವಿಕಲಚೇತನರ ನೆರವಿಗೆ ಮುಂದಾಗಿ

ಗ್ರಾಮೀಣ ಪ್ರದೇಶದ ವಿಕಲಚೇತನರ ಕಲ್ಯಾಣಕ್ಕೆ ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬರಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ್ ಶೆಟ್ಟರ್ ಹೇಳಿದರು.

ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಾಮಾಜಿಕ ಜಾಗೃತಿ ಕಾರ್ಯಕ್ರಮದಲ್ಲಿ 'ಗ್ರಾಮಾಂತರ ಶಾಲೆಗಳಲ್ಲಿ ಸಂಯೋಜಿತ ಶಿಕ್ಷಣ-ಪೋಷಕರ ಮಾಗದರ್ಶಿ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಶೇ. 70 ವಿಲಚೇತನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಶೇ. 30 ನಗರದಲ್ಲಿ ವಾಸಿಸುತ್ತಿದ್ದಾರೆ. ಕಡಿಮೆ ವಿಕಲಚೇತನರು ವಾಸಿಸುತ್ತಿದ್ದಾರೆಯೋ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳಿರುವುದು ಸಾಧುವಲ್ಲ. ಈ ಸಂಸ್ಥೆಗಳು ಗ್ರಾಮೀಣ ಪ್ರದೇಶದ ವಿಕಲಚೇತನರ ಸಮಸ್ಯೆ ಪರಿಹಾರಕ್ಕೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ವಿಕಲಚೇತನ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಶೇ. 3ರ ಅನುದಾನವನ್ನು ಸಮರ್ಪಕವಾಗಿ ಬಳಸುವಂತೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗುವುದು. ಸರಕಾರದ ಯೋಜನೆಗಳನ್ನು ವಿಕಲಚೇತನರಿಗೆ ತಲುಪಿಸಲು ಸರಕಾರದ ಜತೆಗೆ ಸ್ವಯಂ ಸೇವಾ ಸಂಸ್ಥೆಗಳ ಸಹಕಾರವೂ ಅವಶ್ಯ. ಸಿಬಿಆರ್ ನೆಟ್‌ವರ್ಕ್ ವಿಕಲಚೇತನರಿಗಾಗಿಯೇ ಸಹಾಯವಾಣಿ ಆರಂಭಿಸುವುದು ಉತ್ತಮ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆ ಆಯುಕ್ತ ಕೆ. ರಾಜಣ್ಣ ಸ್ಥಳೀಯ ಸಂಸ್ಥೆಗಳ ನಿರ್ಲಕ್ಷ್ಯದಿಂದ ವಿಕಲಚೇತನರಿಗೆ ಸರಕಾರದ ಅನುದಾನ ತಲುಪುತ್ತಿಲ್ಲ. ಅಂಗವಿಕಲರು ಮತ್ತು ಹಿರಿಯ ನಾಗರಿಕರ ಇಲಾಖೆಯನ್ನು ಮಹಿಳಾ ಮತ್ತು ಮಕ್ಕಳ ಇಲಾಖೆಯಡಿ ಇಡುವ ಬದಲು ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು. ವಿಕಲ ಚೇತನ ಮಕ್ಕಳು ಅರ್ಧಕ್ಕೆ ಶಾಲೆ ಬಿಡುವುದನ್ನು ಶಿಕ್ಷಣ ಇಲಾಖೆ ಗಂಭೀರವಾಗಿ ಪರಿಗಣಿಸಬೇಕು ಎಂದರು.

ಭಾರತೀಯ ಪುನರ್ವಸತಿ ಮಂಡಳಿ, ಸಿಬಿಆರ್ ನೆಟ್‌ವರ್ಕ್, ರಾಜ್ಯ ಮುಕ್ತ ವಿವಿ ಹಾಗೂ ಮನೋವಿಜ್ಞಾನ ವಿಭಾಗ ಬೆಂಗಳೂರು ಕಾರ್ಯಕ್ರಮ ಆಯೋಜಿಸಿದ್ದವು.

(ಕೃಪೆ : ವಿಜಯಕರ್ನಾಟಕ)

**ನೂರಕ್ಕೆ ನೂರು ಲಾಭ :** ಪ್ರತಿವಾರ ಹತ್ತು ರೂಪಾಯಿಗಳನ್ನು ತೊಡಗಿಸಿ ಯಾವುದಾದರೂ ಸಕಾರಾತ್ಮಕ ಯೋಜನೆಯನ್ನು ಹಮ್ಮಿಕೊಳ್ಳಬಹುದೇ ಎಂಬ ಚಿಂತನೆಯೊಂದಿಗೆ 12 ಮಹಿಳೆಯರ ಗುಂಪೊಂದು 2001ರ




ಇಸವಿಯಲ್ಲಿ ಪ್ರಾರಂಭಿಸಿದ ಸಂಘ ಇಂದು 'ನೂರಕ್ಕೆ ನೂರು ಲಾಭ' ಗಳಿಸಿ ಮಹಿಳಾ ಸ್ವಸಹಾಯ ಸಂಘಗಳಿಗೊಂದು ಮಾದರಿಯಾಗಿ ಮುನ್ನಡೆದಿದ್ದಾರೆ. ಅದುವೇ ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಕಟಗೇರಿ ಗ್ರಾಮದಲ್ಲಿನ ಶ್ರೀ ಲಕ್ಷ್ಮೀ ಸ್ತ್ರೀ ಶಕ್ತಿ ಮಹಿಳಾ ಸ್ವಸಹಾಯ ಸಂಘ.

ಮೊದ ಮೊದಲು ಯಾವುದೇ ಸ್ಪಷ್ಟ ನಿರ್ಧಾರಕ್ಕೆ ಬರಲಾಗದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರ ನೆರವಿನಿಂದ ಹೈನುಗಾರಿಕೆ ಬಗ್ಗೆ ತರಬೇತಿ ಪಡೆದು ನಂತರ ಬ್ಯಾಂಕಿನಿಂದ 30,000 ರೂಪಾಯಿಗಳ ಸಾಲ ಪಡೆದು ಗ್ರಾಮದಲ್ಲಿ ಹೈನುಗಾರಿಕೆಯನ್ನು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ಮತ್ತೊಮ್ಮೆ 50,000 ರೂಪಾಯಿಗಳ ಸಾಲ ಸೌಲಭ್ಯ ಪಡೆದು ಸೋಡಾ ಫ್ಯಾಕ್ಟರಿಯನ್ನು ಆರಂಭಿಸಿ ತಮ್ಮ ಅದೃಷ್ಟವನ್ನು ಪರೀಕ್ಷಿಸಿದರೂ ಸಹ ನಿರೀಕ್ಷಿತ ಯಶಸ್ಸನ್ನು ಗಳಿಸಲು ಸಾಧ್ಯವಾಗಿರಲಿಲ್ಲ.

ನಂತರದ ದಿನಗಳಲ್ಲಿ ಸರ್ಕಾರೇತರ ಸಂಘದ ಸಹಾಯದಿಂದ ಹೊಲಿಗೆ ತರಬೇತಿಯನ್ನು ಪಡೆದು ಸಣ್ಣ ಪ್ರಮಾಣದಲ್ಲಿ ಹೊಲಿಗೆಯನ್ನು ಪ್ರಾರಂಭಿಸಿ ಸುತ್ತಮುತ್ತಲ ಹಳ್ಳಿಗಳಿಗೆ ಹೊಲೆದ ಬಟ್ಟೆಗಳನ್ನು ಪೂರೈಸುತ್ತಿದ್ದರು. ಇದೇ ಸಂದರ್ಭದಲ್ಲಿ ಸ್ವರ್ಣ ಜಯಂತಿ ಗ್ರಾಮಿಣ ಸ್ವರೋಜ್‌ಗಾರ್ ಯೋಜನೆಯ ವತಿಯಿಂದ ಸ್ವಸಹಾಯ ಸಂಘಗಳಿಗೆ ನೆರವು ದೊರೆಯುವ ವಿಷಯವನ್ನು ಅಧಿಕಾರಿಗಳ ಮೂಲಕ ತಿಳಿದು ಸಾಲಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿದರು. ಅಧಿಕಾರಿಗಳ ನೆರವಿನಿಂದ ಯೋಜನೆಯಡಿ 1 ಲಕ್ಷ ರೂಪಾಯಿಗಳ ಸಬ್ಸಿಡಿಯನ್ನು ಪಡೆದು 2.70 ಲಕ್ಷ ರೂಪಾಯಿಗಳನ್ನು ಬ್ಯಾಂಕಿನಲ್ಲಿ ಸಾಲ ಸೌಲಭ್ಯ ಪಡೆದು ಒಟ್ಟಾರೆ 3.70 ಲಕ್ಷ



ರೂಪಾಯಿಗಳೊಂದಿಗೆ ಹೊಲಿಗೆ ಯಂತ್ರಗಳನ್ನು ಸಜ್ಜುಗೊಳಿಸಿ ಹೊಲಿಗೆಯ ಹೆಚ್ಚಿನ ತರಬೇತಿಗೆ ಅಧಿಕಾರಿಗಳನ್ನು ಸಂಪರ್ಕಿಸಿದರು. ಅಧಿಕಾರಿಗಳು, ಬಾಗಲಕೋಟೆ ಜಿಲ್ಲಾ ಪಂಚಾಯತ್ ವತಿಯಿಂದ, ಎಸ್.ಜಿ.ಎಸ್.ವೈ. ಯೋಜನೆಯಡಿಯಲ್ಲಿ 15 ದಿನಗಳ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ರೂಡ್‌ಸೆಟ್ ಸಂಸ್ಥೆ, ಬಾಗಲಕೋಟೆ ಇಲ್ಲಿ ತರಬೇತಿಯನ್ನು ವಸತಿಯೊಂದಿಗೆ ದೊರಕಿಸಿಕೊಟ್ಟರು. ನಂತರ Apperal Training Design Centre (ATDC) ಬಾಗಲಕೋಟೆ ಇಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದರು.

ತರಬೇತಿ ಪಡೆದು ಹಿಂತಿರುಗಿದ ಸದರಿ ಮಹಿಳಾ ಸಂಘದ ಸದಸ್ಯರುಗಳು ಬಟ್ಟೆಗಳ ಬದಲಾಗಿ ಮಹಿಳೆಯರ ಪ್ಯಾನ್ಸಿ ಕೈ ಚೀಲಗಳನ್ನು ಸಿದ್ಧಪಡಿಸಲು ತಯಾರಾಗಿ ಸಂಘದ ದಿಕ್ಕನ್ನೇ ಪ್ರಗತಿಯತ್ತ ಕೊಂಡೊಯ್ಯಲು ನಾಂದಿಯಾದರು. ಕೈ ಚೀಲ ತಯಾರಿಸುವ ಒಂದೊಂದೇ ನಯ ನಾಜೂಕನ್ನು ಬಹಳ ಎಚ್ಚರಿಕೆಯಿಂದ ವಿವಿಧ ಮೂಲಗಳಿಂದ, ಸದಸ್ಯರುಗಳು ಸ್ವಪ್ರಯತ್ನದಿಂದ ಮೈಗೂಡಿಸಿಕೊಂಡು, ವಿವಿಧ ಬಗೆಯ ಕೈ ಚೀಲಗಳನ್ನು ಸಿದ್ಧಪಡಿಸಿ ಸುತ್ತಮುತ್ತಲಿನ ಹಳ್ಳಿಗಳ ಜಾತ್ರೆಗಳ ಸಂದರ್ಭದಲ್ಲಿ, ಇಲಾಖೆಯು ನಡೆಸುವ ಸರಸ್ ವಸ್ತು ಪ್ರದರ್ಶನಗಳಲ್ಲಿ ಹಾಗೂ ಇತ್ತೀಚೆಗೆ ಸ್ವತಃ ಮಹಿಳಾ ಸದಸ್ಯರುಗಳೇ ಸಿದ್ಧಪಡಿಸಿದ ಕೈ ಚೀಲಗಳನ್ನು ನೇರವಾಗಿ ಮಾರಾಟ ಮಾಡುವ ಮಾರುಕಟ್ಟೆ ಕಲೆಗಾರಿಕೆಯನ್ನು ರೂಢಿಸಿಕೊಂಡಿದ್ದಾರೆ. ಇದೆಲ್ಲದರ ಪರಿಣಾಮವಾಗಿ ಮೊದಲು ಸಣ್ಣ ಪ್ರಮಾಣದಲ್ಲಿ ಕೈ ಚೀಲಗಳನ್ನು ಸಿದ್ಧಪಡಿಸಿ ಮಾರಾಟ ಮಾಡಲು ತ್ರಾಸಪಡುತ್ತಿದ್ದ ಕಾಲ ಬದಲಾಗಿ, ಇತ್ತೀಚೆಗೆ ಬೇಡಿಕೆಯನ್ನು ಪೂರೈಸಲು ನಿಗದಿತ ವೇಳೆಗಿಂತ ಹೆಚ್ಚಿನ ಕೆಲಸವನ್ನು ಮಾಡುವಂತ ಪರಿಸ್ಥಿತಿಗೆ ತಲುಪಿದ್ದಾರೆ. ಮಾರುಕಟ್ಟೆಯಲ್ಲಿ ಸಗಟು ಪ್ರಮಾಣದಲ್ಲಿ ಕಚ್ಚಾ ಪದಾರ್ಥಗಳನ್ನು ಖರೀದಿಸುವುದು, ನವೀನ ವಿನ್ಯಾಸಗಳನ್ನು ಆಸಕ್ತಿಯಿಂದ ಕಲಿತು ಕೈ ಚೀಲಗಳನ್ನು ಮತ್ತೂ ಆಕರ್ಷಣೀಯಗೊಳಿಸುವುದು, ಯಾವುದೇ ಪದಾರ್ಥವನ್ನು ನಿರುಪಯುಕ್ತಗೊಳಿಸದೇ ಸಮರ್ಪಕವಾಗಿ ಬಳಸಿಕೊಳ್ಳುವುದು ಮುಂತಾದ ಉದ್ಯಮದ ಕೆಲವು ಸೂಕ್ಷ್ಮಗಳನ್ನು ಅತ್ಯಂತ ವಿಶೇಷ ರೀತಿಯಲ್ಲಿ ಸ್ವಪ್ರಯತ್ನದಿಂದ ಬಳಸಿಕೊಂಡು ಪ್ರಸಕ್ತ ಉದ್ಯಮದಲ್ಲಿ 'ನೂರಕ್ಕೆ ನೂರು' ಲಾಭ ಗಳಿಸುತ್ತಿದ್ದಾರೆ. ಈ ವಿಷಯವನ್ನು ಅತ್ಯಂತ ಹೆಮ್ಮೆಯಿಂದ ಹೇಳುತ್ತಾ ಇಲಾಖೆಯ ಅಧಿಕಾರಿ ಸಿಬ್ಬಂದಿಗಳ ನೆರವನ್ನು ನೆನಪು ಮಾಡಿಕೊಳ್ಳುತ್ತಾ, ಮುಂದಿನ ಭವಿಷ್ಯದ ಯೋಜನೆಯಲ್ಲಿ ಎಂಬ್ರಾಯಿಡರಿ, ಸ್ಯಾರಿ ಡಿಸೈನಿಂಗ್,



ಕೌಶಲ್ಯಾಭಿವೃದ್ಧಿ ಮತ್ತು ಯಾಂತ್ರೀಕೃತ ಹೊಲಿಗೆ ಯಂತ್ರಗಳ ನಿರ್ವಹಣೆ ಬಗ್ಗೆ ಹೆಚ್ಚಿನ ತರಬೇತಿಯನ್ನು ಪಡೆಯಬೇಕೆಂದು ಈಗಾಗಲೇ ಯೋಜನೆಯನ್ನು ಹಮ್ಮಿಕೊಂಡು ಇಲಾಖಾ ಅಧಿಕಾರಿಗಳಲ್ಲಿ ಬೇಡಿಕೆಯಿಟ್ಟಿದ್ದಾರೆ.

ಉದ್ಯಮವನ್ನು ನೂರಕ್ಕೆ ನೂರರಷ್ಟು ಲಾಭಗೊಳಿಸುವಲ್ಲಿ ಯಶಸ್ವಿಯಾಗಿ ಬೀಗುತ್ತಿರುವ, ಸದರಿ ಮಹಿಳಾ ಸದಸ್ಯರುಗಳು ಈ ಕಾರ್ಯ ಕೈಗೂಡಲು ಬೆನ್ನೆಲುಬಾಗಿ ನಿಂತ ತಮ್ಮ ಕುಟುಂಬ ವರ್ಗದವರ ನೆರವನ್ನು ಸಂದರ್ಶನದ ವೇಳೆಯಲ್ಲಿ ದಾಖಲಿಸುವುದನ್ನು ಮರೆಯಲಿಲ್ಲ. ಇದು ಇತರ ಸಂಘ ಸಂಸ್ಥೆಗಳಿಗೂ ಮಾದರಿಯಲ್ಲವೆ?

❑

# ನೀಚ ಬುದ್ಧಿಯ ಬಿಡು ನಾಲಗೆ

ಒಬ್ಬರನ್ನು ಅವಮಾನಿಸಿ ತಾನು ಸಂತೋಷಪಡುವ ಜನ ಇಂದು ಸಮಾಜದಲ್ಲಿ ಎಲ್ಲೆಲ್ಲೂ ಕಾಣಬಹುದು. ವಿದ್ಯಾವಂತ ಸಮಾಜದಲ್ಲಿಯೂ ಸಹ ಈ ರೀತಿಯ ಜನಗಳಿಗೆ ಬರವಿಲ್ಲ. ಜನರಿಂದಲೇ ಗೆದ್ದು ಬಂದು, ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರೆಂದು ಭಾವಿಸಿ, ಸಮಾಜ ಸೇವೇ ಜನಾರ್ಧನ ಸೇವೆ ಎಂದು ಸಮಾಜ ಸೇವೆ ಮಾಡಬೇಕಾದವರೇ, ಪ್ರತಿಕ್ಷಣದಲ್ಲೂ ಅನಾವಶ್ಯಕವಾಗಿ ಇತರರನ್ನು ನಿಂದಿಸುತ್ತಾ ಕಾಲ ಹರಣ ಮಾಡುತ್ತಿದ್ದಾರೆ.

ಅವಕಾಶ ಸಿಕ್ಕಾಗಲೆಲ್ಲ ನಾಲಗೆ ಹರಿಯಬಿಟ್ಟು ಇತರರನ್ನು ದೂಷಿಸುತ್ತಾರೆ. ಇದರಿಂದ ಸಮಾಜದಲ್ಲಿ ದುಷ್ಪರಿಣಾಮಗಳಾಗುವುದಿಲ್ಲವೆ? ಇಂತಹವರ ನಾಲಗೆಗೆ ಯಾವ ರೀತಿ ಕಡಿವಾಣ ಹಾಕುವ?




## ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು

1. ಪರರನ್ನು ನಿಂದಿಸಿ ಆನಂದಪಡುವುದು ಎಷ್ಟರಮಟ್ಟಿಗೆ ಸರಿ?
2. ಜನ ಪ್ರತಿನಿಧಿಗಳು, ಸಾಹಿತಿಗಳು, ಸಮಾಜ ಸೇವಕರು ಅನಾವಶ್ಯಕ ಪರರನ್ನು ನಿಂದಿಸುವುದು ಸರಿಯೇ?
3. ಸಭೆ ಸಮಾರಂಭಗಳಲ್ಲಿ ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಮತ್ತೊಬ್ಬರನ್ನು ಹೀಯಾಳಿಸಿ ತೃಪ್ತಿಪಡಬಹುದೇ?
4. ಮತ್ತೊಬ್ಬರನ್ನು ದೂಷಿಸಿದರೆ ನಮ್ಮನ್ನೂ ಇತರರು ನಿಂದಿಸುತ್ತಾರೆ ಎಂದು ಇವರೇಕೆ ಚಿಂತಿಸುವುದಿಲ್ಲ?
5. ಸಮಾಜಸೇವೆ, ಪರೋಪಕಾರದ ನೆಪದಲ್ಲಿ ಇತರರ ಮನನೋಯಿಸುವ ಹಕ್ಕು ಇವರಿಗಿದೆಯೆ?

– ಮೂವೇರ ರೇಖಾ ಪ್ರಕಾಶ್
ಬಲ್ಲಮಾವಟಿ ಗ್ರಾಮ, ಬಲ್ಲಮಾವಟಿ ಅಂಚೆ,
ಮಡಿಕೇರಿ, ಕೊಡಗು – 571 201.

ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/– ಬಹುಮಾನ ನೀಡಲಾಗುವುದು.

## ನಿರ್ಮಲ

**ಸಂಪೂರ್ಣ ಸ್ವಚ್ಛತಾ ಆಂದೋಲನ**

ಸ್ವಚ್ಛ ಕರ್ನಾಟಕ

# ನುಡಿ ನಿರ್ಮಲ

ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಉತ್ತೇಜಿಸುವಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಅತ್ಯಂತ ಪ್ರೇರಕಶಕ್ತಿಯಾಗಿ ಕಾರ್ಯನಿರ್ವಹಿಸಿರುವುದು ದಿಟ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಪ್ರೇರೇಪಿಸಲಿಕ್ಕೆ ಹಾಗೂ ವೈಯಕ್ತಿಕ ಗೃಹ ಶೌಚಾಲಯ, ಶಾಲಾ ಶೌಚಾಲಯ, ಅಂಗನವಾಡಿ ಶೌಚಾಲಯ ಹಾಗೂ ಗ್ರಾಮಗಳಲ್ಲಿನ ಕಸ ಮತ್ತು ಬಳಸಿದ ನೀರಿನ ನಿರ್ವಹಣೆ ಮುಂತಾದ ಸ್ವಚ್ಛತೆಯ ಎಲ್ಲ ಘಟಕಾಂಶಗಳನ್ನು ಸಾಧಿಸಿಲು ಪೂರಕವಾಗಿ ಕಾರ್ಯನಿರ್ವಹಿಸುವಲ್ಲಿ ಸಹಕಾರಿಯಾಗಿದೆ. ಅಷ್ಟರ ಮಟ್ಟಿಗೆ ಪ್ರಶಸ್ತಿಯ ಪ್ರಭಾವ ಕೆಲಸ ಮಾಡುತ್ತಿದೆ ಮತ್ತು ಗ್ರಾಮೀಣ ಜನರಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸ್ವಚ್ಛತೆಯ ಅಭ್ಯಾಸಗಳನ್ನು ಹಾಗೂ ನೈರ್ಮಲ್ಯದಂತಹ ಕ್ಲಿಷ್ಟಕರ ವಲಯವನ್ನು ಸುಧಾರಿಸುವಲ್ಲಿ ಸಫಲವಾಗಿದೆಯೆಂದೇ ಹೇಳಬೇಕು. ಈ ಎಲ್ಲ ಅನುಭವಗಳ ಹಿನ್ನಲೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಇನ್ನಷ್ಟು ಉತ್ತೇಜಿಸಲು ಕರ್ನಾಟಕ ಸರ್ಕಾರವೂ ಸಹ 'ನೈರ್ಮಲ್ಯ' ರಾಜ್ಯ ಪ್ರಶಸ್ತಿಯನ್ನು ಜಾರಿಗೊಳಿಸಿದೆ. 2009ರ ಅಕ್ಟೋಬರ್ 2 ರಂದು ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯ ನೈರ್ಮಲ್ಯ ಪ್ರಶಸ್ತಿಗೆ ಚಾಲನೆ ನೀಡಿದ್ದು ಪ್ರಸಕ್ತ ಸಾಲಿನಿಂದ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ. ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಎಲ್ಲ ಹಳ್ಳಿಗಳ ಪ್ರತಿ ಕುಟುಂಬಗಳನ್ನು ಶೌಚಾಲಯ ಹೊಂದುವಂತೆ ಪ್ರೇರೇಪಿಸಿ, ಮನವೊಲಿಸಿ, ಕಾರ್ಯ ಸಾಧನೆ ಮಾಡಿ, ಇಡೀ ಪಂಚಾಯಿತಿಯನ್ನು ಸಂಪೂರ್ಣ ಸ್ವಚ್ಛತೆ ಸಾಧಿಸಿದ ಗ್ರಾಮ ಪಂಚಾಯಿತಿಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಿರುತ್ತವೆ. ಈ ಸಂಬಂಧ ಈಗಾಗಲೇ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸ್ವಚ್ಛತೆಯ ಸಾಧನೆಯ ಕುರಿತು ಮೌಲ್ಯಮಾಪನ ಕಾರ್ಯವನ್ನೂ ನಡೆಸಲಾಗಿದೆ. ಸ್ವಚ್ಛತೆಯ ಸಾಧನೆಗಾಗಿ ಜನರು ಮಾಡಿದ ಶ್ರಮ ಹಾಗೂ ಅವರು ಹೊಂದಿರುವ ಭಾವನೆಗಳಿಗೆ ಧಕ್ಕೆ ತರದ ರೀತಿಯಲ್ಲಿ ಸಕಾರಾತ್ಮಕ ವಿಶ್ಲೇಷಣೆಯಿಂದ ಮೌಲ್ಯಮಾಪನ ಮಾಡಲಾಗಿದೆ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ನೈರ್ಮಲ್ಯ ಪರಿಸ್ಥಿತಿಯನ್ನು ಸುಧಾರಿಸಲು ಕರ್ನಾಟಕ ಸರ್ಕಾರವು ಸಂಪೂರ್ಣ ಸ್ವಚ್ಛತಾ ಆಂದೋಲನಕ್ಕೆ ವಿಶೇಷ ಆದ್ಯತೆಯನ್ನು ನೀಡಿ ಅನುಷ್ಠಾನಗೊಳಿಸುತ್ತಿದೆ. ಗ್ರಾಮೀಣ ಸಮುದಾಯವನ್ನು ಹಾಗೂ ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನದ ಹೊಣೆ ಹೊತ್ತಿರುವ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಉತ್ತೇಜಿಸುವುದು ನೈರ್ಮಲ್ಯ ಪ್ರಶಸ್ತಿಯ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಜನರಿಗೆ ಶೌಚಾಲಯ ಸೌಲಭ್ಯ ನೀಡುವ ಜೊತೆಗೆ ಶೌಚಾಲಯದ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ತಿಳುವಳಿಕೆಯನ್ನು ನೀಡುವ ಮೂಲಕ ಜನರ ನೈರ್ಮಲ್ಯದ ಅಭ್ಯಾಸಗಳಲ್ಲಿ ಸುಧಾರಣೆ ತರಬೇಕಾಗಿದೆ. ಒಟ್ಟಾರೆ 2012 ಅಂತ್ಯದ ವೇಳೆಗೆ ಕರ್ನಾಟಕ ರಾಜ್ಯವನ್ನು ಸಂಪೂರ್ಣವಾಗಿ ನಿರ್ಮಲ ರಾಜ್ಯವನ್ನಾಗಿ ರೂಪಿಸಬೇಕಿರುತ್ತದೆ. ಅತ್ಯಂತ ಕ್ಲಿಷ್ಟಕರವಾದ ಈ ಬೃಹತ್ ಕಾರ್ಯವನ್ನು ಸಾಧಿಸುವ ಮೂಲಕ ಗಾಂಧೀಜಿಯವರ ಸ್ವಚ್ಛ ಹಾಗೂ ಸ್ವಾಭಿಮಾನಿ ಗ್ರಾಮಗಳ ಕನಸನ್ನು ನನಸು ಮಾಡಬೇಕು, ಇದಕ್ಕಾಗಿ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸ್ವಸಹಾಯ–ಸ್ವಯಂಸೇವಾ ಸಂಸ್ಥೆಗಳು ಕೈಜೋಡಿಸಿ ಕಾರ್ಯನಿರ್ವಹಿಸಬೇಕಿದೆ. ಕೇವಲ ಶೌಚಾಲಯಗಳ ನಿರ್ಮಾಣ ಮಾತ್ರ ನಮ್ಮ ಆದ್ಯತೆಯಾಗಬಾರದು, ಅವುಗಳ ಬಳಕೆ, ನಿರ್ವಹಣೆಗಳನ್ನು ಖಾತ್ರೀಕರಿಸಬೇಕು. ಯಾವುದೆ ಒಂದು ಸೌಲಭ್ಯ ಅಥವಾ ಯೋಜನೆ ಸಫಲಗೊಳ್ಳಬೇಕೆಂದರೆ ಸುಸ್ಥಿರತೆ ಅತ್ಯಂತ ಪ್ರಮುಖ. ಸುಸ್ಥಿರತೆ ಇಲ್ಲದ ಯಾವುದೇ ಯೋಜನೆ ಅಥವಾ ಕಾರ್ಯಕ್ರಮಗಳು ಅಭಿವೃದ್ಧಿಗೆ ಯಾವತ್ತೂ ಮಾರಕವೆಂದೇ ಹೇಳಬೇಕು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳು ಸಮುದಾಯದ ಸಹಭಾಗಿತ್ವ ಹಾಗೂ ಸಹಕಾರಗಳೊಂದಿಗೆ ಕಾರ್ಯನಿರ್ವಹಿಸುವಂತಾಗಲಿ ಎಂಬ ಆಶಯ ನನ್ನದು.


**– ಡಾ|| ಪಿ. ಬೋರೇಗೌಡ,**

ನಿರ್ದೇಶಕರು, ಕ.ಗ್ರಾ.ನೀ.ಸ. ಮತ್ತು ನೈ. ಸಂಸ್ಥೆ,

ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ.

# ಸ್ವಚ್ಛತೆಯ ಸುಧಾರಣೆಗೆ ವಿನೂತನ ವಿಧಾನಗಳು



ಕರ್ನಾಟಕ ರಾಜ್ಯ ಭಾರತ ದೇಶದ ಅತ್ಯಂತ ಪ್ರಮುಖ ರಾಜ್ಯ. ಭೌಗೋಳಿಕವಾಗಿ ಮಲೆನಾಡು, ಕರಾವಳಿ, ಕಾನನ, ಬಯಲು ಪ್ರದೇಶಗಳ ಸಂಗಮ. ಸಾಹಿತ್ಯ, ಕಲೆ, ಶಿಲ್ಪಕಲೆ, ಸಂಸ್ಕೃತಿ, ಐತಿಹಾಸಿಕ ಪರಂಪರೆ, ಸಂಪತ್ತು, ವಿಜ್ಞಾನ, ತಂತ್ರಜ್ಞಾನಗಳ ತವರು. ಇಡೀ ರಾಷ್ಟ್ರದಲ್ಲಿಯೇ ಅತಿ ಹೆಚ್ಚು ಜ್ಞಾನಪೀಠಗಳನ್ನು ಪಡೆದ ಹಿರಿಮೆ ಕರ್ನಾಟಕ ರಾಜ್ಯದ್ದು, ಇದು ಯಾವತ್ತಿಗೂ ವಿಕಾಸ-ಮುಖಿ, ವಿಚಾರ-ಮುಖಿ, ಸಮಾಜ-ಮುಖಿ, ಸರ್ವಾಂಗೀಣ ಅಭಿವೃದ್ಧಿಯ ಪ್ರತಿಬಿಂಬ. ವಿಜ್ಞಾನ, ತಂತ್ರಜ್ಞಾನ, ಐಟಿ, ಬಿಟಿ, ಕೈಗಾರಿಕೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನ ಹೆಸರನ್ನು ದಾಖಲಿಸಿರುವಂತೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯ ಯಶಸ್ವಿ ಅನುಷ್ಠಾನಕ್ಕೆ ಮತ್ತೊಂದು ಹೆಸರು ಕರ್ನಾಟಕ ರಾಜ್ಯ. ದೇಶದಲ್ಲಿಯೇ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಅತ್ಯಂತ ಮುಂಚೂಣಿಯ ರಾಜ್ಯ. ಇಡೀ ರಾಷ್ಟ್ರದಲ್ಲಿಯೇ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೊಳಿಸಿದ ಪ್ರಥಮ ರಾಜ್ಯ ಎಂಬ ಹೆಗ್ಗಳಿಕೆ ಕರ್ನಾಟಕದ್ದು. ಗ್ರಾಮೀಣಾಭಿವೃದ್ಧಿಯೆಂದರೆ ಗ್ರಾಮೀಣ ಜನರ ಬದುಕಿನ ಸುಧಾರಣೆ. ಇದು ಅವರ ಆರೋಗ್ಯ ಹಾಗೂ ದುಡಿಮೆಯ ಶಕ್ತಿಯನ್ನು ಅವಲಂಬಿಸಿರುತ್ತದೆ. ಅರೋಗ್ಯ ಹಾಗೂ ನೈರ್ಮಲ್ಯಗಳು ಒಂದೇ ನಾಣ್ಯದ ಎರಡು ಮುಖಗಳು. ನೈರ್ಮಲ್ಯ ಸುಧಾರಣೆಯಾಗದ ಹೊರತು ಆರೋಗ್ಯ ಸುಧಾರಣೆ ಸಾಧ್ಯವಿಲ್ಲ. ಹಾಗೆಯೇ ಆರೋಗ್ಯ ಸುಧಾರಣೆಯಾಗದ ಹೊರತು ಜೀವನ ಗುಣಮಟ್ಟ ಸುಧಾರಣೆಯೂ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಕರ್ನಾಟಕ ಸರ್ಕಾರವು ಅತ್ಯಂತ ಆದ್ಯತೆಯ ಕಾರ್ಯಕ್ರಮವನ್ನಾಗಿ ಅನುಷ್ಠಾನಗೊಳಿಸುತ್ತಿದೆ. ದೇಶದ ಇತರ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಕರ್ನಾಟಕ ರಾಜ್ಯ ನೈರ್ಮಲ್ಯ ಸಾಧನೆಯಲ್ಲಿ ಇನ್ನಷ್ಟು ಹೆಚ್ಚಿನ ಪ್ರಗತಿಯನ್ನು ಸಾಧಿಸುವುದು ಅತ್ಯಂತ ಅವಶ್ಯವೆಂದೇ ಹೇಳಬೇಕು.



'ಬಯಲುಶೌಚ' ಅಥವಾ 'ಬಯಲಕಡೆ ಹೋಗುವುದು' ಎಂಬುದು ನಮ್ಮ ಗ್ರಾಮೀಣ ಪ್ರದೇಶಗಳ ಜನರು ನೂರಾರು ವರ್ಷಗಳಿಂದ ರೂಢಿಸಿಕೊಂಡು ಬಂದ ಅಭ್ಯಾಸ. ದಿನನಿತ್ಯದ ದೇಹಬಾದೆಗಳನ್ನು ತೀರಿಸಿಕೊಳ್ಳಲು ಅವರಿಗೆ ಊರಾಚೆಗಿನ ಬಯಲೇ ಕಕ್ಕಸ್ಸು ಮನೆ, ಊರ ಸುತ್ತಲಿನ ಗಿಡ-ಪೊದೆಗಳೆ ಸಂಡಾಸು, ಕೆರೆ-ಕುಂಟೆಗಳ ಅಂಗಳವೇ ಶೌಚಾಲಯ. ಊರುಗಳು ಬೆಳೆದಂತೆ, ಊರ ಸುತ್ತ ಪೊದೆಗಳಿಲ್ಲ, ಗಿಡ-ಮರಗಳ ಮರೆ ಯಿಲ್ಲ, ಹಳ್ಳಿಗಾಡಿನ ಹೆಣ್ಣು ಮಕ್ಕಳ ಸ್ಥಿತಿ ಹೇರತೀರದು. ಅವರು ಗಂಡಸರಂತೆ ಎಲ್ಲೆಂದರಲ್ಲಿ ಹಗಲು ಹೊತ್ತಿನಲ್ಲಿ ಕೂರಲಾಗದು, ಅವರಿಗೆ ಮರೆಬೇಕು. ಗೌಪ್ಯತೆ ಬೇಕು. ಅದಕ್ಕಾಗಿ ಅವರು ಕತ್ತಲಿಗಾಗಿ ಕಾಯಲೇಬೇಕು. ಆದ್ದ ರಿಂದಲೇ ಬೆಳಕು ಹರಿಯುವ ಮುನ್ನ, ಸಂಜೆಯಾದ ನಂತರ ಹಳ್ಳಿಗಳ ರಸ್ತೆ ಬದಿಗಳಲ್ಲಿ ಮಲ ವಿಸರ್ಜನೆಗೆ ಕುಳಿತ ಮಹಿಳೆಯರ ಸಾಲು ಸಾಲು ದೃಶ್ಯ ಗ್ರಾಮೀಣ ಪ್ರದೇಶಗಳಲ್ಲಿ ಸರ್ವೇಸಾಮಾನ್ಯ. ಪೋಲಿಗಳ, ಕಳ್ಳ-ಕಾಕರ, ವಿಷಜಂತುಗಳ ತೊಂದರೆ ಹೆಣ್ಣುಮಕ್ಕಳಿಗೆ ತಪ್ಪಿದ್ದಲ್ಲ. ಇದರೊಂದಿಗೆ ಎಡಬಿಡದೆ ಕಾಡುವ ಕಾಯಿಲೆಗಳ ತೊಂದರೆಗಳು ನಿರಂತರ.





ಒಟ್ಟಾರೆ ಗ್ರಾಮೀಣ ಜನರ ನೈರ್ಮಲ್ಯಜೀವನ ವಿಧಾನ ಹಾಗೂ ಅವರ ರೂಢಿಗತ ಅಭ್ಯಾಸಗಳು ಸ್ವಚ್ಛತೆಯ ವಿಷಯದಲ್ಲಿ ಆಶಾದಾಯಕವಾಗಿಲ್ಲ. ಆಧುನಿಕತೆ, ವಿಜ್ಞಾನ, ಮಾಹಿತಿ ತಂತ್ರಜ್ಞಾನ, ಮೊಬೈಲ್ ಕ್ರಾಂತಿ ಹಳ್ಳಿಗಳನ್ನು ತಲುಪಿರುವುದಂತೂ ನಿಜ. ವಿಪರ್ಯಾಸವೆಂದರೆ ನೈರ್ಮಲ್ಯ ಸಂಬಂಧಿ ಅಭ್ಯಾಸಗಳಲ್ಲಿ ಮಾತ್ರ ಸುಧಾರಣೆ ಕಂಡುಬರುತ್ತಿಲ್ಲ; ಬಲಗೈಯಲ್ಲಿ ಮೊಬೈಲ್ ಹಿಡಿದು ಮಾತಾಡುತ್ತಲೇ ಎಡಗೈಯಲ್ಲಿ ಚೆಂಬು (ಚರಿಗೆ) ಹಿಡಿದು ಬಯಲಕಡೆ ಹೋಗುವ ಪ್ರಸಂಗಗಳು ಕಡಿಮೆಯೇನಿಲ್ಲ. ಹಣವಿಲ್ಲದ್ದಕ್ಕೆ ಅವರಿಗೆ ಶೌಚಾಲಯವಿಲ್ಲವೋ ಅಥವಾ ಅದು ಅವರಿಗೆ ಬೇಕು ಅಂತ ಅನ್ನಿಸಿಲ್ಲವೋ? ಎಂಬ ಪ್ರಶ್ನೆಗಳು ಏಳುವುದು ಸಹಜ. ಮೊಬೈಲ್ ಅವರಿಗೆ ಬೇಕು ಅನ್ನಿಸಿದೆ. ಟಿವಿ–ರೇಡಿಯೋಗಳು ಬೇಕು ಅನ್ನಿಸಿದೆ. ಹಾಗಾಗಿ ಅವುಗಳನ್ನು ಅವರು ಕೊಂಡುಕೊಂಡಿದ್ದಾರೆ. ಆದರೆ ಅವರಿಗೆ ಶೌಚಾಲಯಗಳಿಲ್ಲ ಅಂದರೆ...! ಅವು ಅವರಿಗೆ ಬೇಕು ಅನ್ನಿಸಿಲ್ಲದಿರಬಹುದು ಅಥವಾ ಶೌಚಾಲಯದ ಅಗತ್ಯತೆಯ ಬಗ್ಗೆ ಅವರಿಗೆ ಹೆಚ್ಚಿನ ಮಾಹಿತಿ ಇಲ್ಲದಿರುವ ಸಾಧ್ಯತೆಗಳೂ ಇರುತ್ತವಲ್ಲವೆ?

ಗ್ರಾಮೀಣ ಜನ ಬಹಿರ್ದೆಸೆಗೆ ಬಯಲಿಗೆ ಹೋಗಬಾರದು ಅಂತಲೇ ಸರ್ಕಾರ ಹಲವಾರು ಯೋಜನೆಗಳನ್ನು ಕಳೆದ ಎರಡೂವರೆ ದಶಕಗಳಿಂದಲೂ ರೂಪಿಸುತ್ತಲೇ ಬಂದಿದೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಸರ್ಕಾರವೇ ಶೌಚಾಲಯಗಳನ್ನು ನಿರ್ಮಿಸಿಕೊಟ್ಟಿದ್ದೂ ಉಂಟು. ಆದರೆ ಜನ ಮಾತ್ರ ಅದರಲ್ಲಿ ಕೂರಲೇ ಇಲ್ಲ; ಬದಲಾಗಿ ಅವರ ಮನಸ್ಸುಗಳು ಬಯಲಿನತ್ತಲೇ ತುಡಿಯುತ್ತಿದ್ದವು. ಅನುಭವ ಹಾಗೂ ಅಧ್ಯಯನಗಳು ಇದನ್ನು ಸ್ಪಷ್ಟಪಡಿಸಿದವು. ಆಗ ಸರ್ಕಾರವು ನೈರ್ಮಲ್ಯ ಯೋಜನೆಯ ಅನುಷ್ಠಾನ ವಿಧಾನವನ್ನು ಬದಲಿಸಿ ಜನಾಂದೋಲನದ ಸ್ವರೂಪ ನೀಡಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಜಾರಿಗೊಳಿಸಿತು. ಮಾಹಿತಿ ಶಿಕ್ಷಣ ಸಂವಹನ ಚಟುವಟಿಕೆಗಳ ಮೂಲಕ ಗ್ರಾಮೀಣ ಜನರಲ್ಲಿ ನೈರ್ಮಲ್ಯದ ಕುರಿತು ಅರಿವು ಮೂಡಿಸಲು ಆಂದೋಲನ ಮಾದರಿಯ ಕಾರ್ಯಕ್ರಮಗಳನ್ನು ರೂಪಿಸಿತು. ಇದರಿಂದಾಗಿ ಗ್ರಾಮೀಣ ಜನರಲ್ಲಿ ನೈರ್ಮಲ್ಯಕ್ಕಾಗಿ ನಿಧಾನವಾಗಿ ಬೇಡಿಕೆ ಮೂಡಲಾರಂಭಿಸಿತು. ಮತ್ತಷ್ಟು ಅನುಭವಗಳು ಹಾಗೂ ಅಧ್ಯಯನಗಳಿಂದಾಗಿ ನಿಧಾನಗತಿಯ ಬೇಡಿಕೆಯನ್ನು ತ್ವರಿತಗತಿಯ ಬೇಡಿಕೆಯಾಗಿ ಪರಿವರ್ತಿಸುವಲ್ಲಿ ಪರಿಣಾಮಕಾರಿಯಾಗಿರುವ ಸಮುದಾಯ ನೇತೃತ್ವದ ಸಂಪೂರ್ಣ ನೈರ್ಮಲ್ಯ ವಿಧಾನವನ್ನು ಅಳವಡಿಸಿಕೊಂಡು ಸ್ವಚ್ಛತೆಯ ಸಾಧನೆಯನ್ನು ತೀವ್ರಗೊಳಿಸಲು ಯತ್ನಿಸಲಾಗುತ್ತಿದೆ. ಇದು ಸುಲಭವಾಗಿ ಜನರ ಮನಸನ್ನು ಪರಿವರ್ತಿಸುವ ಮಾರ್ಗ. ಇಲ್ಲಿ ವ್ಯಕ್ತಿ ಅಥವಾ ಕುಟುಂಬವನ್ನು ಗುರಿಯಾಗಿಸಿಕೊಳ್ಳುವ ಬದಲು ಇಡೀ ಸಮುದಾಯ ಅಥವಾ ಗ್ರಾಮವನ್ನು ಗುರಿಯಾಗಿಸಿಕೊಳ್ಳಲಾಗುತ್ತದೆ. ಇಲ್ಲಿ ಜಾಥಾ, ಘೋಷಣೆ, ಭಾಷಣ, ಗೋಡೆ ಬರಹ, ತರಬೇತಿಗಳ ಅಬ್ಬರವಿಲ್ಲ; ಇದು ಗ್ರಾಮದ ಎಲ್ಲ ಜನರೊಂದಿಗಿನ ನೇರ ಸಂವಾದ ಹಾಗೂ ಸಹಭಾಗಿತ್ವದ ನಡಿಗೆ. ಎಲ್ಲವೂ ಸಮುದಾಯದ ಸಮಕ್ಷಮದಲ್ಲಿಯೇ ತೀರ್ಮಾನ. ತನಗೆ ಬೇಕಾದ ಸೌಲಭ್ಯಗಳನ್ನು ಸಮುದಾಯವೇ ಹೊಂದುವಂತೆ ಮಾಡಲಾಗುತ್ತದೆ.







ಬಯಲು ಮಲ ವಿಸರ್ಜನೆಯ ದುಷ್ಪರಿಣಾಮಗಳನ್ನು ಕೇವಲ ಒಬ್ಬ ವ್ಯಕ್ತಿಗೆ ಮನವರಿಕೆ ಮಾಡುವುದರ ಬದಲು, ಇಡೀ ಸಮುದಾಯಕ್ಕೆ ಮನವರಿಕೆ ಮಾಡುವ ತಂತ್ರಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಶೌಚಾಲಯ ನಿರ್ಮಿಸಿಕೊಳ್ಳಿ ಎಂಬ ಮಾತೆ ಇಲ್ಲಿ ಬರುವುದಿಲ್ಲ. ಇದರ ಬದಲಾಗಿ ಬಯಲಿಗೆ ಹೋಗೋದರಿಂದ ಏನೆಲ್ಲಾ ತೊಂದರೆಗಳಿವೆ ಎಂಬುದನ್ನು ಸಮುದಾಯದ ಸಮಕ್ಷಮದಲ್ಲಿ ಪ್ರಾತ್ಯಕ್ಷಿಕೆಗಳ ಮೂಲಕ ತೋರಿಸಿ ಮನ ಪರಿವರ್ತನೆ ಮಾಡಿಕೊಡಲಾಗುತ್ತದೆ. ಸಮುದಾಯ ಆಧಾರಿತ ನೈರ್ಮಲ್ಯ ವಿಧಾನದಲ್ಲಿ ಗ್ರಾಮ ನಡಿಗೆ, ಗ್ರಾಮ ವೀಕ್ಷಣೆ, ಗ್ರಾಮನಕ್ಷೆ ಮುಂತಾದ ಅತ್ಯಂತ ಸರಳ ತಂತ್ರಗಳನ್ನು ಬಳಸಿಕೊಂಡು ಗ್ರಾಮದ ಜನರ ಮನಪರಿವರ್ತನೆ ಮಾಡಲಾಗುತ್ತದೆ. ಗ್ರಾಮಕ್ಕೆ ಹೋಗುವುದು, ಗ್ರಾಮದ ಜನರೊಂದಿಗೆ ಬೆರೆಯುವುದು, ಅವರ ಗ್ರಾಮವನ್ನು ನಮಗೂ ತೋರಿಸುವಂತೆ ಕೇಳುವುದು. ಗ್ರಾಮದಲ್ಲಿನ ಒಳ್ಳೆಯ ಹಾಗೂ ಕೆಟ್ಟ ಸ್ಥಳಗಳು ಎಲ್ಲವನ್ನೂ ತೋರಿಸುವಂತೆ ಹೇಳುವುದು. ಊರಿನ ಉತ್ತಮ ಸ್ಥಳಗಳಾದ ದೇವಸ್ಥಾನಗಳು, ನೀರಿನ ಮೂಲಗಳು, ಕೆರೆ–ಕುಂಟೆಗಳು, ನೋಡಬಾರದ ಹಾಗೂ ನಡೆಯಲಾಗದ ಸ್ಥಳಗಳಾದ ಕೆಟ್ಟ ಸ್ಥಳಗಳಾದ ಬಯಲು ಮಲವಿಸರ್ಜನಾ ಜಾಗಗಳಿಗೆ ಅವರೊಂದಿಗೆ ನಡೆಯುತ್ತಾ ಹೋಗುವುದು. ಗ್ರಾಮದ ಜನರೇ ಮಾಡಿದ ಮಲದ ಮುಂದೆ ನಿಂತು, ಮಲದ ಮೇಲೆ ಕುಳಿತ ನೊಣಗಳ ಮೂಲಕ, ಸಾಕುಪ್ರಾಣಿಗಳ ಮೂಲಕ, ನೀರಿನ ಮೂಲಕ ಮತ್ತೆ ಅದೇ ಮಲ ಮನುಷ್ಯನ ದೇಹವನ್ನು ಸೇರುವ ರೀತಿಯನ್ನು ಪ್ರಾತ್ಯಕ್ಷಿಕೆಗಳೊಂದಿಗೆ ಮಾಡಿ ತೋರಿಸುವುದು ಹಾಗೂ ವಿವರಿಸಿ ಹೇಳುವುದು ಮುಂತಾದ ವಿಧಾನಗಳನ್ನು ಅನುಸರಿಸಲಾಗುತ್ತದೆ. ಅವರೇ ಮಾಡಿದ ಮಲವನ್ನು ಮತ್ತೊಮ್ಮೆ ಅವರೇ ನೋಡಲು ಖಂಡಿತಾ ನಿರಾಕರಿಸುತ್ತಾರೆ ಮತ್ತು ಅಸಹ್ಯ ಪಡುತ್ತಾರೆ. ನೋಡಲು ಅಸಹ್ಯ ಪಡುವ ಜನರೇ ದಿನ ನಿತ್ಯ ಅದನ್ನು ಹೇಗೆ ತಿನ್ನುತ್ತಿದ್ದಾರೆ ಎಂಬುದನ್ನು ಬೇರೆ ಬೇರೆ ಪ್ರಾತ್ಯಕ್ಷಿಕೆಗಳ ಮೂಲಕ ಅವರಿಗೆ ತಿಳಿಸಿ ಹೇಳಲಾಗುತ್ತದೆ. ಒಂದು ಕುಟುಂಬ ತಿಂಗಳಿಗೆ ಅಥವಾ ವರ್ಷಕ್ಕೆ ಆಸ್ಪತ್ರೆಗಾಗಿ ಖರ್ಚು ಮಾಡುವ ಹಣದ ಅಂದಾಜನ್ನು ಸಹ ಅವರಿಂದಲೇ ಮಾಡಿಸುವುದು. ಒಂದು ವರ್ಷಕ್ಕೆ ಇಡೀ ಗ್ರಾಮದಿಂದ ಆಸ್ಪತ್ರೆಗಳಿಗೆ ವೆಚ್ಚವಾಗುವ ಹಣ್ಣವನ್ನು ಲೆಕ್ಕ ಹಾಕಿ ಮನವರಿಕೆ ಮಾಡಿಕೊಡುವುದು. ಜೊತೆಗೆ ಬಯಲಲ್ಲಿ ಬೆತ್ತಲೆ ಕೂರುವ ಮಹಿಳೆಯರ ಗೌರವದ ಪ್ರಶ್ನೆಗಳನ್ನು ಎತ್ತುವುದು. ಇದಕ್ಕೆಲ್ಲಾ ಪರಿಹಾರವೇನು ಎಂಬುದನ್ನು ಸಮುದಾಯಕ್ಕೆ ಕೇಳುವ ಮೂಲಕ ಇಡೀ ಸಮುದಾಯದಲ್ಲಿ ನೈರ್ಮಲ್ಯ ಜಾಗೃತಿಯನ್ನು ಸ್ಫೋಟಗೊಳಿಸುವುದು ಹಾಗೂ ಜನರು ನೈರ್ಮಲ್ಯದ ಅಭ್ಯಾಸಗಳನ್ನು ಹೊಂದುವಂತೆ ಉತ್ತೇಜಿಸುವುದು ಈ ವಿಧಾನದಲ್ಲಿನ ಬಹುಮುಖ್ಯ ಅಂಶವಾಗಿದೆ.

ಈಗಾಗಲೇ ರಾಜ್ಯದ ಬೆಳಗಾವಿ, ದಾವಣಗೆರೆ, ಗುಲಬರ್ಗ, ಯಾದಗಿರಿ, ಚಿಕ್ಕಬಳ್ಳಾಪುರ, ಕೋಲಾರ ಮುಂತಾದ ಜಿಲ್ಲೆಗಳು ಸಮುದಾಯ ನೇತೃತ್ವದ ಸಂಪೂರ್ಣ ನೈರ್ಮಲ್ಯ ವಿಧಾನವನ್ನು ಅಳವಡಿಸಿ ಕೊಂಡು ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನವನ್ನು ತ್ವರಿತಗೊಳಿಸಲು ಕಾರ್ಯಪ್ರವೃತ್ತವಾಗಿವೆ. ಇತರ ಜಿಲ್ಲೆಗಳೂ ಸಹ ಗ್ರಾಮೀಣ ಸ್ವಚ್ಛತೆಯ ಅನುಷ್ಠಾನಕ್ಕೆ ತ್ವರಿತಗತಿ ನೀಡುವ ನಿಟ್ಟಿನಲ್ಲಿ "ಸಮುದಾಯ ನೇತೃತ್ವದ ಸಂಪೂರ್ಣ ನೈರ್ಮಲ್ಯ" ಮಾರ್ಗೋಪಾಯವನ್ನು ಅಳವಡಿಸಿಕೊಳ್ಳಬಹುದಾಗಿದೆ.

❑

ಸಂವಹನ ಮತ್ತು ಸಾಮರ್ಥ್ಯಾಭಿವೃದ್ಧಿ ಘಟಕ, ಕ. ಗ್ರಾ. ನೀ. ಸ. ನೈ. ಸಂಸ್ಥೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು - 560 009.



# ಯುವಶಕ್ತಿಗೆ ಬೇಕು ಆದರ್ಶಗಳ ಸ್ಪರ್ಶ



**ಎನ್.ಆರ್. ಪಾಟೀಲ** *

**ಮೊಬೈಲ್ : 9449008855**

ಸ್ವಾಮಿ ವಿವೇಕಾನಂದರ ವಿಶ್ವಮಾನವತಾ ಪ್ರಜ್ಞೆಗೆ ಮಾರುಹೋದ ವಿಶ್ವಸಂಸ್ಥೆ 1985ನೇ ವರ್ಷದಿಂದ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಅವರು ಹುಟ್ಟಿದ ದಿನ ಜನವರಿ 12ರಂದು "ಅಂತರಾಷ್ಟ್ರೀಯ ಯುವವರ್ಷ"ವನ್ನಾಗಿ ಆಚರಿಸಲು ಕರೆ ನೀಡಿತು.

ಜನವರಿ 12, ರಾಷ್ಟ್ರೀಯ ಯುವದಿನ. ಯುವಶಕ್ತಿಗೆ ಭಾಷ್ಯ ಬರೆದ ಸ್ವಾಮಿ ವಿವೇಕಾನಂದರ ಜನ್ಮದಿನ. ಭಾರತಾಂಬೆಯ ಈ ಸತ್ಪುತ್ರ ಬದುಕಿದ್ದು ಕೇವಲ 39 ವರ್ಷ 5 ತಿಂಗಳು 24 ದಿನಗಳು ! ಆದರೆ ಅದೇ ಅವಧಿಯಲ್ಲಿ ಅವರು ಸಾಧಿಸಿದ್ದು ಅಪಾರ. ಸಕಲಶಾಸ್ತ್ರಗಳನ್ನು ಬಲ್ಲವರಾಗಿ, ದೇಶಭಕ್ತರಾಗಿ, ವಿಶ್ವಪ್ರಜೆಯಾಗಿ, ದಿವ್ಯಜ್ಞಾನಿಯಾಗಿ, ಅದ್ಭುತ ವಾಗ್ಮಿಯಾಗಿ ಎಲ್ಲಕ್ಕೂ ಮಿಗಿಲಾಗಿ ಮಾನವೀಯತೆಯ ಹರಿಕಾರರಾಗಿ ಅವರು ದೇಶಕ್ಕೆ, ವಿಶ್ವಕ್ಕೆ ನೀಡಿದ ಕೊಡುಗೆಗೆ ಸರಿಸಾಟಿಯಿಲ್ಲ. ಸ್ವಾಮಿ ವಿವೇಕಾನಂದರಿಗೆ ಯುವಶಕ್ತಿಯ ಮೇಲೆ ಅಪಾರ ನಂಬಿಕೆ. ಯುವಕರಲ್ಲಿ ಆತ್ಮವಿಶ್ವಾಸವನ್ನು ಸಕಾರಾತ್ಮಕ ಮನೋಭಾವವನ್ನು ಪ್ರತಿಷ್ಠಾಪಿಸಿ ಆಂತರ್ಯದ ಶಕ್ತಿಚೈತನ್ಯವನ್ನು ಸೃಜನಶೀಲಗೊಳಿಸಿ, ಪೌರುಷ ಪರಾಕ್ರಮವನ್ನು ಪ್ರಜ್ವಲಿಸಿದರೆ ಅವರಿಂದ ಅದ್ಭುತ ಸಾಧನೆ ಸಾಧ್ಯ ಎಂಬುದು ಅವರ ನಂಬಿಕೆಯಾಗಿತ್ತು. ಅದಕ್ಕೇ ಅವರು ಯುವಜನತೆಗೆ ಹೀಗೆ ಕರೆ ನೀಡಿದರು – "ಏಳಿ, ಎದ್ದೇಳಿ ! ಸಕಾರಾತ್ಮಕ ಮನೋಭಾವದವರಾಗಿ, ಸಾಹಸ ಸಾಧನೆಯ ಶಿಖರ ಮುಟ್ಟುವವರೆವಿಗೂ ನಿಲ್ಲದಿರಿ !" ಸ್ವಾಮಿ ವಿವೇಕಾನಂದರ ವಿಶ್ವಮಾನವತಾ ಪ್ರಜ್ಞೆಗೆ ಮಾರುಹೋದ ವಿಶ್ವಸಂಸ್ಥೆ 1985ನೇ ವರ್ಷದಿಂದ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಅವರು ಹುಟ್ಟಿದ ದಿನ ಜನವರಿ 12ರಂದು "ಅಂತರಾಷ್ಟ್ರೀಯ ಯುವವರ್ಷ"ವನ್ನಾಗಿ ಆಚರಿಸಲು ಕರೆ ನೀಡಿತು. ಅಂದಿನಿಂದ ಪ್ರತಿವರ್ಷ ಜನವರಿ 12ನ್ನು ಯುವದಿನವನ್ನಾಗಿ ವಿಶ್ವಾದ್ಯಂತ ಆಚರಿಸಲಾಗುತ್ತಿದೆ.

ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಯುವಕರು ಅತ್ಯಂತ ನಿರ್ಣಾಯಕ ಪಾತ್ರವಹಿಸುತ್ತಾರೆ ಎಂಬುದನ್ನು ಮನಗಂಡಿದ್ದ ಸ್ವಾಮಿವಿವೇಕಾನಂದರು ಯುವಜನಾಂಗಕ್ಕೆ ನೀಡಿದ ಸಂದೇಶ ಸಾರ್ವಕಾಲಿಕ ಸತ್ಯವಾದುದು. ಅವರು ಯುವಕರಿಗೆ ಯುವಶಕ್ತಿಯ ಪರಿಚಯ ಮಾಡಿಕೊಡುತ್ತ ಹೀಗೆ ಸಂದೇಶ ನೀಡುತ್ತಾರೆ – "ನಾವು ಏನನ್ನೂ ಮಾಡಬಲ್ಲೆವು. ನಮ್ಮಿಂದ ಎಲ್ಲವೂ ಸಾಧ್ಯ ಎಂಬುದೇ ನಿಮ್ಮ ಮಂತ್ರವಾಗಲಿ ಎಲ್ಲ ಶಕ್ತಿಯೂ ನಿಮ್ಮೊಳಗೂ ಇದೆ ಎಂಬ ಅಚಲ ಆತ್ಮವಿಶ್ವಾಸ ನಿಮ್ಮದಾಗಲಿ. ನಿಮ್ಮ ಚಿಂತನೆ–ಆಲೋಚನೆಗಳು ಸದಾ ಸಕಾರಾತ್ಮಕವಾಗಿರುವಂತೆ ನೋಡಿಕೊಳ್ಳಿ. ಸದಾ ಚೈತನ್ಯದ ಚಿಲುಮೆಗಳಾಗಿ ಉಲ್ಲಾಸದ ಮಡುವಾಗಿರಿ. ಬಲಾಢ್ಯರಾಗಿ ! ಧೀರರಾಗಿ ! ಶಕ್ತಿಯೇ ಜೀವನ. ದೌರ್ಬಲ್ಯವೇ ಮರಣ. ಯಾವಾಗಲೂ ಆಂತರ್ಯದಲ್ಲಿರುವ ಆ ದಿವ್ಯಶಕ್ತಿಯ ಸಾಗರವನ್ನೇ ಕುರಿತು ಚಿಂತಿಸಿ."

ಹೌದು ! ಮೊಗ್ಗು ಅರಳಿ ಸುಂದರ ಹೂವಾಗುವಂತೆ ಮಕ್ಕಳ ವ್ಯಕ್ತಿತ್ವ ಪೂರ್ಣವಾಗಿ ಅರಳಿ ಸಹಾಸ–ಸಾಧನೆಯ ಸೌರಭ ಹೊರಹೊಮ್ಮುವ ಕಾಲವೇ ಯೌವ್ವನ. ಆತ್ಮಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳ ತ್ರಿವೇಣಿ ಸಂಗಮವಿದು. ಆದರೆ ಈ ತ್ರಿವೇಣಿ ಸಂಗಮ ಸತ್ ಸಂಗಮವಾಗಿರಬೇಕು. ಮಾನವೀಯ ಮೌಲ್ಯಗಳಾದ ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಪರೋಪಕಾರ, ಸಹಾನುಭೂತಿಗಳ

* 'ಅಮೃತವರ್ಷಿಣಿ' ಪ್ಲಾಟ್ ನಂ. 21/ ಬಿ, ಮನೆ ನಂ. 3430, ಹೊಸ ಸಮರ್ಥ ಕಾಲೋನಿ, ಹಿಂಡಲಗಾ, ಬೆಳಗಾವಿ ಜಿಲ್ಲೆ – 591108.

ಸಂಗಮ ಆಗಿರಬೇಕು. ಯುವಶಕ್ತಿ ಸರಿಯಾದ ದಾರಿಯಲ್ಲಿ ಪ್ರವಹಿಸಿದರೆ ಮಾತ್ರ ಅದು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಹತ್ತರ ಪಾತ್ರ ವಹಿಸಬಲ್ಲುದು. ಇಲ್ಲದಿದ್ದರೆ ಭಯಾನಕ ಕಾರ್ಯಗಳಲ್ಲಿ ತೊಡಗಿ ಸರ್ವರ ನೆಮ್ಮದಿಯನ್ನು ಕೆಡಿಸುವುದರಲ್ಲಿ ಸಂದೇಹವಿಲ್ಲ. ಉದಾಹರಣೆಗಾಗಿ ಇಂದು ವಿಶ್ವವನ್ನೇ ನಡುಗಿಸುತ್ತಿರುವ ಭಯೋತ್ಪಾದನೆಯಲ್ಲಿ ಯುವಕರು ತಮ್ಮ ಅಮೂಲ್ಯ ಯುವಶಕ್ತಿಯನ್ನು ವ್ಯಯ ಮಾಡುತ್ತಿರುವುದು ಎಲ್ಲರಿಗೂ ಗೊತ್ತು. 21ನೇ ಶತಮಾನದ ಅತಿದೊಡ್ಡ ದುರಂತವೆಂದರೆ ಮಾನವೀಯ ಮೌಲ್ಯಗಳ ಕುಸಿತ. ನಿತ್ಯ ಕೊಲೆ, ಸುಲಿಗೆ, ದರೋಡೆ, ಮಾನಭಂಗ ಪ್ರಕರಣಗಳು, ವಿಮಾನಗಳ ಅಪಹರಣ, ಅಮಾಯಕರ ಹತ್ಯೆಗಳು ಇವೆಲ್ಲ ಸರ್ವೇಸಾಮಾನ್ಯ. ಇಂಥಹ ವಿಧ್ವಂಸಕ ಕೃತ್ಯಗಳಲ್ಲಿ ಬಹುತೇಕ ಯುವಕರೇ ತೊಡಗಿರುವುದು ನಿತ್ಯ. ಈ ಯುವಕರೆಲ್ಲ ಉನ್ನತಮಟ್ಟದ ವೈದ್ಯ, ಇಂಜನೀಯರ್ ಮುಂತಾದ ಪದವೀಧರರೇ ಎಂಬುದು ಇನ್ನೊಂದು ಅತಿದೊಡ್ಡ ದುರಂತವಾಗಿದೆ. ಹೀಗೆ ತೊಡಗಿಸಿಕೊಂಡ ದುರಂತದಿಂದ ಪಾರಾಗಲು ದಾರಿ ತಪ್ಪುತ್ತಿರುವ ಯುವಶಕ್ತಿಗೆ ಆದರ್ಶಗಳ ಸ್ಪರ್ಶದ ಅವಶ್ಯಕತೆಯಿದೆ.

## ಯಾರು ಕಾರಣ?

ಇದಕ್ಕೆ ನನ್ನ ಸ್ಪಷ್ಟ ಉತ್ತರ ಹಿರಿಯರಾದ ನಾವೇ ಕಾರಣ ! ಹಿರಿಯರು ಯುವಶಕ್ತಿಯ ಪ್ರಥಮ ಪ್ರದರ್ಶಕರು ಎಂಬುದನ್ನು ಮರೆಯಬಾರದು. "ತಂದೆಯಂತೇ ಮಗ" ಎಂಬ ಮಾತನ್ನೂ ನಾವು ಇಲ್ಲಿ ಸ್ಮರಿಸಬೇಕು. ಬೆಳೆಯುವ ಮಕ್ಕಳಿಗೆ ಮನೆಯ ಹಿರಿಯರೇ ಅಂದರೆ ತಂದೆ-ತಾಯಿಗಳೇ ಆದರ್ಶ ನಾಯಕರಾಗಿರುತ್ತಾರೆ. "ಮನೆ ನೋಡಿ ಹೆಣ್ಣು ತಾ" ಎಂಬ ಮಾತೊಂದಿದೆ. ಅಂದರೆ ಹೆಣ್ಣನ್ನು (ವಧುವನ್ನು) ಹುಡುಕುವಾಗ ಆಕೆಯ ಸೌಂದರ್ಯಕ್ಕಿಂತಲೂ ಮನೆಯ ಸಂಸ್ಕೃತಿಯನ್ನು ನೋಡಬೇಕು ಎಂಬುದೇ ಇದರ ಅರ್ಥ. ಈ ಸಂದರ್ಭದಲ್ಲಿ ನಾವು ಒಪ್ಪಿಕೊಳ್ಳಬೇಕಾದ ಮಾತೆಂದರೆ ಇಂದಿನ ನಮ್ಮ ಯುವಕರಲ್ಲಿ ಆದರ್ಶಗಳ ಪಾಲನೆಯಾಗುತ್ತಿಲ್ಲ. ಇದಕ್ಕೆ ಕಾರಣ ಹೆತ್ತವರು ಹಾಗೂ ಸಮಾಜ ! ನಿತ್ಯ ಹೊರಗೆ ಹೋಗಿ ದೊಡ್ಡ ದೊಡ್ಡ ಕಂಪನಿಗಳಲ್ಲಿ ದುಡಿದು ಕೈತುಂಬ ಸಂಬಳ ತರುವ ತಂದೆ-ತಾಯಿಗಳಿಗೆ ಹೆತ್ತ ಮಕ್ಕಳನ್ನು ಮಾತಾಡಿಸಲು ಸಮಯವಿಲ್ಲ. ಆಯಾಳ ಪಾಲನೆಯಲ್ಲೋ, ಬಾಲಾಶ್ರಮಗಳಲ್ಲೋ, ವಿದ್ಯಾಕೇಂದ್ರಗಳಲ್ಲೋ ಬೆಳೆಯುವ ಮಕ್ಕಳಿಗೆ ಬದುಕಿನ ಆದರ್ಶಗಳನ್ನು ಹೇಳಿಕೊಡುವವರಾರು? ಹಿರಿಯರಾದ ನಾವು ಮಕ್ಕಳಿಗೆ ಬಾಲ್ಯದಲ್ಲಿ ಆದರ್ಶಗಳ ಹಂಬಲವನ್ನು ಹುಟ್ಟಿಸದೇ ಇರುವುದರಿಂದಾಗಿಯೇ ಇಂದಿನ ಯುವಕರು ದಾರಿ ತಪ್ಪುತ್ತಿದ್ದಾರೆ. ಮಕ್ಕಳ ಕೈಗೆ ಒಂದಿಷ್ಟು ಚಾಕ್‌ಲೇಟ್, ಒಂದಿಷ್ಟು ಗರಿ ಗರಿ ನೋಟು ನೀಡಿದರೆ ತಮ್ಮ ಕೆಲಸ ಮುಗಿಯಿತೆಂದೇ ಭಾವಿಸುವ ಇಂದಿನ ಹೆತ್ತವರಿಗೆ ಮಕ್ಕಳ ಬೆಳವಣಿಗೆಯು ಮೇಲೆ ಹಿಡಿತವೇ ಇರುವುದಿಲ್ಲ. ವಿವೇಕಾನಂದರು ಹೇಳುತ್ತಿದ್ದರು – "ಹೆತ್ತವರೇ, ಶೈಶಾವಾವಸ್ಥೆಯಿಂದಲೇ ಮಕ್ಕಳು ಶಕ್ತಿಶಾಲಿಯಾಗುವಂತೆ ಮಾಡಿರಿ. ಅವರಿಗೆ ದುರ್ಬಲತೆಯನ್ನಾಗಲಿ, ಮೂಢ ಆಚರಣೆಯನ್ನಾಗಲಿ ಬೋಧಿಸಬೇಡಿ. ಅವರನ್ನು ಆದರ್ಶವಂತರನ್ನಾಗಿ, ಶಕ್ತಿಯುತರನ್ನಾಗಿ ಮಾಡಿ".

ಹೌದು ! ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲೇ ಬದುಕಿನ ಆದರ್ಶಗಳ ಪಾಠ ಹೇಳಬೇಕು. ಮನೆಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ನೈತಿಕ ಹಾಗೂ ಮಾನವೀಯ ಮೌಲ್ಯಗಳ ಶಿಕ್ಷಣ ದೊರೆಯಬೇಕು. ಮಾನವಂತರಾಗಿ ಬದುಕುವುದೇ ಜೀವನ ಎಂಬುದನ್ನು ಬಾಲ್ಯದಿಂದಲೇ ಮಕ್ಕಳ ಮನೋಪಟದಲ್ಲಿ ಅಚ್ಚೊತ್ತಿದರೆ ಅವರು ಕುಟುಂಬದ, ಸಮಾಜದ, ದೇಶದ ಮಹಾಮಾನವರಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ. ಇಂದಿನ ಬಾಲಕರು ನಾಡಿನ ನಾಳಿನ ನಾಗರಿಕರು; ನೇತಾರರು. ನಮ್ಮ ಭಾವೀ ನೇತಾರರಿಗೆ ಆದರ್ಶಗಳು ಚಿಕ್ಕಂದಿನಿಂದಲೇ ಬಿತ್ತನೆಗೊಂಡು ಅಂತರಗೊಂಡು ದಿನಗಳೆದಂತೆ ಹೆಮ್ಮರವಾಗಿ ಬೆಳೆದರೆ ಮಾತ್ರ ಯುವಶಕ್ತಿ ಭವ್ಯಶಕ್ತಿಯಾಗುತ್ತದೆ. ನಮ್ಮ ಯುವಕರಲ್ಲಿ ಈ ಕೆಳಗಿನ ಆದರ್ಶಗಳು ಬಾಲ್ಯದಿಂದಲೇ ಬೆಳವಣಿಗೆಯಾಗಬೇಕು.

## ಶ್ರೀಮಂತ ಮನಸ್ಸು

ಯುವಕರಲ್ಲಿ ಸರ್ವರನ್ನೂ ಸಮನಾಗಿ ಕಾಣುವ ವಿಶಾಲವಾದ ಶ್ರೀಮಂತ ಮನಸ್ಸುಬೇಕು. ಯಾರೂ ಮೇಲು-ಕೀಳಲ್ಲ ಎಲ್ಲರೂ ಒಂದೇ ಎಂಬ ಭಾವನೆ ಬೇಕು. ಬಸವಣ್ಣನವರು ಒಂದು ರಾಜ್ಯದ ಅರ್ಥಮಂತ್ರಿಯಾಗಿದ್ದರೂ, ಸರ್ವರ ಆರಾಧ್ಯದೇವನಾಗಿದ್ದರೂ "ಎನಗಿಂತ ಕಿರಿಯರಿಲ್ಲ" ಎಂದು ವಿನಮ್ರವಾಗಿ ಹೇಳುತ್ತಿದ್ದರು. ಇಂದಿನ ಯುವಕರಲ್ಲಿ

'ನಾನು' ಎಂಬುದು ಹೆಚ್ಚಾಗಿದ್ದು, ಸ್ವಾರ್ಥ ಪ್ರಮುಖ ಗುಣವಾಗಿದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ – "ಸ್ವಾರ್ಥತೆಯೇ ಪ್ರತಿಯೊಬ್ಬರಲ್ಲೂ ಇರುವ ಪ್ರತ್ಯಕ್ಷ ರಾಕ್ಷಸ. ಪ್ರತಿಯೊಂದು ಬಗೆಯ ಸ್ವಾರ್ಥವೂ ಸೈತಾನವೇ !" ಯುವಕರು ಎಂಥಹ ಶ್ರೀಮಂತ ಮನಸ್ಸನ್ನು ಹೊಂದಬೇಕು ಎಂಬುದನ್ನು ಕುರಿತು ಅವರು ಹೇಳುತ್ತಾರೆ – "ಪರರ ಹಿತಕ್ಕಾಗಿ ನಿಮ್ಮ ಬದುಕನ್ನು ಮುಡಿಪಾಗಿಡಿ. ನಿಮ್ಮ ಸೌಲಭ್ಯಗಳನ್ನೂ, ನಿಮ್ಮ ಸುಖಗಳನ್ನು ನಿಮ್ಮ ಹೆಸರು ಕೀರ್ತಿ ಸ್ಥಾನಮಾನಗಳನ್ನೂ ಅಷ್ಟೇ ಏಕೆ ನಿಮ್ಮ ಜೀವಿತವನ್ನೂ ಬಲಿಕೊಟ್ಟು ಒಂದು ಮಾನವ ಸೇತುವನ್ನು ನಿರ್ಮಿಸಿ, ಅದರ ಮೂಲಕ ಲಕ್ಷಾಂತರ ಜನರು ಈ ಭವಜಲವಿಧಿಯನ್ನು ದಾಟುವಂತಾಗಲಿ".

## ಸರಳ–ಸಾದಾ ಬದುಕು

ನಮ್ಮ ಇಂದಿನ ಯುವಕರಲ್ಲಿ ಥಳಕು ಬಳುಕಿನ ಆಡಂಬರದ ಬದುಕೇ ಹೆಚ್ಚಾಗುತ್ತಿದೆ. ಈ ಆಡಂಬರದ ಬದುಕಿಗೆ ಬೇಕಾಗುವ ಹೆಚ್ಚಿನ ಹಣಕ್ಕೆ ಯುವಜನಾಂಗ ಅಡ್ಡ ಹಾದಿ ಹಿಡಿಯುತ್ತಿದ. ಯುವಕರಲ್ಲಿ ಹಣದಾಸೆ, ಧನದಾಹ, ಸ್ವಾರ್ಥಲಾಲಸೆ ಹೆಚ್ಚುತ್ತಿದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ – "ಜೀವನವೆಂಬುದು ಕಠಿಣಸತ್ಯ. ಧೈರ್ಯವಾಗಿ ಅದನ್ನು ಎದುರಿಸಿ. ಸರಳ ಸಾದಾ ಬದುಕು ಬಾಳಿರಿ. ಹೇಡಿಗಳು ಬಲಹೀನರು ಮಾತ್ರ ಸುಳ್ಳು ಹೇಳುತ್ತಾರೆ; ಪಾಪ ಮಾಡುತ್ತಾರೆ. ಧೀರರು ಯಾವಾಗಲೂ ನೀತಿವಂತರಾಗಿರುತ್ತಾರೆ. ಸಹಾನುಭೂತಿಯುಳ್ಳವರಾಗಿರುತ್ತಾರೆ." ಆಡಂಬರ ಬದುಕನ್ನೇ ಬರಿದಾಗಿಸುತ್ತದೆ. ಸರಳ, ಸಾದಾ ಬದುಕನ್ನು ಬಾಳುವುದಲ್ಲೇ ಬದುಕಿನ ಭವ್ಯತೆಯಿದೆ ಎಂಬುದನ್ನು ನಮ್ಮ ಯುವಕರು ಅರಿತು ನಡೆಯಬೇಕು.

## ಪ್ರಾಮಾಣಿಕತೆಗೆ ಅಗ್ರಸ್ಥಾನ

ಪ್ರಾಮಾಣಿಕತೆ ಯುವಕರ ಜಪವಾಗಬೇಕು. ಆದರಿಂದು ಭ್ರಷ್ಟಾಚಾರ ನಮ್ಮ ಬದುಕಿನ ಸರ್ವಕ್ಷೇತ್ರಗಳಲ್ಲಿ ತುಂಬಿಕೊಂಡಿದ್ದು, ಅದು ತನ್ನ ತೆಕ್ಕೆಗೆ ನಮ್ಮ ಯುವಕರನ್ನು ಸೆಳೆದುಕೊಳ್ಳುತ್ತಿದೆ. "ಭ್ರಷ್ಟಾಚಾರವೇ ಬದುಕು" ಎನ್ನುವಂತಾಗಿದೆ ಇಂದಿನ ಪರಿಸ್ಥಿತಿ. ಭ್ರಷ್ಟಾಚಾರದ ಭೂತಕ್ಕೆ ನಮ್ಮ ಯುವಮನಗಳೂ ಫಾಸಿಗೊಳ್ಳುತ್ತಿರುವುದು ನಿತ್ಯದ ಸಂಗತಿ. ಯುವಕರಲ್ಲಿಯ ಪ್ರಾಮಾಣಿಕತೆಗೆ ಎಂಥಹ ಬೆಲೆ ಇದೆ ಎಂಬುದನ್ನು ಒಂದು ಜ್ವಲಂತ ಉದಾಹರಣೆಯಿಂದ ಸ್ಪಷ್ಟಪಡಿಸುತ್ತೇನೆ – ಭಾರತದ ಖ್ಯಾತ ವಿಜ್ಞಾನಿ ಸಿ.ವಿ. ರಾಮನ್ ಬೆಂಗಳೂರಿನ ಭೌತ ವಿಜ್ಞಾನ ಕೇಂದ್ರದಲ್ಲಿ ಯುವ ವಿಜ್ಞಾನಿಗಳ ಸಂದರ್ಶನ ನಡೆಸಿದ್ದರು. ಸಂದರ್ಶನಕ್ಕೆ ಬಂದ ವಿಜ್ಞಾನಿಗಳಿಗೆ ಪ್ರಯಾಣದ ಭತ್ಯೆ ಕೊಡುತ್ತಿದ್ದಾರೆ. ಸಂದರ್ಶನಕ್ಕೆ ಬಂದ ಯುವ ವಿಜ್ಞಾನಿಯೊಬ್ಬ ಸಂದರ್ಶನದಲ್ಲಿ ಅನುತ್ತೀರ್ಣಗೊಂಡು ಹೋಗುವಾಗ ಅವನಿಗೆ ಪ್ರಯಾಣದ ಭತ್ಯೆ ನೀಡಿ ಕಳಿಸಲಾಯಿತು. ನಂತರ ಅರ್ಧಗಂಟೆಯ ನಂತರ ಆ ಯುವ ವಿಜ್ಞಾನಿ ಮತ್ತೇ ಒಳಗೆ ಬಂದಾಗ ಸಿ.ವಿ. ರಾಮನ್‌ರು ಕೋಪಿಸಿಕೊಂಡರು. ಆಗ ಸಮಾಧಾನದಿಂದ ಆ ಯುವಕ ಹೇಳಿದ" ಸರ್ ಕ್ಷಮಿಸಿ, ನಾನು ಆಯ್ಕೆ ಮಾಡಿರೆಂದು ಕೇಳಲು ಬಂದಿಲ್ಲ ನೀವು ಕೊಟ್ಟ ಪ್ರಯಾಣ ಭತ್ಯೆ ಹಣದಲ್ಲಿ 100 ರೂಪಾಯಿ ಹೆಚ್ಚಾಗಿದ್ದು ಅದನ್ನು ಮರಳಿಸಲು ಬಂದಿದ್ದೇನೆ" ಎಂದಾಗ ವಿಜ್ಞಾನಿ ರಾಮನ್ ಎದ್ದು ಯುವವಿಜ್ಞಾನಿಯ ಬೆನ್ನು ಚಪ್ಪರಿಸಿ "ಪ್ರಾಮಾಣಿಕತೆ ಪ್ರತಿಭೆಗಿಂತಲೂ ದೊಡ್ಡದು" ಎಂದು ಹೇಳಿ ಅವನಿಗೆ ನೇಮಕಾತಿಯ ಪತ್ರ ನೀಡಿದರಂತೆ.

## ರಾಷ್ಟ್ರಾಭಿಮಾನ

ಯುವಕರಲ್ಲಿ ರಾಷ್ಟ್ರಾಭಿಮಾನ ಅವಶ್ಯವಾಗಿ ಬೇಕು. ಯುವಕರು ದೇಶದ ಪುರುಷಸಿಂಹರು. ಅವರಿಂದಲೇ ದೇಶೋದ್ಧಾರ ಸಾಧ್ಯ. ದೇಶಕ್ಕಾಗಿ ಪ್ರಾಣಕೊಡಲೂ ನಮ್ಮ ಯುವಶಕ್ತಿ ಮುಂದಾಗಬೇಕು. ಭಾರತ ದೇಶದ ಯುವಕರಲ್ಲಿ ರಾಷ್ಟ್ರಾಭಿಮಾನ ತುಂಬುತ್ತ ಸ್ವಾಮಿ ವಿವೇಕಾನಂದರು ಯುವಕರಿಗೆ ಹೀಗೆ ಕರೆ ನೀಡುತ್ತಾರೆ – "ಭಾರತೀಯರೆಲ್ಲರೂ ನಮ್ಮ ಸಹೋದರರು. ಭಾರತೀಯರು ನಮ್ಮ ಪ್ರಾಣ. ಭಾರತೀಯ ಸಮಾಜ ನಮ್ಮ ಬಾಲ್ಯದ ತೊಟ್ಟಿಲು. ತಾರುಣ್ಯದ ನಂದನವನ. ವೃದ್ಧಾಪ್ಯದ ವಾರಣಾಸಿ. ಭಾರತ ಭೂಮಿಯೇ ನಮ್ಮ ಪರಂಧಾಮ. ಭಾರತದ ಶುಭವೇ ನಮ್ಮ ಶುಭ". ನಮ್ಮ ಮಕ್ಕಳಲ್ಲಿ ನಮ್ಮ ಸಮಾಜ, ನಾಡು, ರಾಷ್ಟ್ರಗಳ ಕುರಿತು ಅಭಿಮಾನ ಮೂಡಿಸಬೇಕು. ಪಠ್ಯಕ್ರಮದಲ್ಲಿ ಮಹಾತ್ಮಗಾಂಧಿ, ಲೋಕಮಾನ್ಯ ತಿಲಕ್, ಶ್ರೀ ಅರವಿಂದರು, ಚಂದ್ರಶೇಖರ ಅಜಾದ್, ಭಗತ್‌ಸಿಂಗ್, ಸುಭಾಷಚಂದ್ರಭೋಸ್, ಲಾಲ್‌ಬಹದ್ದೂರಶಾಸ್ತ್ರಿ ಮುಂತಾದವರನ್ನು ಕುರಿತಾದ ಪಾಠಗಳಿರಬೇಕು. ಅವರ ರಾಷ್ಟ್ರಾಭಿಮಾನ ನಮ್ಮ ಯುವಕರ ಆದರ್ಶವಾಗಬೇಕು.

## ದಾನ ಗುಣ

'ದಾನ' ಮಾನವೀಯ ಗುಣಗಳಲ್ಲಿ ಅತ್ಯಂತ ಪ್ರಮುಖವಾದುದು. ತಾನೊಬ್ಬನೇ ಚೆನ್ನಾಗಿದ್ದರೆ ಸಾಲದು. ಇತರರೂ ಚೆನ್ನಾಗಿರಬೇಕು. ಎಂಬ ಗುಣ ಯುವಕರಲ್ಲಿ ಇರಬೇಕು. ಅದಕ್ಕಾಗಿ ಸಂಕಟದಲ್ಲಿರುವವರಿಗೆ ಉದಾರವಾಗಿ ತನ್ನಲ್ಲಿದ್ದುದನ್ನು ದಾನ ಮಾಡಬೇಕು. ಅದು ಅನ್ನದಾನವಾಗಿರಬಹುದು, ಬಟ್ಟೆಯಾಗಿರಬಹುದು, ಹಣವಾಗಿರಬಹುದು ಎಷ್ಟು ದಾನ ಮಾಡಬೇಕು ಎಂಬುದು ಮುಖ್ಯವಲ್ಲ. ದಾನವನ್ನು ಒಳ್ಳೆಯ ಮನಸ್ಸಿನಿಂದ ಮಾಡಬೇಕು. ಏನನ್ನೇ ಆಗಲಿ ಪ್ರತಿಫಲಾಕ್ಷೆಯಿಲ್ಲದೇ ಕೊಡುವ ಉದಾರ ಗುಣವಿರಬೇಕು. ಮನುಷ್ಯನು ತನ್ನ ಆದಾಯದಲ್ಲಿ 10ನೇ ಒಂದು ಭಾಗವನ್ನು ದಾನಕಾರ್ಯಕ್ಕೆ ಬಳಸಬೇಕು ಎನ್ನುತ್ತದೆ ಧರ್ಮಶಾಸ್ತ್ರ. ಹಾಗೆಯೇ ನೀಡಿದ ದಾನ ಸದ್ವಿನಿಯೋಗವಾಗಬೇಕು. ಕೀರ್ತಿಯಾಸೆಯಿಂದಲೋ, ಯಾವುದೋ ಫಲಾಪೇಕ್ಷೆಯಿಂದ ಮಾಡುವ ದಾನ ದುರ್ದಾನವಾಗುತ್ತದೆ.

## ಸಾರ್ಥಕ ಶ್ರಮ

ಯುವಶಕ್ತಿ ಸಾರ್ಥಕ ಶ್ರಮದಲ್ಲಿ ವ್ಯಯವಾಗಬೇಕು. ಸೃಜನಶೀಲತೆ ವಿಮರ್ಷಾಗುಣ, ಸಂಯೋಜನಾಶಕ್ತಿ, ಕಲ್ಪನಾಶಕ್ತಿ ಹಾಗೂ ಶೀಘ್ರ ನಿರ್ಣಯಗಳನ್ನು ತೆಗೆದುಕೊಳ್ಳುವ ಯಶಸ್ವೀ ಗುಣಗಳನ್ನು ಹೆತ್ತವರು, ಶಾಲಾ–ಕಾಲೇಜುಗಳು ಯುವಕರಲ್ಲಿಯ ತುಂಬಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ – "ಹಿಂದಿರುಗಿ ನೋಡ ಬೇಡಿರಿ, ಸದಾ ಮುನ್ನಡೆಯಿರಿ. ಅನಂತಶಕ್ತಿ, ಅನಂತ ಉತ್ಸಾಹ, ಅನಂತ ಸಾಹಸ, ಅನಂತ ತಾಳ್ಮೆ ಬೆಳೆಸಿಕೊಳ್ಳಿ. ಸತ್ಯ, ನಿಷ್ಠೆ, ಪವಿತ್ರತೆ, ಈ ಮೂರೂ ನಿಮ್ಮಲ್ಲಿದ್ದರೆ ಜಗತ್ತಿನ ಯಾವ ಶಕ್ತಿಯೂ ನಿಮ್ಮನ್ನು ತಡೆಯಲಾರದು". ದನ ಕಾಯುತ್ತಿದ್ದ ಹುಡುಗ ಅಬ್ರಹಾಂಲಿಂಕನ್ ನಿರಂತರ ಪ್ರಯತ್ನ ಮಾಡುತ್ತ ಅಮೆರಿಕಾದ ಪದವಿಗೇರಿದ್ದುದು ನಮ್ಮ ಯುವಕರಿಗೆ ಆದರ್ಶವಾಗಬೇಕು.

## ಯಂತ್ರಗಳೊಂದಿಗೆ ಯಂತ್ರಗಳಾಗಬೇಡಿ

ಇದು ಯಾಂತ್ರಿಕಯುಗ. ಇದು ನಮ್ಮ ಯುವಕರ ಆಲೋಚನಾ ಶಕ್ತಿಯನ್ನೇ ಹರಣ ಮಾಡುತ್ತಿದೆ. ಇಂದಿನ ಯುವಕರು ವೈದ್ಯರಾಗುವ, ಇಂಜಿನೀಯರ್ ಆಗುವ, ಸಾಫ್ಟ್‌ವೇರ್ ಇಂಜನಿಯರ್ ಆಗುವ ಕನಸನ್ನೇ ಕಾಣುತ್ತಿದ್ದಾರೆ. ಹೀಗಾಗಿ ಸಮಾಜಸೇವೆ, ರಾಷ್ಟ್ರಸೇವೆಗಳತ್ತ ಯುವ ಮನಸ್ಸುಗಳು ನಿರೀಕ್ಷಿತ ಪ್ರಮಾಣದಲ್ಲಿ ಸ್ಪಂದಿಸುತ್ತಿಲ್ಲ. ನಮ್ಮ ಯುವಕರು ದೇಶದ ಆಗು–ಹೋಗುಗಳಲ್ಲಿ ಪ್ರಧಾನವಾಗಿ ಹಾಗೂ ಪ್ರಾಮಾಣಿಕವಾಗಿ ಭಾಗವಹಿಸುವ ಅವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ.

ಸರ್ವಕಾಲಿನ ಸಮಸ್ಯೆಗಳ ಕುರಿತು ಧೈರ್ಯವಾಗಿ, ವಸ್ತುನಿಷ್ಠವಾಗಿ ಅಭಿಪ್ರಾಯ ವ್ಯಕ್ತಪಡಿಸಬಲ್ಲ, ಮಾನವ ಹಕ್ಕುಗಳ ಬಗೆಗೆ ಪೂರ್ಣಪರಿಜ್ಞಾನ ಹೊಂದಿರುವ ಯುವಕರ ಪಡೆಯನ್ನೇ ನಾವಿಂದು ನಿರ್ಮಿಸಬೇಕಾಗಿದೆ.

## ಮುಗಿಸುವ ಮುನ್ನ

ಯುವಕರೇ, ನೀವು ರಾಷ್ಟ್ರ ನಿರ್ಮಾಣದ ಶಿಲ್ಪಿಗಳು. ನಿಮ್ಮ ಆದರ್ಶವೇ ದೇಶದ ಆದೇಶ. ನಿಮ್ಮ ಯುವಶಕ್ತಿಯ ಯಶಸ್ಸಿನ ಯಾತ್ರೆಯೇ ರಾಷ್ಟ್ರದ ಯಶಸ್ಸು. ನಿಮ್ಮೆಲ್ಲರಲ್ಲಿ ಎಲ್ಲವನ್ನೂ ಗೆಲ್ಲುವ ಅದ್ಭುತ ಶಕ್ತಿಯಿದೆ. ಆ ಅದ್ಭುತಶಕ್ತಿ ಸದುವಿನಿಯೋಗವಾದಾಗಲೇ ನಿಮ್ಮ ಯೌವ್ವನಕ್ಕೊಂದು ಸಾರ್ಥಕತೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ – "ನೀವು ಯಶಸ್ಸನ್ನು ಪಡೆಯಲು ದೃಢ ಪ್ರಯತ್ನ ಮಾಡಬೇಕು. ಅಪಾರ ಇಚ್ಛಾಶಕ್ತಿಬೇಕು. 'ನಾನು ಸಮುದ್ರವನ್ನೇ ಪಾನ ಮಾಡುತ್ತೇನೆ' ಎಂದು ಪ್ರಯತ್ನಶೀಲನು ಹೇಳುತ್ತಾನೆ. 'ನನ್ನ ಸಂಕಲ್ಪದ ಮುಂದೆ ಪರ್ವತಗಳೇ ಪುಡಿ ಪುಡಿಯಾಗುತ್ತವೆ" ಎನ್ನುತ್ತಾನವನು. ಇಂಥಹ ಶಕ್ತಿಯನ್ನು ಛಾತಿಯನ್ನು ಪಡೆಯಿರಿ. ನಿಮ್ಮ ನಡೆ–ನುಡಿ ಆದರ್ಶವಾಗಿರಲಿ. ಕಷ್ಟವಿಟ್ಟು ದುಡಿಯಿರಿ. ನೀವು ಗುರಿ ಸೇರುವುದು ನಿಶ್ಚಿತ. ಜೀವನದಲ್ಲಿ ಉನ್ನತ ಆದರ್ಶವನ್ನು ಸ್ವೀಕರಿಸಿ. ಅದಕ್ಕಾಗಿ ಇಡೀ ಜೀವನವನ್ನೇ ಬಲಿಕೊಡುವುದು ಪರಮಶ್ರೇಷ್ಠ" ಆದರ್ಶ ಬದುಕಿನ ದೊಡ್ಡಶಕ್ತಿ. ಈ ಶಕ್ತಿ ಯುವಶಕ್ತಿಯೊಂದಿಗೆ ಸಮ್ಮಿಳಿತವಾದರೆ ಆದರ್ಶ ರಾಷ್ಟ್ರಗಳು ನಿರ್ಮಾಣವಾಗುತ್ತದೆ. ಈ ಲೇಖನದ ಕೊನೆಯನ್ನು ಸ್ವಾಮಿ ವಿವೇಕಾನಂದರ ಮಾತಿನೊಂದಿಗೆ ಮುಗಿಸುತ್ತೇನೆ – "ಎದ್ದೇಳಿ, ಕಾರ್ಯೋನ್ಮುಖ ರಾಗಿ. ಈ ಜೀವನವಾದರೂ ಎಷ್ಟು ಕಾಲ? ನೀವು ಈ ಜಗತ್ತಿಗೆ ಬಂದ ಮೇಲೆ ಏನಾದರೂ ಗುರುತನ್ನು ಬಿಟ್ಟು ಹೋಗಿ, ಅದಿಲ್ಲದಿದ್ದರೆ ನಿಮಗೂ ಮರಕಲ್ಲುಗಳಿಗೂ ಏನು ವ್ಯತ್ಯಾಸ? ಅವೂ ಅಸ್ತಿತ್ವಕ್ಕೆ ಬರುತ್ತವೆ. ನಶಿಸಿ ನಿರ್ನಾಮವಾಗುತ್ತವೆ."

❑




# ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಆರ್ಥಿಕ ಸಂರಚನೆ



ಎ.ಎಸ್. ಶಿವಾನಂದಾಚಾರ್ಯ *
ಮೊಬೈಲ್ : 9900020910

ಸರ್ಕಾರದ ವ್ಯವಸ್ಥೆಯಲ್ಲಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಆರ್ಥಿಕ ಸಂರಚನೆ ಯನ್ನು (Financial Structure) ಕುರಿತು ಆರ್ಥಿಕ ಪರಿಕಲ್ಪನೆ ಗಳ (Financial Concepts) ಪಾರಿಭಾಷಿಕ ವಿವರಣೆಗಳನ್ನು ಒಳಗೊಂಡಂತೆ ಸ್ಥೂಲವಾದ ಪರಿಚಯವನ್ನು ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಕಳೆದ ಸಂಚಿಕೆಯಿಂದ ಮುಂದುವರೆದಿದೆ ....

## 2.36 ತಾಲ್ಲೂಕು ಪಂಚಾಯತ್ ಲೆಕ್ಕಪತ್ರ ನಿರ್ವಹಣೆ

ತಾಲ್ಲೂಕು ಪಂಚಾಯತಿಗಳ ಲೆಕ್ಕಪತ್ರ ನಿರ್ವಹಣೆಯು 1996ರ ಕರ್ನಾಟಕ ಪಂಚಾಯತ್‌ರಾಜ್ [ತಾಲ್ಲೂಕು ಪಂಚಾಯತ್ ಹಣಕಾಸು ಮತ್ತು ಲೆಕ್ಕಪತ್ರ] ನಿಯಮಗಳಿಗೆ ಒಳಪಟ್ಟಿದೆ. 2006ಕ್ಕಿಂತ ಮೊದಲು ತಾಲ್ಲೂಕು ಪಂಚಾಯತಿಗಳ ಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಸಿದ್ಧಪಡಿಸುತ್ತಿದ್ದರು. ಸರ್ಕಾರದ **ಅಧಿಸೂಚನೆ ಸಂಖ್ಯೆ: ಗ್ರಾಅಪ 37 ಜಿಪಸ 2005 ದಿನಾಂಕ 25.5.2006ರಲ್ಲಿ** ತಾಲ್ಲೂಕು ಪಂಚಾಯತ್ ಹಣಕಾಸು ಮತ್ತು ಲೆಕ್ಕಪತ್ರ ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ತಾಲ್ಲೂಕು ಪಂಚಾಯತಿಗಳ ಮಾಸಿಕ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಸಿದ್ಧಪಡಿಸುವ ಬದಲಿಗೆ, ದಿನಾಂಕ 1.4.2006ರಿಂದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯೇ ಸಿದ್ಧಪಡಿಸಬೇಕಾಗಿರುತ್ತದೆ. ತಾಲ್ಲೂಕು ಪಂಚಾಯತಿಯ ಲೆಕ್ಕಪತ್ರಗಳನ್ನು ತಯಾರಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಹಾಯಕ ಲೆಕ್ಕಾಧಿಕಾರಿಯು ನೆರವಾಗುತ್ತಾರೆ.

## 2.37 ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ವಾರ್ಷಿಕ ಲೆಕ್ಕಗಳ ಸಲ್ಲಿಕೆ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಸೆಕ್ಷನ್ 259(3)ರ ಮೇರೆಗೆ ಜಿಲ್ಲಾ ಪಂಚಾಯತಿಯು, ಮತ್ತು ಸಕ್ಷನ್ 250(3)ರ ಮೇರೆಗೆ ತಾಲ್ಲೂಕು ಪಂಚಾಯತಿಯು ವಾರ್ಷಿಕ ಲೆಕ್ಕಗಳನ್ನು ಆರ್ಥಿಕ ವರ್ಷ ಮುಕ್ತಾಯಗೊಂಡ 3 ತಿಂಗಳೊಳಗೆ ಅಂದರೆ ಪ್ರತಿವರ್ಷದ ಜೂನ್ ಮಾಹೆಯೊಳಗೆ ಅಂಗೀಕರಿಸಿ, ಸರ್ಕಾರಕ್ಕೆ ಮತ್ತು ಮಹಾಲೇಖಪಾಲರಿಗೆ ಸಲ್ಲಿಸಬೇಕಿದೆ. ಜಿಲ್ಲಾ ಪಂಚಾಯತ್ ವಾರ್ಷಿಕ ಲೆಕ್ಕಗಳನ್ನು 1996ರ ಕರ್ನಾಟಕ ಪಂಚಾಯತ್‌ರಾಜ್ [ಜಿಲ್ಲಾ ಪಂಚಾಯತ್ ಹಣಕಾಸು ಮತ್ತು ಲೆಕ್ಕಪತ್ರ] ನಿಯಮಗಳಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ, ಮತ್ತು ತಾಲ್ಲೂಕು ಪಂಚಾಯತ್ ವಾರ್ಷಿಕ ಲೆಕ್ಕಗಳನ್ನು 1996ರ ಕರ್ನಾಟಕ ಪಂಚಾಯತ್‌ರಾಜ್ [ತಾಲ್ಲೂಕು ಪಂಚಾಯತ್ ಹಣಕಾಸು ಮತ್ತು ಲೆಕ್ಕಪತ್ರ] ನಿಯಮಗಳಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಸಿದ್ಧಪಡಿಸಬೇಕಾಗಿರುತ್ತದೆ. ಅದರನ್ವಯ, ವಾರ್ಷಿಕ ಲೆಕ್ಕಗಳನ್ನು ಕೆಳಕಂಡಂತೆ 5 ವಿವರಣಾ ತ:ಖ್ತೆಗಳಲ್ಲಿ ತಯಾರಿಸಬೇಕಿದೆ :

* ಆಂತರಿಕ ಆರ್ಥಿಕ ಸಲಹೆಗಾರರು, (ನಿವೃತ್ತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸಚಿವಾಲಯ, ಬೆಂಗಳೂರು.

**ತ:ಖ್ತೆ–1 :** ಜಿ.ಪಂ/ ತಾ.ಪಂ. ನಿಧಿಗೆ ಸಂಬಂಧಪಟ್ಟ ವ್ಯವಹಾರಗಳ ಸಾರಾಂಶ. ಇದರಲ್ಲಿ 3 ಭಾಗಗಳು:

ಭಾಗ–1: ರಾಜಸ್ವ ಲೆಕ್ಕ

ಭಾಗ–2: ಬಂಡವಾಳ ಲೆಕ್ಕ

ಭಾಗ–3: ಋಣ, ಠೇವಣಿ ಮತ್ತು ಇರಸಾಲು ಲೆಕ್ಕಗಳು.

ಭಾಗ–1ರಿಂದ 3ರವರೆಗಿನ ಘೋಷ್ವಾರೆ: ಇದರಲ್ಲಿ ಆರಂಭ ಶಿಲ್ಕು ಹಾಗೂ ಅಂತಿಮ ಶಿಲ್ಕುಗಳನ್ನು ನಮೂದಿಸಬೇಕಾಗುತ್ತದೆ.

**ತ:ಖ್ತೆ–2 :** ಜಿಲಾ/ ತಾಲ್ಲೂಕು ಪಂಚಾಯತಿಯ ಜಮೆಗಳ ಸವಿವರ ಲೆಕ್ಕಗಳು.

**ತ:ಖ್ತೆ–3 :** ಜಿಲ್ಲಾ/ ತಾಲ್ಲೂಕು ಪಂಚಾಯತಿಯ ವೆಚ್ಚದ ಸವಿವರ ಲೆಕ್ಕಗಳು.

**ತ:ಖ್ತೆ–4 :** ಜಮೆ ಮತ್ತು ವೆಚ್ಚದ ವಿವರವಾದ ಲೆಕ್ಕಗಳು : ಬಂಡವಾಳ ಲೆಕ್ಕಗಳು.

**ತ:ಖ್ತೆ–5 :** ಋಣ, ಠೇವಣಿ ಲೆಕ್ಕದಡಿಯಲ್ಲಿನ ಶಿಲ್ಕುಗಳ ವಿವರಗಳು.

ತ:ಖ್ತೆ–1 ರಲ್ಲಿನ ಭಾಗ–3ರಲ್ಲಿ ತೋರಿಸುವ ಅಂಕಿಸಂಖ್ಯೆಗಳಿಗೂ ಮತ್ತು ತ:ಖ್ತೆ–5ರಲ್ಲಿನ ಅಂಕಿಸಂಖ್ಯೆಗಳಿಗೂ ಹೊಂದಾಣಿಕೆಯಾಗಬೇಕು. ಈ ವಿವರಣಾಪಟ್ಟಿಗಳನ್ನು ಸಿದ್ಧಪಡಿಸುವ ಕುರಿತಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: **ಆರ್‌ಡಿಪಿ8 ಅಕೌಂಟ್ಸ್ ಬಿ 98 ದಿನಾಂಕ 9.3.1999, 9.7.2002 ಹಾಗೂ ಗ್ರಾಅಪ 9 ಎಆರ್‌ಎ 2008 ದಿನಾಂಕ 22.9.2009** ರಲ್ಲಿ ವಿವರವಾದ ಸೂಚನೆಗಳನ್ನು ನೀಡಲಾಗಿದೆ. ಈ ಸುತ್ತೋಲೆಗಳಲ್ಲಿನ ಪ್ರಮುಖ ಅಂಶಗಳು ಕೆಳಕಂಡಂತಿವೆ:

### 1. ಜಿಲ್ಲಾ ಪಂಚಾಯತ್ ನಿಧಿ ಶಿಲ್ಕುಗಳು :

ಜಿಲ್ಲಾ ಪಂಚಾಯತ್ ನಿಧಿಯ ಶಿಲ್ಕುಗಳಲ್ಲಿ ಎರಡು ಘಟಕಗಳಿವೆ. ಒಂದು : ರಾಜಸ್ವ ಮತ್ತು ಬಂಡವಾಳ ಲೆಕ್ಕಗಳ ಶಿಲ್ಕುಗಳು; ಇವು ವಾರ್ಷಿಕ ಲೆಕ್ಕಗಳಿಗೆ ಮುಕ್ತಾಯಗೊಳ್ಳುತ್ತವೆ. ಇನ್ನೊಂದು ಘಟಕ: **DDR** ಲೆಕ್ಕಗಳ ಶಿಲ್ಕುಗಳು; ಇವು ಶಿಲ್ಕುಗಳಿಗೆ ಮುಕ್ತಾಯಗೊಳ್ಳುತ್ತವೆ.

### 2. ತ:ಖ್ತೆ Vರಲ್ಲಿ ಶಿಲ್ಕುಗಳನ್ನು ಲೆಕ್ಕಾಚಾರ ಮಾಡುವ ವಿಧಾನ:

ಅಂತಿಮ ಶಿಲ್ಕುಗಳನ್ನು ಲೆಕ್ಕಾಚಾರ ಮಾಡಲು ಮೊದಲಿಗೆ **Receipts** ನ್ನು ಅಂದರೆ, ಎಲ್ಲಾ ಶೀರ್ಷಿಕೆಗಳು ಕ್ರೆಡಿಟ್ ಶಿಲ್ಕಿಗೆ ಮುಕ್ತಾಯಗೊಳ್ಳುತ್ತವೆ ಎಂದು ಪರಿಗಣಿಸಿ ಲೆಕ್ಕಕ್ಕೆ ತೆಗೆದು ಕೊಳ್ಳಲಾಗುತ್ತಿದೆ. ಆದರೆ ಈ ರೀತಿಯ ತಪ್ಪು ಲೆಕ್ಕಾಚಾರದಿಂದಾಗಿ, ಋಣ (ಮೈನಸ್) ಶಿಲ್ಕುಗಳು ಕಂಡುಬರುತ್ತವೆ. ಕೆಲವು ಶೀರ್ಷಿಕೆಗಳು ಡೆಬಿಟ್ ಶಿಲ್ಕುಗಳಿಗೆ ಮುಕ್ತಾಯಗೊಳ್ಳುತ್ತವೆ ಮತ್ತು ಕೆಲವು ಶೀರ್ಷಿಕೆಗಳು ಕ್ರೆಡಿಟ್ ಶಿಲ್ಕುಗಳಿಗೆ ಮುಕ್ತಾಯಗೊಳ್ಳುತ್ತವೆ.

#### (ಎ) ಡೆಬಿಟ್ ಶಿಲ್ಕುಗಳಿಗೆ ಮುಕ್ತಾಯಗೊಳ್ಳುವ ಶೀರ್ಷಿಕೆಗಳು:

ಇವುಗಳ ಲೆಕ್ಕಾಚಾರ ವಿಧಾನ : **OB + Disburements (-) Receipts = Debit Balance.** ಡೆಬಿಟ್ ಶಿಲ್ಕಗಳು ಇತರೆ ಮೂಲಗಳಿಂದ ಜಿ.ಪಂ/ ತಾ.ಪಂ.ಗಳಿಗೆ ಬರಬೇಕಾದ (Receivables) ಮೊಬಲಗನ್ನು ಸೂಚಿಸುತ್ತವೆ. ಉದಾ.ಗೆ, ಎಲ್ಲಾ ಸಾಲ ಶೀರ್ಷಿಕೆಗಳು, 8550–ಸಿವಿಲ್ ಮುಂಗಡಗಳು, 8671–ಇಲಾಖಾ ಶಿಲ್ಕುಗಳು, 8672–ಖಾಯಂ ಮುಂಗಡ ಹಣ, 8782– ಇರಸಾಲುಗಳು I–102/ 103 ಲೋಕೋಪಯೋಗಿ/ಅರಣ್ಯ ಕಾಮಗಾರಿಗಳು, ಹಾಗೂ 8650– ಅಮಾನತು ಲೆಕ್ಕಗಳು.

#### (ಬಿ) ಕ್ರೆಡಿಟ್ ಶಿಲ್ಕುಗಳಿಗೆ ಮುಕ್ತಾಯಗೊಳ್ಳುವ ಶೀರ್ಷಿಕೆಗಳು:

ಇವುಗಳ ಲೆಕ್ಕಾಚಾರ ವಿಧಾನ : **OB + Receipts (-) Disburements = Credit Balance.** ಕ್ರೆಡಿಟ್ ಶಿಲ್ಕುಗಳು ಅಂದರೆ: ಜಿ.ಪಂ/ತಾ.ಪಂ.ಗಳು ಕೊಡಬೇಕಾದ (Payables) ಮೊಬಲಗನ್ನು ಸೂಚಿಸುತ್ತವೆ. ಉದಾ.ಗೆ, 8443– ಸಿವಿಲ್ ಠೇವಣಿಗಳು, 8670–ಚೆಕ್ಕಗಳು ಮತ್ತು ಬಿಲ್ಲುಗಳು, 8782 ಇರಸಾಲುಗಳು, 8658– ಅಮಾನತು ಲೆಕ್ಕಗಳು.

### 3. ಋಣ ಶೀರ್ಷಿಕೆಗಳು : Debt heads

ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಜಿಲ್ಲಾ ಪಂಚಾಯತಿ/ ತಾಲ್ಲೂಕು ಪಂಚಾಯತಿಗಳು ಸಾಲಗಳನ್ನು ಎತ್ತಿಲ್ಲದಿದ್ದಲ್ಲಿ, ಇದನ್ನು 'ಶೂನ್ಯ' ಎಂದು ತೋರಿಸುವುದು.

*(ಮುಂದುವರೆಯುತ್ತದೆ)*

ಗ್ರಾಮ ಸ್ವರಾಜ್

# ಪರಿಸರ ನಿರ್ವಹಣ ಮಾರ್ಗಸೂಚಿ

ಗ್ರಾಮ ಪಂಚಾಯತಿಯು ತೆಗೆದುಕೊಳ್ಳುವ ಯಾವುದೇ ಕಾರ್ಯಕ್ರಮ ಅಥವಾ ಕಾಮಗಾರಿ ಕೆಲಸಗಳಿಂದ ಪರಿಸರಕ್ಕೆ ಧಕ್ಕೆ ಉಂಟಾಗಬಹುದು. ಈ ಉದ್ದೇಶದಿಂದ ಪರಿಸರ ನಿರ್ವಹಣಾ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗಿದೆ.

## ಮೇಲ್ವಿಚಾರಣೆ ಮತ್ತು ಉಸ್ತವಾರಿ

ಕಾಮಗಾರಿಗಳ ಅನುಷ್ಠಾನದ ಕಾಲದಲ್ಲಿ ಪರಿಸರಕ್ಕೆಧಕ್ಕೆ ಉಂಟಾಗದಂತೆ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಮಾಡುವ ಅಧಿಕಾರಗಳನ್ನು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ವಹಿಸಲಾಗಿದೆ. ಪರಿಸರ ಸಂರಕ್ಷಣೆಗಾಗಿ ಹೊರಡಿಸಲಾದ ಪರಿಸರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮ ವಹಿಸಬೇಕು. ಪರಿಸರ ನಿರ್ವಹಣೆಯ ಓಕೆ ಕಾರ್ಡುಗಳನ್ನು ಮತ್ತು ಅದರ ಅನುಷ್ಟಾನ ಕೆಲಸವನ್ನು ಪರಿಶೀಲಿಸುವ ಅಧಿಕಾರ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಂಬಂಧಿಸಿದೆ. ಜಿಲ್ಲಾ ಪಂಚಾಯತಿಯ ನೋಡಲ್ ಅಧಿಕಾರಿಯವರು (ಅನಿಯತವಾಗಿ Ramdam) ಪ್ರತಿ ತಿಂಗಳು 2 ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು.ರಾಜ್ಯ ಮಟ್ಟದ ಪಂಚಾಯತ್ ಸೌಲಭ್ಯ ತಜ್ಞರು ತಿಂಗಳಲ್ಲಿ ಕನಿಷ್ಟ 4 ಗ್ರಾಮ ಪಂಚಾಯತಿ ಗಳಿಗೆ ಭೇಟಿನೀಡಿ ಉಸ್ತುವಾರಿ (Monitoring) ಮಾಡಬೇಕು.

## ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ (Capacity building programme)

ಪ್ರಸ್ತುತ 2010 ಮೇ ತಿಂಗಳ ಮಾಹೆಯುಲ್ಲಿ ಗ್ರಾಮ ಪಂಚಾಯಿತಿ ಗಳಿಗೆ ಸಾರ್ವತ್ರಿಕ ಚುನಾವಣೆಗಳು ನಡೆಸಲಾಗಿದೆ ಹೊಸದಾಗಿ ಆಯ್ಕೆಗೊಂಡ ಹಾಗು ತರಬೇತಿ ಪಡೆಯುದಿರುವ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ, ಮತ್ತು ಪರಿಸರ ಸಂಯೋಜಕರು ಪರಿಸರ ಸಂರಕ್ಷಣೆಬಗ್ಗೆ ನೀಡುವ ತರಭೇತಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಪಾಲ್ಗೊಲ್ಲುವಂತೆ ಕಾರ್ಯನಿರ್ವಾಹಕ ಅಧಿಕಾರಿಯುವರು ಕ್ರಮ ವಹಿಸುವುದು.ಪರಿಸರ ಸಂರಕ್ಷಣೆಯ ಮಹತ್ವ, ಧ್ಯೇಯೋದ್ದೇಶ ಮತ್ತು ಪರಿಸರ ನಿರ್ವಹಣೆಯ ಬಗ್ಗೆ ಗ್ರಾಮ ಪಂಚಾಯಿತಿಯ ಸದಸ್ಯರು, ಸ್ತ್ರೀ ಶಕ್ತಿ ಗುಂಪು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಎಲ್ಲಾ ಸಾರ್ವಜನಿಕರಿಗೆ ಪ್ರಸಾರ ಮಾಧ್ಯಮ ಗಳು, ಕರಪತ್ರಗಳು ಮತ್ತು ಬಿತ್ತಿಪತ್ರಗಳ ಮೂಲಕ ಮಾಹಿತಿಯನ್ನು ಒದಗಿಸಬೇಕು. ಗ್ರಾಮ ಸಭೆ ಮತ್ತು ವಾರ್ಡ್ ಸಭೆಯಲ್ಲಿ ಪರಿಸರ ಸಂರಕ್ಷಣೆಯ ಕ್ರಮಗಳ ಬಗ್ಗೆ ದೀರ್ಘವಾಗಿ ಚರ್ಚಿಸಿ ಸದಸ್ಯರಲ್ಲಿ ಸೂಕ್ತ ಜಾಗೃತಿ ಅರಿವು ಮತ್ತು ಜ್ಞಾನವನ್ನು ಮೂಡಿಸುವುದು ಅತ್ಯವಶ್ಯಕ. ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಪರಿಸರ ರಕ್ಷಣೆ ಕೆಲಸದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ ಸೂಕ್ತ ಅವಕಾಶಗಳನ್ನು ಕಲ್ಪಿಸುವುದು ಮತ್ತು ಪರಿಸರ ಸಂರಕ್ಷಣೆ ಬಗ್ಗೆ

* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಎಂ.ಎಸ್.ಐ.ಎಲ್. ಕಟ್ಟಡ, 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

ಉತ್ತೇಜಿಸುವುದು ಅತ್ಯವಶ್ಯಕ. ಪ್ರಥಮವಾಗಿ ಪಂಚಾಯತ್ ರಾಜ್‌ಸಂಸ್ಥೆಗಳ ಭಾಗಿದಾರರುಗಳಾದ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಅಧ್ಯಕ್ಷ, ಉಪಾಧ್ಯಕ್ಷ, ಸ್ತ್ರೀ ಶಕ್ತಿ ಗುಂಪು, ಗ್ರಾಮ ಪಂಚಾಯಿತಿ ಪರಿಸರ ಸಂಯೋಜಕರು ಹಾಗೂ ಜೂನಿಯರ್ ಇಂಜಿನಿಯರ್ ಗೆ ಪರಿಸರ ಚೌಕಟ್ಟಿನ ನಿರ್ವಹಣೆ ಹಾಗು ಪರಿಸರದ ಓ.ಕೆ.ಕಾರ್ಡ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಉಪಗ್ರಹ ಆಧಾರಿತ ತರಭೇತಿ ನೀಡಲಾಗಿದೆ.

## ತಾಲ್ಲೂಕು ಸಂಪನ್ಮೂಲ ಕೇಂದ್ರ

ತಾಲ್ಲೂಕು ಸಂಪನ್ಮೂಲ ಕೇಂದ್ರದಲ್ಲಿ ನೇಮಕವಾಗಿ ಕೆಲಸ ಮಾಡುತ್ತಿರುವ ಸಮುದಾಯ ಸಂಘಟಕರು (Social Mobilizer) ಪರಿಸರ ಸಂರಕ್ಷಣೆ ಹಾಗೂ ಪರಿಸರದ ಓ.ಕೆ. ಕಾರ್ಡ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಗಾಮ ಪಂಚಾಯಿತಿಗೆ ಅಗತ್ಯವಾದ ಸಲಹೆ, ಸಹಾಯ ಮತ್ತು ಮಾರ್ಗದರ್ಶನ ಮಾಡಬೇಕು. ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ನಡುವೆ ಸಮನ್ವಯತೆ ಸಾಧಿಸುವುದು. ಪರಿಸರ ಚೌಕಟ್ಟಿಗೆ ಸಂಬಂದಿಸಿದಂತೆ ಪ್ರಗತಿ ವರದಿಗಳನ್ನು ಕಾರ್ಯ ನಿರ್ವಾಹಕ ಅಧಿಕಾರಿಯ ಮೂಲಕ ಕೇಂದ್ರ ಕಛೇರಿಗೆ ಕಳುಹಿಸುವುದು.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕಾರ ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುವ ಕೆಲಸಗಳಿಂದ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗಬಾರದು. ಈ ಉದ್ದೇಶದಿಂದ ಪರಿಸರ ಮತ್ತು ಸಾಮಾಜಿಕ ಸುರಕ್ಷತೆಗಳ ಬಗ್ಗೆ ಗ್ರಾಮ ಪಂಚಾಯತಿಗಳಿಂದ ಅನುಸರಿಬೇಕಾದ ಕ್ರಮಗಳ ಪರಾಮರ್ಶನ ಕೈಪಿಡಿಯನ್ನು ಸಿದ್ಧಪಡಿಸಿದೆ.

ಪ್ರಸ್ತುತ ಪರಿಸರಕ್ಕೆ ಧಕ್ಕೆಯುಂಟು ಮಾಡುವ ಅಂಶಗಳು ಮತ್ತು ಪರಿಸರ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ನಿವಾರಣ ಕ್ರಮಗಳನ್ನು ಈಕೆಳಕಂಡಂತೆ ಪಟ್ಟಿ ಮಾಡಿ ತಿಳಿಸಲಾಗಿದೆ.

### ಪರಿಸರ ಮತ್ತು ಸಾಮಾಜಿಕ ಸುರಕ್ಷತೆಗಳ ಬಗ್ಗೆ ಗ್ರಾಮ ಪಂಚಾಯತಿಗಳ (ನಿರ್ವಹಣಾ) ಕೈಪಿಡಿ
### ಭಾಗ–1 ಪರಿಣಾಮಗಳು ಮತ್ತು ನಿವಾರಣಾ ಕ್ರಮಗಳು
### ಕೊಳಗಳ ನಿರ್ಮಣ, ತೋಡುವುದು, ಹೂಳೆತ್ತುವುದು ಸ್ವಚ್ಛ ಮಾಡುವುದು

| ಪರಿಸರಕ್ಕೆ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ಫಲವತ್ತಾದ ಕೃಷಿ ಜಮೀನಿನಲ್ಲಿ ಕೊಳಗಳ ನಿರ್ಮಾಣ | • ಹೊಸ ಕೊಳಗಳ ನಿರ್ಮಾಣಕ್ಕಾಗಿ ಸಾಧ್ಯವಾದ ಮಟ್ಟಿಗೆ ಗೋಮಾಳ/ ದರಖಾಸ್ತು/ಪಾಳುಭೂಮಿ ಮತ್ತು ಕೃಷಿಯೇತರ ಭೂಮಿಯಲ್ಲಿ ನಿವೇಶನವನ್ನು ಪಡೆಯಬೇಕು. |
| • ಅಸ್ಥಿರ ಮಣ್ಣಿನ ಬದು / ಕಟ್ಟೆ ಏರಿಗಳ ಸವಕಳಿ | • ಭೂ ಸವಕಳಿಯನ್ನು ತಡೆಯಲು ದಂಡೆಗಳನ್ನು ಪುನರ್ ನಿರ್ಮಾಣ ಮಾಡಬೇಕು. (ಉದಾ: ಪ್ಲಾಂಟೇಶನ್, ಕಲ್ಲುಗಳೊಂದಿಗೆ ಸಾಲುಗಳ ನಿರ್ಮಾಣ ಇನ್ನಿತರ) |
| • ಅಗೆಯಬೇಕಾದ ಜಾಗದಲ್ಲಿ ಮರಗಳನ್ನು ಕಡಿಯುವುದು. | • ಮೂರಕ್ಕಿಂತ ಹೆಚ್ಚು ಮರಗಳನ್ನು ಕಡಿಯಬೇಕಾದಲ್ಲಿ ಅರಣ್ಯ ಇಲಾಖೆಯ ಅನುಮತಿ ಯನ್ನು ಪಡೆಯಬೇಕು. ಒಂದು ಮರ ಕಡಿದಲ್ಲಿ ಅದಕ್ಕೆ ಪ್ರತಿಯಾಗಿ ಕನಿಷ್ಠ ಎರಡಕ್ಕಿಂತ ಹೆಚ್ಚು ಸಸಿಗಳನ್ನು ನೆಟ್ಟು, ಅವುಗಳನ್ನು ಬೆಳೆಸಲು ಕ್ರಮ ವಹಿಸಬೇಕು. |

| | |
|---|---|
| • ಆಕಸ್ಮಿಕವಾಗಿ ಪುರಾತತ್ವ ಮಹತ್ವವುಳ್ಳ ವಸ್ತುಗಳು ದೊರೆತಲ್ಲಿ | • ಭೂಮಿಯನ್ನು ಅಗೆಯುವ ಸಂದರ್ಭದಲ್ಲಿ ಯಾವುದೇ ಪುರಾತತ್ವ, ಸಾಂಸ್ಕೃತಿಕ, ಐತಿಹಾಸಿಕ ಅಥವಾ ಧಾರ್ಮಿಕವಾಗಿ ಮಹತ್ವವುಳ್ಳ ವಸ್ತುಗಳು ಕಂಡು ಬಂದಲ್ಲಿ ಅವುಗಳನ್ನು ಜಿಲ್ಲಾಧಿಕಾರಿಯವರಿಗೆ ಒಪ್ಪಿಸುವುದು. |
| • ಭೂಸ್ವಾಧೀನದ ಅವಶ್ಯಕತೆ | • ನಿಯಮಾನುಸಾರ ಕ್ರಮಬದ್ಧವಾದ ಪದ್ಧತಿಯಂತೆ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಬೇಕು. ಇದರಲ್ಲಿ ಯಾವುದೇ ಗೊಂದಲ ವಿರಬಾರದು. |
| • ಬಾಲ ಕಾರ್ಮಿಕರ ಪಾಲ್ಗೊಳ್ಳುವಿಕೆ | • ಬಾಲ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳ ಬಾರದು. |
| • ನಿವೇಶನ ಆಯ್ಕೆಯು ಸಮುದಾಯದ ವಿವಿಧ ಗುಂಪುಗಳ ನಡುವೆ ವಿವಾದಗಳಿಗೆ ಕಾರಣವಾಗಬಹುದು | • ಸಮಾನತೆ ತತ್ವವನ್ನು ಆಧಾರಿಸಿ ಕಡು ಬಡವರು ಮತ್ತು ಬುಡಕಟ್ಟುಗಳ ಜನ ವಾಸಿಸುವ ಜನವಸತಿ ಗಳಿಗೆ (Hamlets) ಆದ್ಯತೆಯ ಆಧಾರದ ಮೇಲೆ ಹೊಸ ಮೂಲಭೂತ ಸೌಲಭ್ಯಗಳುಳ್ಳ ಅವಕಾಶಗಳನ್ನು ಒದಗಿಸಬೇಕು. |
| • ತೀರ (ದಂಡೆ) ದಲ್ಲಿ ಶೇಖರವಾಗುವ ಹೂಳಿನ ದಿಬ್ಬಗಳಿಂದಾಗಿ ಕೆರೆಗಳು ದುರ್ಬಲಗೊಳ್ಳಬಹುದು. ಕೃಷಿ ಭೂಮಿಯ ಮೇಲೆ ಶೇಖರಣೆ ಯಗುವ ಹೂಳಿನ ದಿಬ್ಬಗಳಿಂದಾಗಿ ನೀರಾವರಿ ಮತ್ತು ಚರಂಡಿಯ ಸಮಸ್ಯೆಗಳಿಗೆ ಕಾರಣವಾಗಬಹುದು. | • ಕೃಷಿ ಭೂಮಿ/ದಂಡೆಗಳ ಮೇಲೆ ಹೂಳಿನ ದಿಬ್ಬಗಳು ಶೇಖರಣೆಯಾಗಿದೆಯೇ? ಎಂಬುದನ್ನು ಗಮನಿಸಬೇಕು. ಆಗಿದ್ದಲ್ಲಿ ಸರಿಪಡಿಸಬೇಕು. |
| • ಭೂಮಿಯ ಅವಶ್ಯಕತೆ | • ಹೊಸದಾಗಿ ಕೊಳಗಳ ನಿರ್ಮಾಣ ಮಾಡುವ ಸ್ಥಳವನ್ನು ಸಮುದಾಯದ ವಿರೋಧವಿಲ್ಲದ ಸರ್ಕಾರ, ಗ್ರಾಮ ಪಂಚಾಯತಿ, ಭೂಮಿ ಅಥವಾ ಖಾಸಗಿ ಜಮೀನುಗಳನ್ನು ಮುಕ್ತವಾಗಿ ಖರೀದಿಸುವುದರ ಮೂಲಕ ನಿವೇಶನವನ್ನು ಪಡೆಯುವುದು. ಜಮೀನುಗಳನ್ನು ಕಳೆದು ಕೊಂಡವರಿಗೆ ಸೂಕ್ತ ಪರಿಹಾರ ಕಲ್ಪಿಸಬೇಕು. |

*(ಮುಂದುವರೆಯುತ್ತದೆ)*

# ಫ್ಯಾಷನ್ ಆಭರಣ

– ಎಸ್.ಸಿ. ದೇವರಮನಿ *

ಕುಶಲಕರ್ಮಿಗಳ ಅನುಕೂಲಕ್ಕಾಗಿ ಒಂದು, ಮೂರು, ಒಂಬತ್ತು ತಿಂಗಳುಗಳ ಆಭರಣ ತಯಾರಿಕೆ, ವಿನ್ಯಾಸ, ತಾಂತ್ರಿಕತೆಯಲ್ಲಿ ಜೆ.ಎಸ್.ಎಸ್. ಅಂಗವಿಕಲರ ಪಾಲಿಟೆಕ್ನಿಕ್ ಸಂಸ್ಥೆ, ಮೈಸೂರು ಶಿಷ್ಯವೇತನ ನೀಡಿ ಕರಕುಶಲ ಆಯುಕ್ತರ ಸಹಕಾರದಲ್ಲಿ ತರಬೇತಿ ನೀಡುತ್ತಿದೆ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಭರಣ ಬಳಕೆ ಮಾಡುತ್ತಿದ್ದರು. ಇಂದು ಬಳಕೆಯಾಗುವ ಪಾಸ್‌ಪೋರ್ಟ್‌ನಂತೆ ವಿವಿಧ ರಾಜರುಗಳು ಉಂಗುರವನ್ನು ಬಳಕೆಮಾಡುತ್ತಿದ್ದರೆಂದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ. ದುಷ್ಟ ಶಕ್ತಿಗಳನ್ನು ದೂರವಿಡಲು ಹರಳುಗಳ ಬಳಕೆಮಾಡುತ್ತಿದ್ದರು. ಆಭರಣ ಧಾರ್ಮಿಕ, ವಾಣಿಜ್ಯ, ವೈಯಕ್ತಿಕ ಭದ್ರತೆ ಮುಂತಾದ ವಿಷಯಗಳಲ್ಲಿಯ ಮಹತ್ವದ ಪಾತ್ರನಿರ್ವಹಿಸಿದ್ದು ತಿಳಿದುಬರುತ್ತದೆ.

ಹಿಂದು ಧರ್ಮಗ್ರಂಥಗಳಲ್ಲಿ ಆಭರಣದ ಉಲ್ಲೇಖ ಕಂಡುಬರುತ್ತದೆ. ಒಂದನೆಯ ಶತಮಾನದ ಗ್ರೀಕ್‌ಪ್ರಭಾವದ ಆಭರಣಗಳು ಕೂಡಾ ದೊರತಿವೆ. ಅಂದಿನಿಂದ ಇಂದಿನವರೆಗೆ ಆಭರಣಗಳು ಹೆಚ್ಚು ಪ್ರಸಿದ್ಧಿಪಡೆದಿವೆ. ಆಭರಣಕ್ಕೆ ಮರುಳಾಗದ ಮಹಿಳೆಯರು ಇಂದೂ ಕೂಡ ಇಲ್ಲ. ಬದಲಾದ ಸಂಸ್ಕೃತಿಗೆ ತಕ್ಕಂತೆ ಆಭರಣಗಳು ಬದಲಾಗಿವೆ. ಬಂಗಾರ, ವಜ್ರ, ವೈಡೂರ್ಯದ ಆಭರಣ ಮದುವೆ ಹಾಗು ಇನ್ನಿತರ ಸಮಾರಂಭಗಳಲ್ಲಿ ಇಂದಿಗೂ ಅತ್ಯವಶ್ಯಕ.

ಇಂದು ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಹೀಗಾಗಿ ಆದಾಯದಲ್ಲಿ ಏರಿಕೆಯಾಗಿದೆ. ಮಹಿಳೆ ಸಾಮಾಜಿಕ ರಂಗದಲ್ಲಿ ಮಹತ್ವದ ಸ್ಥಾನ ಪಡೆದಿದ್ದಾಳೆ. ಶಿಕ್ಷಣಕ್ಷೇತ್ರದಲ್ಲಿ



* ಉಪ ನಿರ್ದೇಶಕರು, ಕರಕುಶಲ ಮಾರುಕಟ್ಟೆ ಹಾಗು ಸೇವಾ ವಿಸ್ತರಣ ಕೇಂದ್ರ,
# 1259–60, 'ಪದ್ಮಾಲಯ', ವಿನೋಭ ರಸ್ತೆ, ಶಿವರಾಂ ಪೇಟೆ, ಮೈಸೂರು–570 001. ಮೊಬೈಲ್ : 9986290012



ಯುವತಿಯರ ಸಂಖ್ಯೆ ಹೆಚ್ಚಿದೆ. ಗೃಹಸ್ಥಮಹಿಳೆಯರು ಕೂಡಾ ಅಂದಚಂದವಾಗಿ ಕಾಣಬಯಸುತ್ತಾರೆ. ಹೀಗಾಗಿ ಸಾಂಪ್ರದಾಯಿಕ ಆಭರಣದೊಂದಿಗೆ ಫ್ಯಾಶನ್ ಆಭರಣ ಹೆಚ್ಚು ಪ್ರಸಿದ್ಧಿಹೊಂದಿದೆ.

ಬಣ್ಣ, ಆಕಾರ, ಕ್ರಿಯಾತ್ಮಕತೆ, ಕೌಶಲತೆ, ಬಾಳಿಕೆ, ಮೌಲ್ಯ, ಗುಣಾತ್ಮಕತೆ ಹಾಗು ಸಮಾಜಿಕ ಮನ್ನಣೆ ಇವೆಲ್ಲ ಫ್ಯಾಶನ್ ಆಭರಣದ ವಿಷಯದಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಬದಲಾಗುತ್ತಿರುವ ವೇಷ ಭೂಷಣ ಹಾಗು ಆಭರಣ ಒಂದು ನಾಣ್ಯದ ಎರಡುಮುಖಗಳಿದ್ದಂತೆ. ಇಂದು ಆಭರಣ ಕೊಡುಗೆಯ ವಸ್ತುವಾಗಿ ಮಾರ್ಪಟ್ಟಿದೆ. ಕ್ರಿಸ್‌ಮಸ್, ಯುಗಾದಿ, ದೀಪಾವಳಿ, ದಸರಾ, ನವವರ್ಷದ ದಿನ, ವ್ಯಾಲೆಂಟಾಯಿನ್ ದಿನ, ತಾಯಂದಿರದಿನ, ಜನ್ಮದಿನ, ಇನ್ನಿತರ ಮಹತ್ವದ ದಿನ/ಹಬ್ಬಗಳಲ್ಲಿ ಆಭರಣ ಹೆಚ್ಚು ಮಹತ್ವ ಪಡೆಯುತ್ತವೆ. ಆಭರಣಗಳ ಚಂದದ ನೋಟ ಇಂದು ಪ್ರಾಮುಖ್ಯತೆ ಪಡೆಯುತ್ತಿದೆ. ಸಮಾಜ ಆಕರ್ಷಕ ಕೇಶಾಲಂಕಾರಕ್ಕೆ ಮಾನ್ಯತೆ ನೀಡಿದ್ದರಿಂದ ಆಭರಣದೊಂದಿಗೆ ಕೇಶಾಲಂಕಾರ ವಸ್ತುಗಳು ಕೂಡಾ ವಿವಿಧತೆಯನ್ನು ಪಡೆದಿದೆ. ಪ್ಯಾಶನ್ ಆಗಿ ಯುವಕರು ಕೂಡಾ ಆಭರಣದತ್ತ ಮುಖ ಮಾಡುತ್ತಿದ್ದಾರೆ.

## ಕಚ್ಚಾವಸ್ತುಗಳು

ಫ್ಯಾಶನ್ ಆಭರಣ ತಯಾರಿಕೆಯಲ್ಲಿ ಮಣ್ಣು, ಹುಲ್ಲು, ಕಾಗದ, ನಿಸರ್ಗದಲ್ಲಿ ದೊರೆಯುವ ವಿವಿಧ ಬೀಜಗಳು, ದಾರ, ಮರ, ಬಿದಿರು, ಪ್ಲಾಸ್ಟಿಕ್, ಚರ್ಮ, ಸಿಲಿಕಾನ್, ಗಾಜು, ರಬ್ಬರ್, ಬೆಳ್ಳಿ, ಜರ್ಮನ್ ಸಿಲ್ವರ್, ಸ್ಟೀಲ್, ಟಿಟಾನಿಯಂ, ತಾಮ್ರ, ಹಿತ್ತಾಳೆ, ಲೇಪನವಾಗಿ ಬಂಗಾರ, ಭತ್ತ, ಶಂಖ, ಮದರ್ ಆಫ್ ಪರ್ಲ್ ಹೀಗೆ ಅಗಣಿತ ಕಚ್ಚಾವಸ್ತುಗಳು ಫ್ಯಾಶನ್ ಆಭರಣ ತಯಾರಿಕೆಯಲ್ಲಿ ಬಳಕೆಯಾಗುತ್ತಾವೆ.

## ವಿನ್ಯಾಸ

ವಿನ್ಯಾಸದಲ್ಲಿ ಸಾಮಾನ್ಯವಾಗಿ ಜಾಮಿತಿಯ ಗೋಲಾಕಾರ, ಚೌಕೋನ, ತ್ರಿಕೋನ, ಪ್ರಾಕೃತಿಕ ಹೂ, ಹಣ್ಣು, ಎಲೆ, ಕಾಯಿ, ಸೂರ್ಯ, ಚಂದ್ರ, ಚುಕ್ಕೆ, ರಾಶಿ ಚಿನ್ಹಿ, ಗ್ಲೋಬ್, ಮಾನವ ಆಕೃತಿ, ಹೃದಯ, ಕ್ರಾಸ್ ಹೀಗೆ ವಿನ್ಯಾಸಗಳು ಆಕಾಶದಷ್ಟು ವಿಶಾಲವಾಗಿವೆ.

## ತಾಂತ್ರಿಕತೆ

ಕಡಿಮೆ ಬೆಲೆಯ, ಹಗುರವಾದ, ಟೊಳ್ಳಾದ, ವಿವಿಧ ಬಣ್ಣಗಳ ತಾಂತ್ರಿಕತೆ ಹೆಚ್ಚು ಬಳಸಲ್ಪಡುತ್ತವೆ. ಸಾಮಾನ್ಯವಾದ ಸಲಕರಣೆಗಳು ಆಭರಣ ತಯಾರಿಕೆಗಳಲ್ಲಿ ಬಳಸಲಾಗುತ್ತದೆ. ಹೆಚ್ಚುಬೆಲೆಯ ಯಂತ್ರಗಳನ್ನು ಸೇವಾಶುಲ್ಕನೀಡಿ ಕುಶಲಕರ್ಮಿಗಳು ಬಳಸುತ್ತಾರೆ.

## ತಯಾರಿಕೆಯ ವಸ್ತುಗಳು

ಕಂಠ, ಕಿವಿ, ತೋಳು, ಕಾಲು, ಸೊಂಟಕ್ಕಾಗಿ ಬಳಸುವ ವೈವಿದ್ಯಮಯವಾದ ಆಭರಣ ತಯಾರಾಗುತ್ತವೆ.

## ಮಾರುಕಟ್ಟೆ

ಆಭರಣ ತಯಾರಿಕಾ ಘಟಕಗಳು ಮೊದಲ ಮಾರುಕಟ್ಟೆ ಸ್ಥಳವಾಗಿವೆ. ಪರಿಚಯದ ವಲಯ ಎರಡನೆಯ ಮುಖ್ಯ ಪ್ರಚಾರ ಹಾಗು ಮಾರುಕಟ್ಟೆಯ ಮಾಧ್ಯಮವಾಗಿದೆ. ಸಗಟು ವ್ಯಾಪಾರ ಮಧ್ಯವರ್ತಿಗಳಿಂದ ಆಗುತ್ತದೆ. ಆಟಿಕೆ ಮಳಿಗೆಗಳಲ್ಲಿ, ಆಭರಣದ ಚಿಲ್ಲರೆ ಅಂಗಡಿಗಳಲ್ಲಿ ಫ್ಯಾನ್ಸಿ ಅಂಗಡಿಗಳಲ್ಲಿ, ಕರಕುಶಲ ಮಳಿಗೆಗಳಲ್ಲಿ ಹೀಗೆ ವಿವಿಧೆಡೆಗಳಲ್ಲಿ ಆಭರಣ ಮಾರಾಟವಾಗುತ್ತವೆ. ಕೇಂದ್ರ ಹಾಗು ರಾಜ್ಯ ಸರ್ಕಾರದ ಇಲಾಖೆಗಳಲ್ಲದೆ, ಖಾಸಗಿ ಸಂಸ್ಥೆಗಳು ಆಯೋಜಿಸುವ ಪ್ರದರ್ಶನಗಳಲ್ಲಿ ಅನೇಕ ಆಭರಣ ಮಳಿಗೆಗಳಿರುತ್ತವೆ. ದೆಹಲಿಯ ದಿಲ್ಲಿಹಾತ್‌ನಲ್ಲಿ ವರ್ಷವಿಡಿ ನಡೆಯುವ ಪ್ರದರ್ಶನಗಳಲ್ಲಿ ಆಭರಣಗಳ ಮರುಕಟ್ಟೆಯಾಗುತ್ತದೆ. ದೆಹಲಿಯ ಪ್ರಗತಿ ಮೈದಾನದಲ್ಲಿ ನಡೆಯುವ 'ವ್ಯಾಪಾರಿ ಮೇಳ'ದಲ್ಲಿ ವಿಐಟಿಸಿ (VITC) ಕರ್ನಾಟಕ ವಿಶೇಷ ಪೆವಿಲಿಯನ್‌ನಲ್ಲಿ ಮಾರುಕಟ್ಟೆಗೆ ಅವಕಾಶ ಕಲ್ಪಿಸುತ್ತದೆ. ರಾಜ್ಯ ಹಾಗು ರಾಷ್ಟ್ರದಲ್ಲಿಯ ಪ್ರದರ್ಶನಗಳಲ್ಲಿ ಭಾಗವಹಿಸುವ ಕುಶಲಕರ್ಮಿಗಳಿಗೆ ಮಳಿಗೆ ಬಾಡಿಗೆ, ಭತ್ಯೆ ಮುಂತಾದವನ್ನು ನೀಡಿ ಪ್ರೋತ್ಸಾಹಿಸುತ್ತಿದೆ.



ಹದಿಹರೆಯದ ಹುಡುಗಿಯರು ಪ್ರತಿ ಮಾರಾಟಮಳಿಗೆ, ಪ್ರದರ್ಶನಗಳಿಗೆ ಭೇಟಿ ನೀಡಿ ನವೀನತೆಯನ್ನು ಹುಡುಕುತ್ತಾರೆ. ಇವರಿಗೆಲ್ಲ ಹೆಚ್ಚಿನ ಪಾಕೇಟ್‌ಹಣ ದೊರೆಯುತ್ತದೆ. ಇವರೆಲ್ಲ ಮಾರುಕಟ್ಟೆಯಲ್ಲಿ ತಮಗಿಷ್ಟವಾದ ನಾಯಕಿಯರ ಆಭರಣಗಳ ಪ್ರತಿಕೃತಿಗಳನ್ನು ಕೊಂಡುಕೊಳ್ಳುತ್ತಾರೆ. ಹೊಳಪಿನ, ಆಕರ್ಷಕ ವರ್ಣದ ಆಭರಣ ಇವರಿಗೆ ಹೆಚ್ಚು ಮೆಚ್ಚಿಗೆಯಾಗುತ್ತವೆ. ಇವರೆಲ್ಲ ದೂರದರ್ಶನದಲ್ಲಿ ಪ್ರಸಾರವಾಗುವ ದಾರವಾಹಿ ಹಾಗು ಸಿನಮಾಗಳಲ್ಲಿ ತೋರಿಸುವ ಆಭರಣಗಳ ಪ್ರತಿಕೃತಿ ಗಳನ್ನು ಖರೀದಿಸಲು ಉತ್ಸುಕರಾಗಿರುತ್ತಾರೆ. ಇವರು ಧರಿಸಿದ್ದೆ ಮುಂದೆ ಫ್ಯಾಶನ್ ಆಗಿ ಮಾರ್ಪಾಡಾಗುತ್ತದೆ.

ಮೇಲ್ದರ್ಜೆಯ ಮಹಿಳೆಯರು ಉತ್ಕೃಷ್ಟ ಗುಣಮಟ್ಟದ, ಬ್ರ್ಯಾಂಡ್ ಹೊಂದಿದ, ವಿನ್ಯಾಸಕಾರರ ಆಭರಣಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಾರೆ. ಮಧ್ಯಮ ತರಗತಿಯ ಮಹಿಳೆಯರು ಉತ್ತಮ ಗುಣಮಟ್ಟದ ಅಂದಕಾಣುವ ಮಧ್ಯಮ ಬೆಲೆಯ ಕಂಪನಿಗಳ ಆಭರಣಕ್ಕೆ ಮಹತ್ವ ನೀಡುತ್ತಾರೆ. ಕೆಳದರ್ಜೆಯ ಮಹಿಳೆಯರು ಕಡಿಮೆ ಬೆಲೆಯ ಮೂಲ ವಿನ್ಯಾಸದ ಪ್ರತಿಕೃತಿಗಳನ್ನು ಇಚ್ಛೆಪಡುತ್ತಾರೆ ಹಾಗು ಹೊಸತನಕ್ಕಾಗಿ ಕಾತರ ಹೊಂದಿರುತ್ತಾರೆ. ಅದು ಅಲ್ಲದೆ ದರ ಕಡಿತ ಮಾರಾಟಕ್ಕೆ ಗಮನ ನೀಡುತ್ತಾರೆ.

## ಕಲಾಕೇಂದ್ರಗಳು

ರಾಜ್ಯದ ರಾಜಧಾನಿ ನಗರ ಬೆಂಗಳೂರು ಫ್ಯಾಶನ್ ಆಭರಣ ತಯಾರಿಕೆಯ ಪ್ರಮುಖ ಕಲಾಕೇಂದ್ರವಾಗಿದೆ. ಸಾಂಸ್ಕೃತಿಕ ನಗರ ಮೈಸೂರು ವಿವಿಧ ಆಭರಣ ತಯಾರಿಕೆಯ ಕೇಂದ್ರವಾಗಿದೆ. ಮೈಸೂರು ಜಿಲ್ಲೆಯ ದೂರ ಮೃಣ್ಮಯ ಆಭರಣದ ಕೇಂದ್ರವಾಗಿದೆ. ಐತಿಹಾಸಿಕ ನಗರ ಬಿಜಾಪುರ ವೈವಿಧ್ಯಮಯ ಆಭರಣದ ಸ್ಥಾನವಾಗಿದೆ. ಬಿಜಾಪುರ ಜಿಲ್ಲೆಯ ಸಾರವಾಡ ಉತ್ತಮ ಕಲಾಕೇಂದ್ರವಾಗಿದೆ. ಬೀದರ್ ವಿಭಿನ್ನ ಮಾದರಿಯ ಆಭರಣಕ್ಕೆ ಹೆಸರುವಾಸಿ.

ಬೊಂಬೆಗಳನಾಡಾದ ಚನ್ನಪಟ್ಟಣ ಮರದ ಆಭಾರಣಕ್ಕೆ ಹೆಸರುವಾಸಿ. ಮಹಿಳೆಯರು ತಯಾರಿಸಿದ ಅರಗಿನ ಲೇಪದ ಮಣಿಗಳಿಂದ ವಿವಿಧ ಆಭರಣ ತಯಾರಾಗುತ್ತವೆ. ಮಂಗಳೂರು, ಕಾರವಾರ, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳು ವಿವಿಧ ರೀತಿಯ ಆಭರಣ ತಯಾರಿಕಾ ಕೇಂದ್ರಗಳಿವೆ.

## ಕುಶಲಕರ್ಮಿಗಳು

ಬೆಂಗಳೂರಿನ ಶ್ರೀಮತಿ. ಬಿಂದು ಮಥಾಯ್ ಟೆರ್ರಾಕೊಟ್ಟ (ಸುಟ್ಟಮಣ್ಣಿಗೆ ಟೆರ್ರಾಕೊಟ್ಟಾ ಎನ್ನುವರು) ಆಭರಣ ತಯಾರಿಕೆ ಯಲ್ಲಿ ರಾಷ್ಟ್ರಪ್ರಸ್ತಿಪಡೆದು ಕರ್ನಾಟಕಕ್ಕೆ ಕೀರ್ತಿತಂದಿದ್ದಾರೆ. ಇವರು ತಯಾರಿಸಿದ ಮೃಣ್ಮಯ ಆಭರಣ ಬಹು ಆಕರ್ಷಕ. ಬೆಂಗಳುರಿನ ಶ್ರೀಮತಿ. ಶಾಂತಿ ಹಿತ್ತಾಳೆಯಲ್ಲಿ ಆಭರಣ ತಯಾರಿಸಿ ಬಂಗಾರದ ಲೇಪನ ಮಾಡುತ್ತಾರೆ. ಶ್ರೀಮತಿ. ಶಕೀಲಾ ಗೌಸ್ ಪ್ರಕೃತಿಯಲ್ಲಿ ಲಭ್ಯವಿರುವ ವಿವಿಧ ಬೀಜಗಳನ್ನು ಬಳಸಿ ಆಭರಣ ತಯಾರಿಕೆ ಬಹು ವಿಶಿಷ್ಠವಾಗಿದೆ. ಭತ್ತದಿಂದ ತಯಾರಿಸಿದ ಕಿವಿವಾಲೆ ಹಾಗು ಕತ್ತಿನ ಹಾರ ನೋಡಲು ಬಲು ಅಂದ. ಗುಲಗಂಜಿ ಬೀಜದೊಂದಿಗೆ ಇನ್ನಿತರ ಬೀಜಗಳನ್ನು ಬಳಸಿ ಮಾಡಿದ ಸರ ಆಕರ್ಷಕ ಹಾಗು ಮೆರಗಿನಿಂದ ಕೂಡಿದ್ದಾಗಿರುತ್ತವೆ. ಶ್ರೀಮತಿ. ಕೆ. ಗಾಯತ್ರಿ ಕೂಡಾ ವಿಭಿನ್ನ ಆಭರಣ ತಯಾರಿಕೆಯಲ್ಲಿ ನಿರತರಾಗಿದ್ದಾರೆ. ಶ್ರೀ. ಕೆ.ಎಸ್. ಇಮ್ತಿಯಾಜ್ ವಿವಿಧ ಕಚ್ಚಾವಸ್ತುಗಳಿಂದ ಆಭರಣ ತಯಾರಿಸುತ್ತಾರೆ. ಕುಮಾರಿ ಜಾನ್ಹವಿ ಕೈಕಾಗದ, ಸೆರಾಮಿಕ್ಸ್, ಇನ್ನಿತರ ನಿರುಪಯುಕ್ತ ಕಚ್ಚಾವಸ್ತುಗಳಿಂದ ತಯಾರಿಸಿದ ಚಂದದ ಆಭರಣ ಭಿನ್ನವಾಗಿರುತ್ತವೆ. ಶ್ರೀ ರವಿಶಂಕರ್ ತೆಂಗಿನ ಚಿಪ್ಪಿನಲ್ಲಿ ಆಕರ್ಷಕ ಆಭರಣ ತಯಾರಿಸುತ್ತಾರೆ. ಶ್ರೀಮತಿ. ರಾಧಾ, ಇನ್ನು ಅನೇಕ ಕುಶಲಕರ್ಮಿಗಳು ರಾಜಧಾನಿ ನಗರದಲ್ಲಿ ಆಭರಣ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಮೈಸೂರಿನ ಶ್ರೀ ಸೋಲಾಪುರಕರ್ ಮಹಿಳಾ ಕುಶಲ ಕರ್ಮಿಗಳಿಗೆ ಕೆಲಸನೀಡಿ ಮೃಣ್ಮಯ ಆಭರಣ ತಯಾರಿಕೆಯಲ್ಲಿ ತೊಡಗಿದ್ದಾರೆ. ಶ್ರೀಮತಿ. ರಾಧಾ ಒಂದು ಗ್ರಾಮ್ ಬಂಗಾರದ ಲೇಪನದ ವಿಶಿಷ್ಟ ಆಭರಣ ತಯಾರಿಸುತ್ತಾರೆ. ಗ್ರಾಮಾಂತರ ಪ್ರದೇಶದ ದೂರಾದಲ್ಲಿ ಅನೇಕ ಕುಶಲಕರ್ಮಿಗಳು ಮಣ್ಣಿನ ಆಭರಣ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಬಿಜಾಪುರ ಜಿಲ್ಲೆಯ ಸಾರವಾಡ ಗ್ರಾಮದಲ್ಲಿ ಮಹಿಳೆಯರ ಸ್ವಸಹಾಯ ಗುಂಪುಗಳು ದಾರದಿಂದ ವಿವಿಧ ಉಡುಪುಗಳಿಗೆ ಒಪ್ಪುವಂತಹ ಆಭರಣ ತಯಾರಿಸುತ್ತಾರೆ. ಬಿಜಾಪುರ ನಗರದಲ್ಲಿ ಸಬಲ ಸಂಸ್ಥೆಯ ಸ್ವಸಹಾಯ ಗುಂಪುಗಳು ಕೂಡಾ ಆಭರಣ ತಯಾರಿಸುತ್ತಾರೆ. ಈ ಜಿಲ್ಲೆ ಲಂಬಾಣಿ ಸಾಂಪ್ರದಾಯಿಕ ಜರ್ಮನ್ ಸಿಲ್ವರ್‌ದಲ್ಲಿ ಆಭರಣ ಇಂದಿನ ಯುವತಿಯರಿಗಾಗಿ ನಿರ್ಮಿಸುತ್ತಾರೆ. ಅನೇಕ ಕುಶಲಕರ್ಮಿಗಳು ಬಿದ್ರಿ ಚಿತ್ರಕಲೆಯಲ್ಲಿ ವಿವಿಧ ಆಭರಣ ತಯಾರಿಸುತ್ತಾರೆ.

## ಸಮಸ್ಯೆಗಳು

ದೊಡ್ಡಕಂಪನಿಗಳು ಆಭರಣಗಳನ್ನು ಬಹುಸಂಖ್ಯೆಯಲ್ಲಿ ತಯಾರಿಸಿ ಕಡಿಮೆ ಬೆಲೆಯಲ್ಲಿ ಮಾರುವುದರಿಂದ ಕುಶಲಕರ್ಮಿಗಳು ಇವರಿಂದ ಸ್ಪರ್ಧೆಯನ್ನು ಎದುರಿಸ ಬೇಕಾಗುತ್ತದೆ. ವೇಗವಾಗಿ ಬದಲಾಗುತ್ತಿರುವ ಫ್ಯಾಶನ್‌ಗೆ ತಕ್ಕಂತೆ ಕುಶಲಕರ್ಮಿಗಳು ಬದಲಾವಣೆ ಮಾಡಿಕೊಳ್ಳುವುದು ಕಷ್ಟಕರವಾದ ವಿಷಯ. ಕಚ್ಚಾವಸ್ತುಗಳು ಬೆಲೆಏರಿಕೆ ಹೊರದೇಶದ ವಸ್ತುಗಳ ಪೈಪೋಟಿಯನ್ನು ಕುಶಲಕರ್ಮಿಗಳು ಎದುರಿಸಬೇಕಾಗುತ್ತದೆ. ಮಾರುಕಟ್ಟೆಯಲ್ಲಿ ಗುಣಮಟ್ಟದ ಉತ್ಪಾದನೆ ಹಾಗು ಅಂದಚಂದದ ಪ್ಯಾಕೇಜಿಂಗ್ ಬೇಕಾಗುತ್ತದೆ. ಅದನ್ನು ಅಳವಡಿಸಿಕೊಳ್ಳಲು ಕುಶಲಕರ್ಮಿಗಳು ಹೆಚ್ಚಿನ ವೆಚ್ಚಭರಿಸುವುದು ಕಷ್ಟವಾಗಿದೆ. ತಜ್ಞವಿನ್ಯಾಸಕಾರರ ಸೇವೆಗೆ ಹೆಚ್ಚಿನ ಹಣ ತೆರುವುದು ಕುಶಲಕರ್ಮಿಗಳಿಂದ ಆಗದ ವಿಷಯ. ಹೆಚ್ಚಿನ ಯಂತ್ರೋಪಕರಣಗಳನ್ನು ಖರೀದಿಸುವಲ್ಲಿ ಕುಶಲಕರ್ಮಿಗಳು ಅಸಮರ್ಥರಾಗಿರುತ್ತಾರೆ.

## ಪರಿಹಾರೋಪಾಯಗಳು

ಸ್ವಸಹಾಯ ಗುಂಪಿನ ಮಹಿಳೆಯರ ಗುಂಪು ಚಟುವಟಿಕೆಗೆ ಫ್ಯಾಶನ್ ಆಭರಣ ತಯಾರಿಕೆ ಉತ್ತಮ ಆರ್ಥಿಕ ಚಟುವಟಿಕೆಯಾಗಿದೆ. ತಮ್ಮ ಪರಿಸರದಲ್ಲಿ ಲಭ್ಯವಿರುವ ಕಚ್ಚಾವಸ್ತುಗಳನ್ನು ಉಪಯೋಗಿಸಿ ಜನರ ಭಾವನೆ, ಅನಿಸಿಕೆ, ಬೇಕುಬೇಡ, ಸಂದರ್ಭ, ಹಬ್ಬಹರಿದಿನ, ಬೆಲೆ, ವೈವಿಧ್ಯತೆ ಮುಂತಾದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಉತ್ಪಾದನೆ ಮಾಡಬೇಕು. ಸ್ಪರ್ಧೆಯನ್ನು ಎದುರಿಸಲು ಬೆಲೆ ತುಂಬಾ ಆದ್ಯತೆಯ ವಿಷಯವಾಗಿದೆ. ಬೆಲೆಯೊಂದಿಗೆ ಗುಣಮಟ್ಟ ಹಾಗು ಉತ್ತಮ ಸೇವೆಕೂಡಾ ಅತ್ಯವಶ್ಯಕ. ತಯಾರಿಕೆಯ ವೆಚ್ಚ, ತೆರಿಗೆ, ಪ್ಯಾಕಿಂಗ್ ಖರ್ಚು, ಜಾಹಿರಾತು ವೆಚ್ಚ ಮುಂತಾದವನ್ನು ಗಮನದಲ್ಲಿಟ್ಟುಕೊಂಡು ಜನರಿಗೆ



ಒಪ್ಪಿಗೆಯಾಗುವ ಬೆಲೆಯನ್ನು ನಿಗದಿಪಡಿಸಬೇಕು. ಬದಲಾಗು ತ್ತಿರುವ ಫ್ಯಾಶನ್‌ಕಡೆಗೆ ಗಮನವಿಡಬೇಕು. ಕೌಶಲವರ್ಧನೆ ಮಾಡಿಕೊಳ್ಳಬೇಕು. ಉತ್ತಮ ತಾಂತ್ರಿಕ ತರಬೇತಿಯನ್ನು ಹೆಸರುವಾಸಿ ಸಂಸ್ಥೆಗಳಿಂದ ಪಡೆಯಬೇಕು. ಕುಶಲಕರ್ಮಿಗಳ ಅನುಕೂಲಕ್ಕಾಗಿ ಒಂದು, ಮೂರು, ಒಂಬತ್ತು ತಿಂಗಳುಗಳ ಆಭರಣ ತಯಾರಿಕೆ, ವಿನ್ಯಾಸ, ತಾಂತ್ರಿಕತೆಯಲ್ಲಿ ಜೆ.ಎಸ್.ಎಸ್. ಅಂಗವಿಕಲರ ಪಾಲಿಟೆಕ್ನಿಕ್ ಸಂಸ್ಥೆ, ಮೈಸೂರು ಶಿಷ್ಯವೇತನ ನೀಡಿ ಕರಕುಶಲ ಆಯುಕ್ತರ ಸಹಕಾರದಲ್ಲಿ ತರಬೇತಿ ನೀಡುತ್ತಿದೆ. ಈ ಯೋಜನೆಯ ಲಾಭ ಪಡೆದುಕೊಂಡು ಕುಶಲಕರ್ಮಿಗಳು ಹೆಚ್ಚಿನ ಕೌಶಲಹೊಂದಿ ಹೆಚ್ಚು ಉತ್ಪಾದನೆ ಮಾಡುತ್ತಿದ್ದಾರೆ. ಬದಲಾಗುತ್ತಿರುವ ವಿನ್ಯಾಸಗಳ ಕಡೆಗೆ ಹೆಚ್ಚುಗಮನ ಹರಿಸಬೇಕು. ಕುಶಲಕರ್ಮಿಗಳು ಉದ್ಯಮಶೀಲತಾ ತರಬೇತಿ ಪಡೆದು ತಮ್ಮಲ್ಲಿ ಹುದುಗಿರುವ ಅದಮ್ಯ ಶಕ್ತಿಯ ಉತ್ತಮ ಬಳಕೆಮಾಡಿ ಕೊಳ್ಳಬೇಕು. ವಿನ್ಯಾಸ ಸಹಾಯಕ್ಕಾಗಿ ಬೆಂಗಳೂರಿನ ಪ್ರಾಂತೀಯ ವಿನ್ಯಾಸ ಕೇಂದ್ರವನ್ನೂ ಸಹ ಸಂಪರ್ಕಿಸಬಹುದಾಗಿದೆ.

## ಉಪಸಂಹಾರ

ಫ್ಯಾಶನ್ ಆಭರಣ ಮುಂಬರುವ ದಿನಗಳಲ್ಲಿ ಉತ್ತಮ ಮಾರುಕಟ್ಟೆ ಒದಗಿಸುವ ಕ್ಷೇತ್ರವಾಗಿ ಬೆಳೆಯಲಿದೆ. ಕೇಂದ್ರ, ರಾಜ್ಯ ಸರಕಾರಿ ಸಂಸ್ಥೆಗಳ ಹಾಗು ಇನ್ನಿತರ ಸಂಸ್ಥೆಗಳ ನೆರವು ಪಡೆದು ಕೌಶಲ ಹೆಚ್ಚಿಸಿಕೊಂಡು ಗುಣಮಟ್ಟದ ಆಭರಣ ತಯಾರಿಕೆಯಲ್ಲಿ ತೊಡಗಿಸಿಕೊಂಡರೆ ಹೆಚ್ಚು ಫಲಪ್ರದ ವಾಗುವುದರಲ್ಲಿ ಸಂಶಯವಿಲ್ಲ.

❑

# ಕರ್ನಾಟಕ ಸರ್ಕಾರ

ಕ್ರ. ಸಂ. : ಗ್ರಾಅಪ/338/ಗ್ರಾಪಂಕಾ/2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 14-12-2010

## ಸುತ್ತೋಲೆ

**ವಿಷಯ** : ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಒಂದು ಗ್ರಾಮ ಪಂಚಾಯತಿಯಿಂದ ಮತ್ತೊಂದು ಗ್ರಾಮ ಪಂಚಾಯತಿಗೆ ನಿಯೋಜನೆ / ಅನ್ಯ ಕಾರ್ಯನಿಮಿತ್ತದ ಆಧಾರದ ಮೇಲೆ ನೇಮಿಸುತ್ತಿರುವ ಬಗ್ಗೆ.

**ಉಲ್ಲೇಖ** : ಸುತ್ತೋಲೆ ಸಂಖ್ಯೆ : ಗ್ರಾಅಪ/395/ಗ್ರಾಪಂಕಾ/2008 ದಿನಾಂಕ : 21-11-2008.

* * *

ರಾಜ್ಯದಲ್ಲಿನ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಒಂದು ಗ್ರಾಮ ಪಂಚಾಯತಿಯಿಂದ ಮತ್ತೊಂದು ಗ್ರಾಮ ಪಂಚಾಯತಿಗೆ ನಿಯೋಜನೆ / ಅನ್ಯ ಕಾರ್ಯನಿಮಿತ್ತದ ಆಧಾರದ ಮೇಲೆ ನೇಮಿಸದಿರುವಂತೆ ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು.

ಆದಾಗ್ಯೂ ಸಹ, ಹಲವಾರು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರದ ವರ್ಗಾವಣಾ ನೀತಿ ಹಾಗೂ ಸುತ್ತೋಲೆಯಲ್ಲಿನ ಸೂಚನೆಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ, ಮಾನ್ಯ ಮುಖ್ಯಮಂತ್ರಿಯವರ ಪೂರ್ವಾನುಮೋದನೆ ಪಡೆಯದೆ, ತಮ್ಮ ಅಧಿಕಾರ ವ್ಯಾಪ್ತಿ ಮೀರಿ ತಮ್ಮ ಮನಬಂದಂತೆ ನಿಯೋಜನೆ ಹೆಸರಿನಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸರ್ಕಾರದ ವರ್ಗಾವಣಾ ನೀತಿಯ ಅನುಸಾರ ಸಾಮಾನ್ಯ ವರ್ಗಾವಣೆ ಸಂದರ್ಭದಲ್ಲಿ ಮಾತ್ರ ಗ್ರೂಪ್-ಸಿ ವರ್ಗದ ನೌಕರರನ್ನು ಆ ವೃಂದದ ಶೇಕಡಾ 3 ಕ್ಕೆ ಮೀರದಂತೆ ವರ್ಗಾವಣೆ ಮಾಡಲು ನೇಮಕಾತಿ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ. ಸಾಮಾನ್ಯ ವರ್ಗಾವಣೆ ಅವಧಿ ಮುಗಿದ ನಂತರ ಯಾವುದೇ ವರ್ಗಾವಣೆ ಮಾಡಲು ಮಾನ್ಯ ಮುಖ್ಯಮಂತ್ರಿಯವರ ಪೂರ್ವಾನುಮೋದನೆ ಪಡೆಯುವುದು ಅತ್ಯವಶ್ಯಕ.

ಆದರೆ, ಜಿಲ್ಲಾ ಪಂಚಾಯತಿ ಹಂತದಲ್ಲಿ ಮಾಡುತ್ತಿರುವ ನಿಯೋಜನೆಗಳಲ್ಲಿ ವಾಸ್ತವವಾಗಿ ಸದರಿ ನೌಕರನು ತನ್ನ ಹಿಂದಿನ ಹುದ್ದೆಯಲ್ಲಿಯೇ ವೇತನ ಪಡೆದು ನಿಯೋಜಿಸಲ್ಪಟ್ಟ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾನೆ.

ಇಂತಹ ವ್ಯವಸ್ಥೆ ವರ್ಗಾವಣೆಗೆ ಪರ್ಯಾಯವಾಗಿ ಜಿಲ್ಲಾ ಪಂಚಾಯತಿಗಳು ಹುಡುಕಿಕೊಂಡಿರುವ ಮಾರ್ಗವಾಗಿರುತ್ತದೆ. ಇದು ಸಾಮಾನ್ಯವಾಗಿ ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲೂ ಆಂತರಿಕವಾಗಿ ನಡೆಯುತ್ತಿರುವ ನಿಯಮ ವಿರುದ್ದವಾದ ಒಂದು ವ್ಯವಸ್ಥೆಯಾಗಿದ್ದು, ಇತ್ತೀಚೆಗೆ ನೇಮಕಗೊಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಸಹ ಈ ರೀತಿ ನಿಯೋಜಿಸಿರುವುದು ಕಂಡುಬಂದಿರುತ್ತದೆ.

ನಿಯೋಜನಾ ಪ್ರಕ್ರಿಯೆಯೂ ಸಹ ಪರೋಕ್ಷವಾಗಿ ವರ್ಗಾವಣಾ ಕ್ರಮವೇ ಆಗಿದ್ದು, ಈ ರೀತಿ ಮಾಡಿರುವ ನಿಯೋಜನೆಗಳು ನಿಯಮಬಾಹಿರ ಹಾಗೂ ಅಧಿಕಾರ ದುರುಪಯೋಗದ ಕ್ರಮವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಯಾವುದೇ ಜಿಲ್ಲಾ ಪಂಚಾಯತಿಗಳಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ನಿಯೋಜನೆ ಹಾಗೂ ಅನ್ಯ ಕಾರ್ಯನಿಮಿತ್ತ ನೇಮಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಹಾಗೂ ಈ ರೀತಿ ನಿಯೋಜನೆ / ಅನ್ಯ ಕಾರ್ಯನಿಮಿತ್ತ ಆಧಾರದ ಮೇಲೆ ಮಾಡಿರುವ ನೇಮಕಾತಿಗಳನ್ನು ಕೂಡಲೇ ರದ್ದುಪಡಿಸಿ, ಸದರಿ ನೌಕರರನ್ನು ಅವರು ವಾಸ್ತವವಾಗಿ ಸ್ಥಳನಿಯುಕ್ತಿಗೊಂಡು ವೇತನ ಪಡೆಯುತ್ತಿರುವ ಗ್ರಾಮ ಪಂಚಾಯತಿಗಳಿಗೆ ಹಿಂದಿರುಗಿಸಲು ಕ್ರಮ ವಹಿಸತಕ್ಕದ್ದೆಂದು ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

ಈ ಸೂಚನೆಗಳನ್ನು ಪಾಲಿಸದಿರುವ ಹಾಗೂ ಇನ್ನು ಮುಂದೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ನಿಯೋಜನೆ / ಅನ್ಯ ಕಾರ್ಯನಿಮಿತ್ತ ಆಧಾರದ ಮೇಲೆ ನೇಮಿಸುವ ಪ್ರಕರಣಗಳು ಮರುಕಳಿಸಿದಲ್ಲಿ ಅದನ್ನು ತೀವ್ರವಾಗಿ ಪರಿಗಣಿಸಲಾಗುವುದು ಹಾಗೂ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು.

(ಪಿ. ರವಿ ಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಕಣವನ್ನು (Thresh yard) ನಿರ್ಮಿಸುವುದು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ಆಸ್ತಿಗಳಿಗೆ ರಕ್ಷಣಾ ಗೋಡೆಯನ್ನು ನಿರ್ಮಿಸುವ ಬಗ್ಗೆ.

* * *

## ಪ್ರಸ್ತಾವನೆ :

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ನೋಂದಾಯಿತ ಕೆಲಸಗಾರರ ಕುಟುಂಬಗಳ ಬೇಡಿಕೆಗೆ ಅನುಗುಣವಾಗಿ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ನೀಡುವುದು ಮತ್ತು ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲವನ್ನು ಬಲಪಡಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯಡಿ ಆದ್ಯತೆಯ ಮೇಲೆ ಒಂಬತ್ತು ವಿಧದ ಪ್ರವರ್ಗದ ಕಾಮಗಾರಿಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿರುತ್ತದೆ. ಸದರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ರೈತರ ಅನುಕೂಲವಾಗುವಂತೆ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಒಂದು ಕಣವನ್ನು ನಿರ್ಮಿಸಲು ಹೆಚ್ಚಿನ ಬೇಡಿಕೆಯಿದ್ದು, ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಲಭ್ಯವಿರುವ ಸರ್ಕಾರದ ಜಾಗವನ್ನು ಬಳಸಿಕೊಂಡು 150–200 ಅಡಿ ವ್ಯಾಸವುಳ್ಳ ಒಂದು ಕಣವನ್ನು ನಿರ್ಮಿಸಲು ತೀರ್ಮಾನಿಸಲಾಗಿರುತ್ತದೆ. ಸರ್ಕಾರಿ ಅನುದಾನಿತ ಶಾಲೆಗಳಿಗೆ ರಕ್ಷಣ ಗೋಡೆಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಸದರಿ ಕಾಮಗಾರಿಗಳನ್ನು ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಮೇಲೆ ಸೂಚಿಸಲಾದ ಕಣವನ್ನು ನಿರ್ಮಿಸುವ ಕಾಮಗಾರಿಯನ್ನು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ಆಸ್ತಿಗಳಿಗೆ ರಕ್ಷಣಾ ಗೋಡೆಯನ್ನು ನಿರ್ಮಿಸುವ ಕಾಮಗಾರಿಯನ್ನು ಯೋಜನೆಯಡಿ ತಿಳಿಸಲಾದ ಆದ್ಯತಾ ಕಾಮಗಾರಿಗಳ ಪ್ರವರ್ಗದಡಿ ತೆಗೆದುಕೊಳ್ಳಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 110 ಉಖಾಯೋ 2009 ಬೆಂಗಳೂರು ದಿನಾಂಕ : 03.12.2010

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈಗಾಗಲೇ ನಿಗದಿಪಡಿಸಲಾದ ಕಾಮಗಾರಿಗಳ ಜೊತೆಗೆ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ. ಸದರಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಆದೇಶಿಸಿದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಅನುಷ್ಠಾನಗೊಳಿಸಬೇಕಾಗಿದೆ.

1. ರೈತರಿಗೆ ಅನುಕೂಲವಾಗಲು ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಲಭ್ಯವಿರುವ ಸರ್ಕಾರಿ ಜಾಗವನ್ನು ಬಳಸಿಕೊಂಡು ಸುಮಾರು 150–200 ಅಡಿ ವ್ಯಾಸವುಳ್ಳ ಅಥವಾ ಆ ಗ್ರಾಮದ ಕೃಷಿ ಚಟುವಟಿಕೆಗಳಿಗೆ ಅಗತ್ಯವೆನಿಸಬಹುದಾದ ಅಳತೆಯುಳ್ಳ ಒಂದು ಕಣವನ್ನು ನಿರ್ಮಿಸಿ ಅನುಷ್ಠಾನಗೊಳಿಸುವುದು. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವಾಗ ಯೋಜನೆಯಡಿ ನಿಗಧಿಪಡಿಸಲಾದ ಕೂಲಿ ಮತ್ತು ಸಾಮಗ್ರಿಗಳ 60:40ರ ಅನುಪಾತವನ್ನು ಕಡ್ಡಾಯವಾಗಿ ಪಾಲನೆ ಮಾಡುವುದು.

2. ಗ್ರಾಮ ಪಂಚಾಯಿತಿಗಳಲ್ಲಿ ಇರುವ ಸರ್ಕಾರಿ ಅನುದಾನಿತ ಶಾಲೆಗಳಿಗೆ ರಕ್ಷಣಾ ಗೋಡೆಗಳನ್ನು ನಿರ್ಮಿಸುವುದು ಮತ್ತು ಕಾಮಗಾರಿಯನ್ನು ನಿರ್ವಹಿಸುವಾಗ ಕೂಲಿ ಮತ್ತು ಸಾಮಗ್ರಿಗಳ 60:40ರ ಅನುಪಾತವನ್ನು ಕಡ್ಡಾಯವಾಗಿ ಪಾಲನೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಕ್ರ. ಸಂ. : ಗ್ರಾಅಪ 175 ಉಖಾಯೋ 2010

ಕರ್ನಾಟಕ ಸರ್ಕಾರದ ಸಚಿವಾಲಯ–2
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 02–12–2010

ಇಂದ :

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಹಣಾಧಿಕಾರಿಗಳು.

ಮಾನ್ಯರೇ,

**ವಿಷಯ** : ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 2010–11ನೇ ಸಾಲಿನಲ್ಲಿ ಬಿಡುಗಡೆಯದ ಅನುದಾನದ ವರ್ಗಾವಣೆ ಸಂಬಂಧಿಸಿದಂತೆ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ–IFSC Code ಇತ್ಯಾದಿಗಳ ಬಗ್ಗೆ ಸರಿಯಾದ ಮಾಹಿತಿ ನೀಡುವ ಬಗ್ಗೆ.

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ,ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ ನಿಯಮಾವಳಿಗಳು 2008ರ ನಿಯಮ 3ರ ಆಡಿಯಲ್ಲಿ ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಲಾಗಿದ್ದು ಅದರಂತೆ ಯೋಜನಾ ಅನುಷ್ಠಾನದ ಪ್ರಗತಿಯನ್ನು ಕಾಲಕಾಲಕ್ಕೆ ಸಮೀಕ್ಷಿಸಿ ಆಯಾ ಜಿಲ್ಲೆಯ ಬೇಡಿಕೆಗೆ ಅನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಆದರೆ ಬಹುತೇಕ ಜಿಲ್ಲೆಯ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನಾ ಅನುಷ್ಠಾನಕ್ಕಾಗಿ ಪ್ರಾರಂಭಿಸಿದ ಬ್ಯಾಂಕ್ ಉಳಿತಾಯ ಖಾತೆಗೆ ಸಂಬಂಧಿಸಿದಂತೆ ಸರಿಯಾದ ಖಾತೆ ಸಂಖ್ಯೆ ನೀಡದಿರುವುದು, ಬ್ಯಾಂಕ್ ಖಾತೆ ಅಸ್ತಿತ್ವದಲ್ಲಿ ಇಲ್ಲದಿರುವುದು, ಬ್ಯಾಂಕ್ ಖಾತೆ ಮುಕ್ತಾಯವಾಗಿರುವುದು, IFSC Code ತಪ್ಪಾಗಿ ನೀಡಿರುವುದು ಇತ್ಯಾದಿ ಕಾರಣಗಳಿಂದಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವು ಸಂಬಂಧ ಪಟ್ಟ ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಬ್ಯಾಂಕ್ ಉಳಿತಾಯ ಖಾತೆಗೆ ವರ್ಗಾವಣೆಯಾಗದೆ ಸರ್ಕಾರಕ್ಕೆ ವಾಪಸ್ ಬರುತ್ತಿರುದನ್ನು ಗಮನಿಸಲಾಗಿದೆ. ಇದರಿಂದ ಯೋಜನೆಯ ಉದ್ದೇಶವು ಸಫಲವಾಗುವುದಿಲ್ಲ. ಅಲ್ಲದೇ ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿಯು ಸಹ ತೊಂದರೆ ಉಂಟಾಗುತ್ತಿದೆ.

ಆದ್ದರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಈ ಪತ್ರ ತಲುಪಿದ ಕೂಡಲೇ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ವೈಯಕ್ತಿಕ ಗಮನ ಹರಿಸಿ ತಮ್ಮ ಹಾಗೂ ತಮ್ಮ ವ್ಯಾಪ್ತಿಯಡಿ ಬರುವ ಎಲ್ಲಾ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಪ್ರತ್ಯೇಕವಾಗಿ ಪ್ರಾರಂಭಿಸಿರುವ ಬ್ಯಾಂಕ್ ಉಳಿತಾಯ ಖಾತೆಯ ಮಾಹಿತಿಗಳನ್ನು (IFSC Code, ಇತ್ಯಾದಿಗಳು) ಪರಿಶೀಲಿಸಿ ಸರಿಯಾದ ಬ್ಯಾಂಕ್ ಉಳಿತಾಯ ಖಾತೆಯ ವಿವರಗಳನ್ನು ಒಳಗೊಂಡ ವರದಿಯನ್ನು ಒಂದು ವಾರದೊಳಗೆ ತಪ್ಪದೆ ಸರ್ಕಾರಕ್ಕೆ Soft Copy ಯೊಂದಿಗೆ ಸಲ್ಲಿಸಲು ಸೂಚಿಸಿದೆ. ತಮ್ಮ ಪರಿಶೀಲನಾ ಸಮಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಒಂದಕ್ಕಿಂತ ಮೇಲ್ಪಟು ಬ್ಯಾಂಕ್ ಉಳಿತಾಯ ಖಾತೆಗಳಿರುವುದು ಕಂಡು ಬಂದಲ್ಲಿ, ತಮ್ಮ ಗಮನವನ್ನು 2008ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಪರಿಷ್ಕೃತ ಮಾರ್ಗ ಸೂಚಿಯ ನಿಯಮ 8.2.5 ರತ್ತ ಸೆಳೆಯುತ್ತಾ ಅದರಂತೆ ಗ್ರಾಮ ಪಂಚಾಯಿತಿಗಳು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಮಾತ್ರ ಯೊಜನೆಯ ಒಂದು ಉಳಿತಾಯ ಖಾತೆಯನ್ನು ಪ್ರಾರಂಭಿಸಬೇಕಾಗಿದ್ದು, ಇತರೆ ಬ್ಯಾಂಕುಗಳಲ್ಲಿ ಹೊಂದಿರುವ ಖಾತೆಯನ್ನು/ ಹೆಚ್ಚುವರಿಯಾಗಿ ಪ್ರಾರಂಭಿಸಿರುವ ಖಾತೆಯನ್ನು ಕಡ್ಡಾಯವಾಗಿ ಮುಕ್ತಾಯಗೊಳಿಸಲು ಕ್ರಮವಹಿಸುವುದು.

ಮೇಲಿನಂತೆ ಸೂಕ್ತ ಕ್ರಮ ವಹಿಸಿ ಯೋಜನೆಯ ಅನುಷ್ಠಾನಕ್ಕೆ ಪ್ರಾರಂಭಿಸಿರುವ ಬ್ಯಾಂಕ್ ಉಳಿತಾಯ ಖಾತೆಯ ವಿವರಗಳನ್ನುಸರ್ಕಾರಕ್ಕೆ ಸಲ್ಲಿಸಿದ ನಂತರ, **ನಿರ್ದೇಶಕರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯವರ ಪೂರ್ವಾನುಮತಿಯಿಲ್ಲದೆ,** ಮುಕ್ತಾಯಗೊಳಿಸಲು ಹಾಗೂ ಹೊಸ ಖಾತೆಗಳನ್ನು ಪ್ರಾರಂಭಿಸಲು ಅವಕಾಶವಿಲ್ಲವೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

(ಎನ್.ಎಸ್. ಪ್ರಸನ್ನಕುಮಾರ್)
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ
ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಡಿಯಲ್ಲಿ ಸಂಪೂರ್ಣ ನೈರ್ಮಲ್ಯ ಸಾಧಿಸಿದ ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹೆಚ್ಚುವರಿಯಾಗಿ ರಾಜ್ಯ ಪುರಸ್ಕಾರ ನೈಮಲ್ಯ ಪ್ರಶಸ್ತಿ ಪ್ರಧಾನ ಮಾಡುವ ಬಗ್ಗೆ.

**ಉಲ್ಲೇಖ** :
1. ಆದೇಶ ಸಂಖ್ಯೆ : ಗ್ರಾ.ಅ.ಪ./ಸಂಸ್ವಆ/67/2008 ದಿನಾಂಕ : 01.09.2009
2. ಕಡತ ಸಂಖ್ಯೆ : ಗ್ರಾ.ಅ.ಪ./ಸಂಸ್ವಆ/67/2008 (Part-2) ಟಿಪ್ಪಣಿ ಸಂಖ್ಯೆ : 56, ದಿನಾಂಕ : 30.11.2010

* * *

## ಪ್ರಸ್ತಾವನೆ :

ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2009–10ನೇ ಸಾಲಿಗೆ ಸಂಪೂರ್ಣವಾಗಿ ನೈರ್ಮಲ್ಯ ಸಾಧಿಸಿ ಸುಸ್ಥಿರತೆ ಕಾಪಾಡಿದ ಗ್ರಾಮ ಪಂಚಾಯ್ತಿ, ತಾಲ್ಲೂಕು, ಜಿಲ್ಲಾ ಪಂಚಾಯಿತಿಗಳಿಗೆ ನೈರ್ಮಲ್ಯ ರಾಜ್ಯ ಪುರಸ್ಕಾರವನ್ನು ನೀಡಲು ಉಲ್ಲೇಖಿತ(1)ರಲ್ಲಿ ಆದೇಶವನ್ನು ಹೊರಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ರಾಜ್ಯವನ್ನು 2012ರೊಳಗೆ ಬಯಲು ಮಲ ವಿಸರ್ಜನಾ ಮುಕ್ತ ರಾಜ್ಯವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಇಡಿಯಾಗಿ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಸಂಪೂರ್ಣ ನೈರ್ಮಲ್ಯ ಸಾಧನೆಯನ್ನು ತೀವ್ರಗೊಳಿಸುವುದು ಅತ್ಯಂತ ಮುಖ್ಯವಾಗಿದ್ದು ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿ ಪ್ರಶಸ್ತಿಗಳನ್ನು ಒಂದಕ್ಕಿಂತ ಹೆಚ್ಚು ನೀಡುವುದು ಅವಶ್ಯವಿದ್ದು, ಇದರಿಂದಾಗಿ ಮುಂದಿನ ವರ್ಷಗಳಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್ ಸಂಸ್ಥೆಗಳಿಂದ ಸ್ವಚ್ಛತೆಯ ಸಾಧನೆಯಲ್ಲಿ ಹೆಚ್ಚಿನ ಪ್ರಗತಿಯನ್ನು ನಿರೀಕ್ಷಿಸಬಹುದಾಗಿರುವುದರಿಂದ ಈ ಕೆಳಗಿನಂತೆ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ : ಗ್ರಾ.ಅ.ಪ./ ಸಂಸ್ವಆ / 67/ 2008 ದಿನಾಂಕ : 30.11.2010

ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ರಾಜ್ಯಮಟ್ಟದ ಅತ್ಯುತ್ತಮ ತಾಲ್ಲೂಕು ಪಂಚಾಯ್ತಿ ಪ್ರಶಸ್ತಿಯನ್ನು ಒಂದು ಪ್ರಶಸ್ತಿಗೆ ಬದಲಾಗಿ ಪ್ರಥಮ ಪ್ರಶಸ್ತಿ ರೂ. 20 ಲಕ್ಷ, ದ್ವಿತೀಯ ಪ್ರಶಸ್ತಿ ರೂ. 15 ಲಕ್ಷ ಹಾಗೂ ತೃತೀಯ ಪ್ರಶಸ್ತಿ ರೂ. 10 ಲಕ್ಷಗಳನ್ನಾಗಿ ಮತ್ತು ಜಿಲ್ಲಾ ಪಂಚಾಯ್ತಿ ಪ್ರಶಸ್ತಿಯನ್ನು ಪ್ರಥಮ ಪ್ರಶಸ್ತಿ ರೂ. 30 ಲಕ್ಷ ಹಾಗೂ ದ್ವಿತೀಯ ಪ್ರಶಸ್ತಿ ರೂ. 20 ಲಕ್ಷಗಳನ್ನು ನೀಡಲು ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ॥ ಪಿ. ಬೋರೇಗೌಡ)
ನಿರ್ದೇಶಕರು, ಕಗ್ರಾನೀಸನೈ ಸಂಸ್ಥೆ, ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಎಸ್‌ಜಿಎಸ್‌ವೈ ಗೆ ರಾಜ್ಯದ ಪಾಲಿನ 2009-10 ನೇ ಸಾಲಿನ ಉಳಿಕೆ ಅನುದಾನ ಹಾಗೂ 2010-11 ನೇ ಸಾಲಿನ ಒಂದನೇ ಕಂತಿನ ಉಳಿಕೆ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ** :
1. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2010 ಎಸ್‌ಜಿಎಸ್‌ವೈ-I (9) ದಿನಾಂಕ : 04-05-2010.
2. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2010 ಎಸ್‌ಜಿಎಸ್‌ವೈ-I (38) ದಿನಾಂಕ : 18-06-2010.
3. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ 2009, ಬೆಂಗಳೂರು, ದಿನಾಂಕ : 22-07-2010.
4. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 25 ಎಸ್‌ಜೆವೈ 2010, ಬೆಂಗಳೂರು, ದಿನಾಂಕ : 04-08-2010.
5. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 56 ಬಿಆರ್‌ಎಸ್ 2010 ದಿನಾಂಕ : 29-09-2010.

* * *

## ಪ್ರಸ್ತಾವನೆ :

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಯಡಿ 2009-10 ನೇ ಸಾಲಿಗೆ ರಾಜ್ಯದ 29 ಜಿಲ್ಲಾ ಪಂಚಾಯತಿಗಳಿಗೆ ಒಟ್ಟಾರೆಯಾಗಿ ರೂ. 86,66,22,000 ಗಳನ್ನು ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ರೂ. 28,88,75,000 ಬಿಡುಗಡೆ ಮಾಡಬೇಕಿತ್ತು. ಯೋಜನೆಯ ಮಾರ್ಗಸೂಚಿಯಂತೆ ಅನುದಾನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75 : 25 ಅನುಪಾತದಲ್ಲಿ ಭರಿಸಬೇಕಾಗಿದೆ. ಆದರೆ 2009-10 ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಕೆಲವೊಂದು ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿದ್ದುದರಿಂದ, ಆಯವ್ಯಯದ ಲಭ್ಯತೆಗೆ ಅನುಸಾರವಾಗಿ ಒಟ್ಟು ರೂ. 22,30,45,000 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿತ್ತು. 2009-10 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಾಗಿದ್ದ ರಾಜ್ಯದ ಪಾಲಿನ ಉಳಿಕೆ ಅನುದಾನ ರೂ. 6,58,27,000 ಗಳನ್ನು 2010-11 ನೇ ಸಾಲಿನಲ್ಲಿ ರಾಜ್ಯದ ಪಾಲಿನ ಅನುದಾನಕ್ಕೆ ರಾಜ್ಯದ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ ರೂ. 24,05,12,000 ದಿಂದ ಭರಿಸಿ ಬಿಡುಗಡೆ ಮಾಡಬೇಕಾಗಿತ್ತು ಆದರೆ ಬೆಂಗಳೂರು ಗ್ರಾಮಾಂತರ ಕೋಲಾರ ಮತ್ತು ರಾಮನಗರ ಜಿಲ್ಲಾ ಪಂಚಾಯತಿಗಳಿಗೆ 2010-11 ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದಲ್ಲಿಯೂ ಕೊರತೆಯಿದ್ದುದರಿಂದ, ಜಿಲ್ಲಾ ಪಂಚಾಯತಿಗಳ ಅನುದಾನದ ಲಭ್ಯತೆ ಅನುಸಾರ ರೂ. 6,31,67,000 ಮಾತ್ರ ಓದಲಾಗಿದೆ (3) ರಲ್ಲಿ ಬಿಡುಗಡೆ ಮಾಡಲಾಗಿತ್ತು. ಇದಲ್ಲದೆ, 2010-11ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಓದಲಾಗಿದೆ (1) ಮತ್ತು (2) ರಲ್ಲಿ ಒಂದನೇ ಕಂತಿನ ಅನುದಾನ ರೂ. 47,41,09,000 ಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ಮೊದಲನೇ ಕಂತಿನ ಅನುದಾನ ರೂ. 15,80,36,000 ಬಿಡುಗಡೆ

ಮಾಡಬೇಕಾಗಿತ್ತು. ಆದರೆ 2010-11 ನೇ ಸಾಲಿನ ರಾಜ್ಯದ ಆಯುವ್ಯಯುದಲ್ಲಿ ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಕೋಲಾರ, ರಾಯುಚೂರು ಮತ್ತು ರಾಮನಗರ ಜಿಲ್ಲಾ ಪಂಚಾಯುತಿಗಳಿಗೆ ನಿಗದಿ ಪಡಿಸಿದ ಅನುದಾನದ ಕೊರತೆಯಿದ್ದುದರಿಂದ ಜಿಲ್ಲೆಗಳಿಗೆ ಲಭ್ಯವಿರುವ ಅನುದಾನಕ್ಕನುಗುಣವಾಗಿ ರೂ. 13,47,19,000 ಗಳನ್ನು ಮಾತ್ರ ಓದಲಾಗಿದೆ (4) ರಲ್ಲಿ ಬಿಡುಗಡೆಗೊಳಿಸಲಾಗಿತ್ತು.

2010-11 ನೇ ಸಾಲಿಗೆ ಎಸ್‌ಜಿಎಸ್‌ವೈ ಅನುಷ್ಠಾನಕ್ಕಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ರೂ. 10,00,00,000 ಹೆಚ್ಚುವರಿಯಾಗಿ ಹಂಚಿಕೆ ಮಾಡಿದೆ. ಆದುದರಿಂದ, 2009-10 ಹಾಗೂ 2010-11 ನೇ ಸಾಲಿನ ರಾಜ್ಯದ ಪಾಲಿನ ಉಳಿಕೆ ಅನುದಾನ ಬಿಡುಗಡೆ ಮಾಡಬೇಕಾಗಿದೆ.

2009-10 ನೇ ಸಾಲಿನ ಒಟ್ಟಾರೆ ಉಳಿಕೆ ಅನುದಾನ ರೂ. 26,60,000 ಅಂದರೆ, ಬೆಂಗಳೂರು ಗ್ರಾಮಾಂತರ ಪಂಚಾಯತಿಗೆ ರೂ. 2,77,000, ಕೋಲಾರ ಜಿಲ್ಲಾ ಪಂಚಾಯತಿಗೆ ರೂ. 4,52,000 ಮತ್ತು ರಾಮನಗರ ಜಿಲ್ಲಾ ಪಂಚಾಯತಿಗೆ ರೂ. 19,31,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ.

2010-11 ನೇ ಸಾಲಿನ ಒಂದನೇ ಕಂತಿನ ಒಟ್ಟಾರೆ ಉಳಿಕೆ ಅನುದಾನ ರೂ. 2, 33,19,000 ಅಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಗೆ ರೂ. 20,58,000, ಚಾಮರಾಜನಗರ ಜಿಲ್ಲಾ ಪಂಚಾಯುತಿಗೆ ರೂ. 57,14,000, ಚಿಕ್ಕಮಗಳೂರು ಜಿಲ್ಲಾ ಪಂಚಾಯುತಿಗೆ ರೂ. 19,25,000, ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯುತಿಗೆ ರೂ. 26,20,000, ಕೋಲಾರ ಜಿಲ್ಲಾ ಪಂಚಾಯುತಿಗೆ ರೂ. 45,91,000, ರಾಯಚೂರು ಜಿಲ್ಲಾ ಪಂಚಾಯತಿಗೆ ರೂ. 27,26,000 ಮತ್ತು ರಾಮನಗರ ಜಿಲ್ಲಾ ಪಂಚಾಯತಿಗೆ ರೂ. 36,85,000ಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಮೂರು ಜಿಲ್ಲಾ ಪಂಚಾಯತಿಗಳಿಗೆ 2009-10 ನೇ ಸಾಲಿನ ರಾಜ್ಯದ ಪಾಲಿನ ಒಟ್ಟು ಉಳಿಕೆ ಅನುದಾನ ರೂ. 26,60,000 ಗಳನ್ನು ಮತ್ತು ಏಳು ಜಿಲ್ಲಾ ಪಂಚಾಯತಿಗಳಿಗೆ 2010-11 ನೇ ಸಾಲಿನ ರಾಜ್ಯದ ಪಾಲಿನ ಒಂದನೇ ಕಂತಿನ ಒಟ್ಟು ಉಳಿಕೆ ಅನುದಾನ ರೂ. 2,33,19,000, ಒಟ್ಟಾರೆಯಾಗಿ ರೂ. 2,59,79,000 ಗಳನ್ನು 2010-11 ರ ಆಯುವ್ಯಯುದಲ್ಲಿ ಭರಿಸಿ ಬಿಡುಗಡೆ ಮಾಡಬೇಕಾಗಿದೆ ಆದುದರಿಂದ ಈ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 25 ಎಸ್‌ಜಿವೈ 2010, ಬೆಂಗಳೂರು, ದಿನಾಂಕ : 15–11–2010

ರಾಜ್ಯ ಸರ್ಕಾರವು, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಮೂರು ಜಿಲ್ಲಾ ಪಂಚಾಯತಿಗಳಿಗೆ 2009-10 ನೇ ಸಾಲಿನ ರಾಜ್ಯದ ಪಾಲಿನ ಒಟ್ಟು ಉಳಿಕೆ ಅನುದಾನ ರೂ. 26,60,000 ಗಳನ್ನು ಮತ್ತು ಏಳು ಜಿಲ್ಲಾ ಪಂಚಾಯತಿಗಳಿಗೆ 2010-11 ನೇ ಸಾಲಿನ ರಾಜ್ಯದ ಪಾಲಿನ ಒಂದನೇ ಕಂತಿನ ಒಟ್ಟು ಉಳಿಕೆ ಅನುದಾನ ರೂ. 2,33,19,000, ಒಟ್ಟಾರೆಯಾಗಿ ರೂ. 2,59,79,000 ಗಳನ್ನು (ರೂ. ಎರಡು ಕೋಟಿ ಐವತ್ತೊಂಬತ್ತು ಲಕ್ಷದ ಎಪ್ಪತ್ತೊಂಬತ್ತು ಸಾವಿರ ಮಾತ್ರ) 2010-11 ರ ಆಯವ್ಯಯದಿಂದ ಭರಿಸಿ, ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಿ ಬಿಡುಗಡೆ ಮಾಡಿದೆ.

### ಷರತ್ತುಗಳು :

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ "2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198-ಗ್ರಾಮ ಪಂಚಾಯತ್ ಗಳಿಗೆ ಸಹಾಯ-6-ಗ್ರಾಮ ಪಂಚಾಯತ್ ಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2010-2011 ನೇ (2501-01-198-6-01)" (ಲಿಂಕ್ ಕೋಡ್ 2501-01-800-0-07) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ 14-07-2005 ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 14 ಎಸ್‌ಜೆವೈ 2007 ದಿನಾಂಕ 18-04-2007 ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.


2010-11 ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ onlineಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ : ಗ್ರಾಅಪ 223 ಪಿಬಿಎಸ್ 2010 ದಿನಾಂಕ 09-11-2010 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,




(ಡಾ. ಎಂ.ಆರ್. ಏಕಾಂತಪ್ಪ)
ನಿರ್ದೇಶಕರು (ಸ್ವಉಕಾ) (ಪ್ರ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

## ಅನುಬಂಧ

### ಸರ್ಕಾರದ ಆದೇಶದ ಸಂಖ್ಯೆ : ಗ್ರಾಅಪ 25 ಎಸ್‌ಜಿವೈ 2010, ಬೆಂಗಳೂರು, ದಿನಾಂಕ : 15–11–2010

(ರೂ.ಗಳಲ್ಲಿ)

| ಕ್ರ ಸಂ | ಜಿಲ್ಲಾ ಪಂಚಾಯತಿಯ ಹೆಸರು | ಜಿ.ಪಂ. ಕೋಡ್ | ಡಿ.ಡಿ.ಓ ಕೋಡ್ | 2010-11 ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಜಿಲ್ಲೆಗೆ ನಿಗದಿ ಪಡಿಸಿದ ಒಟ್ಟು ಅನುದಾನ (ಮೂಲ + ಹೆಚ್ಚುವರಿ) | ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ 2009-10 ನೇ ಸಾಲಿನ ಉಳಿಕೆ ಅನುದಾನ | ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ 2010-11 ನೇ ಸಾಲಿನ ಒಂದನೇ ಉಳಿಕೆ ಅನುದಾನ | ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿರುವ ಒಟ್ಟು ಅನುದಾನ (7+8) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಬೆಂಗಳೂರು (ಗ್ರಾ) | 402 | 0300ZZ8001 | 66,56,000 | 2,77,000 | 20,58,000 | 23,35,000 |
| 2 | ಚಾಮರಾಜನಗರ | 456 | 1000ZZ0001 | 2,30,13,000 | 0 | 57,14,000 | 57,14,000 |
| 3 | ಚಿಕ್ಕಮಗಳೂರು | 408 | 1800ZZ0017 | 1,19,00,000 | 0 | 19,25,000 | 19,25,000 |
| 4 | ಚಿಕ್ಕಬಳ್ಳಾಪುರ | 453 | 0600ZZ0001 | 1,07,93,000 | 0 | 26,20,000 | 26,20,000 |
| 5 | ಕೋಲಾರ | 404 | 0700ZZ8002 | 1,41,96,000 | 4,52,000 | 45,91,000 | 50,43,000 |
| 6 | ರಾಯಚೂರು | 420 | 3600ZZ0001 | 2,06,67,000 | 0 | 27,26,000 | 27,26,000 |
| 7 | ರಾಮನಗರ | 452 | 0400ZZ0001 | 1,15,64,000 | 19,31,000 | 36,85,000 | 56,16,000 |
| | ಒಟ್ಟು | | | **9,87,89,000** | **26,60,000** | **2,33,19,000** | **2,59,79,000** |



(ಡಾ. ಎಂ.ಆರ್. ಏಕಾಂತಪ್ಪ)

ನಿರ್ದೇಶಕರು (ಸ್ವಉಕಾ) (ಪ್ರ) ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# 2011

## ಜುಲೈ

| | | | | | |
|---|---|---|---|---|---|
| ಭಾನು | 31 | 3 | 10 | 17 | 24 |
| ಸೋಮ | | 4 | 11 | 18 | 25 |
| ಮಂಗಳ | | 5 | 12 | 19 | 26 |
| ಬುಧ | | 6 | 13 | 20 | 27 |
| ಗುರು | | 7 | 14 | 21 | 28 |
| ಶುಕ್ರ | 1 | 8 | 15 | 22 | 29 |
| ಶನಿ | 2 | 9 | 16 | 23 | 30 |

## ಆಗಸ್ಟ್

| | | | | | |
|---|---|---|---|---|---|
| ಭಾನು | | 7 | 14 | 21 | 28 |
| ಸೋಮ | 1 | 8 | 15 ಸ್ವಾತಂತ್ರ್ಯ ದಿ. | 22 | 29 |
| ಮಂಗಳ | 2 | 9 | 16 | 23 | 30 |
| ಬುಧ | 3 | 10 | 17 | 24 | 31 ರಂಜಾನ್ |
| ಗುರು | 4 | 11 | 18 | 25 | |
| ಶುಕ್ರ | 5 | 12 | 19 | 26 | |
| ಶನಿ | 6 | 13 | 20 | 27 | |

## ಸೆಪ್ಟೆಂಬರ್

| | | | | | |
|---|---|---|---|---|---|
| ಭಾನು | | 4 | 11 | 18 | 25 |
| ಸೋಮ | | 5 | 12 | 19 | 26 |
| ಮಂಗಳ | | 6 | 13 | 20 | 27 ಮಹಾಲಯ ಅಮಾವಾಸ್ಯೆ |
| ಬುಧ | | 7 | 14 | 21 | 28 |
| ಗುರು | 1 ಗಣೇಶ ಚತುರ್ಥಿ | 8 | 15 | 22 | 29 |
| ಶುಕ್ರ | 2 | 9 | 16 | 23 | 30 |
| ಶನಿ | 3 | 10 | 17 | 24 | |

## ಅಕ್ಟೋಬರ್

| | | | | | |
|---|---|---|---|---|---|
| ಭಾನು | 30 | 2 ಗಾಂಧಿ ಜಯಂತಿ | 9 | 16 | 23 |
| ಸೋಮ | 31 | 3 | 10 | 17 | 24 |
| ಮಂಗಳ | | 4 | 11 ವಾಲ್ಮೀಕಿ ಜಯಂತಿ | 18 | 25 ನರಕ ಚತುರ್ದಶಿ |
| ಬುಧ | | 5 ಆಯುಧ ಪೂಜೆ | 12 | 19 | 26 |
| ಗುರು | | 6 ವಿಜಯದಶಮಿ | 13 | 20 | 27 ಬಲಿಪಾಡ್ಯಮಿ |
| ಶುಕ್ರ | | 7 | 14 | 21 | 28 |
| ಶನಿ | 1 | 8 | 15 | 22 | 29 |

## ನವೆಂಬರ್

| | | | | | |
|---|---|---|---|---|---|
| ಭಾನು | | 6 | 13 | 20 | 27 |
| ಸೋಮ | | 7 ಬಕ್ರೀದ್ | 14 ಕನಕದಾಸರ ಜಯಂತಿ | 21 | 28 |
| ಮಂಗಳ | 1 ಕನ್ನಡ ರಾಜ್ಯೋತ್ಸವ | 8 | 15 | 22 | 29 |
| ಬುಧ | 2 | 9 | 16 | 23 | 30 |
| ಗುರು | 3 | 10 | 17 | 24 | |
| ಶುಕ್ರ | 4 | 11 | 18 | 25 | |
| ಶನಿ | 5 | 12 | 19 | 26 | |

## ಡಿಸೆಂಬರ್

| | | | | | |
|---|---|---|---|---|---|
| ಭಾನು | | 4 | 11 | 18 | 25 ಕ್ರಿಸ್‌ಮಸ್ |
| ಸೋಮ | | 5 | 12 | 19 | 26 |
| ಮಂಗಳ | | 6 ಮೊಹರಂ | 13 | 20 | 27 |
| ಬುಧ | | 7 | 14 | 21 | 28 |
| ಗುರು | 1 | 8 | 15 | 22 | 29 |
| ಶುಕ್ರ | 2 | 9 | 16 | 23 | 30 |
| ಶನಿ | 3 | 10 | 17 | 24 | 31 |

ಸಾರ್ವತ್ರಿಕ ರಜಾ ದಿನಗಳನ್ನು ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ




# KARNATAKA VIKASA : JANUARY, 2011

A Monthly Magazine of Rural Development and Panchayat Raj Department, Government of Karnataka

Regd. No. KA/BGGPO/2531/09-11. Licence to post "Without Prepayment" WPP-32

RNI. No. 28103, KAR, KAN-02190, Total No. of Pages 52. Despatch Date : 1st week of every month



ಬೆಲೆ : 5 ರೂಪಾಯಿಗಳು

Despatcher

OFFICE OF THE CHIEF EDITOR, KARNATAKA VIKASA

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

Printed at : GEETANJALI GRAPHICS

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346